ಸಂಪುಟ: 05 ಸಂಚಿಕೆ: 94 ಪುಟಗಳು: 08 ಮಂಗಳವಾರ 17 ಜೂನ್ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**

ನಮ್ಮ ಆಲೋಚನೆಗಳೇ ನಮ್ಮನ್ನು ರೂಪಿಸುತ್ತವೆ. ಆದ್ದರಿಂದ ಏನನ್ನು ಯೋಚಿಸುತ್ತಿರೋ ಅದರ ಬಗ್ಗೆ ಎಚ್ಚರದಿಂದಿರಿ.

-ಸ್ವಾಮಿ ಮಿವೇಕಾನಂದ

# ಉದಯ ವಾಹಿನಿ

UV ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಉತ್ತಮ ಆಡಳಿತ ನೀಡ್ಬೇಕಾದ್ರೆ ಜನಗಣತಿ ಆಗ್ಬೇಕು, ಬಿಜೆಪಿ ಸಮೀಕ್ಷೆಯೇ ಮಾಡಿಲ್ಲ

• ಉದಯವಾಹಿನಿ, ಬೆಂಗಳೂರು

ಉತ್ತಮ ಆಡಳಿತ ನೀಡಬೇಕೆಂದರೆ ಜನಗಣತಿ ಆಗಬೇಕಲ್ವಾ ಆದರೆ ಬಿಜೆಪಿ ಸಮೀಕ್ಷೆಯನ್ನೇ ನಡೆಸಿರಲಿಲ್ಲ ಎಂದು ಸಮಾಜ ಕಲ್ಯಾಣ ಇಲಾಖಾ ಸಚಿವ ಹೆಚ್.ಸಿ ಮಹದೇವಪ್ಪ ಕಿಡಿಕಾರಿದ್ದಾರೆ.

ಕೇಂದ್ರ ಸರ್ಕಾರದಿಂದ ಜನಗಣತಿ ಸಂಬಂಧ ಗೆಜೆಟ್ ಹೊರಡಿಸಿರುವ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ಉತ್ತಮ ಆಡಳಿತ ನೀಡಬೇಕೆಂದರೆ ಜನಗಣತಿ ಆಗಬೇಕಲ್ವಾ 10 ವರ್ಷಕ್ಕೊಮ್ಮೆ ಜನಗಣತಿ ನಡೆಸಬೇಕಿದೆ. ಕಳೆದ 2011ರಲ್ಲಿ ಜನಗಣತಿ ನಡೆದಿತ್ತು ಎಂದಿದ್ದಾರೆ. ನಂತರ ಇಷ್ಟು ವರ್ಷಗಳಾದರೂ ಜನಗಣತಿ ನಡೆದೇ ಇರಲಿಲ್ಲ. 2 ಅವಧಿಯಿಂದಲೂ ಕೇಂದ್ರದಲ್ಲಿ ಬಿಜೆಪಿ ಅಧಿಕಾರದಲ್ಲಿ ಇದೆ.

ಆದರೂ ಸಮೀಕ್ಷೆ ನಡೆಸಿಯೇ ಇರಲಿಲ್ಲ. ಏನು ಮಾಡಬೇಕೋ ಅದನ್ನ ಮಾಡೋದೇ ಇಲ್ಲ ಎಂದು ಟೀಕಿಸಿದ್ದಾರೆ. ಪ್ರಜಾಪ್ರಭುತ್ವ, ಸಂವಿಧಾನ, ಒಳ್ಳೆಯ ಆಡಳಿತ ಇದ್ಯಾವುದರ ಬಗ್ಗೆಯೂ ತಲೆ ಕೆಡಿಸಿಕೊಳ್ಳೋದೆ ಇಲ್ಲ. ದೇಶದಲ್ಲಿ ದಿನೇ ದಿನೇ ಜನಸಂಖ್ಯೆ ಹೆಚ್ಚುತ್ತಲೇ ಇದೆ. ಇದರ ನಿಯಂತ್ರಣಕ್ಕೆ ಕ್ರಮ ಆಗಬೇಕು. ಜನಸಂಖ್ಯೆ ಆಧಾರದ ಮೇಲೆ ಕ್ಷೇತ್ರಗಳನ್ನ ಹೆಚ್ಚಿಸಬಾರದು ಎಂದು ಆಗ್ರಹಿಸಿದ್ದಾರೆ.

## ನರೇಗಾ ಯೋಜನೆ ನಾಶಪಡಿಸಲು ಯತ್ನ: ಮಲ್ಲಿಕಾರ್ಜುನ ಖರ್ಗೆ ಆರೋಪ

• ಉದಯವಾಹಿನಿ, ನವದೆಹಲಿ

ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಬಡವರ ಜೀವನಾಡಿಯಾದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು (ನರೇಗಾ) ನಾಶ ಮಾಡಲು ಪ್ರಯತ್ನಿಸುತ್ತಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದರು. ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, 2025-26ರ ಹಣಕಾಸು ವರ್ಷದ ಮೊದಲಾರ್ಧಕ್ಕೆ ಅನುದಾನದ ಹಂಚಿಕೆಯ ಮಿತಿಯನ್ನು ಶೇ 60ಕ್ಕೆ ನಿಗದಿಪಡಿಸಿದೆ. ಕೆಲಸ ಮಾಡುವ ಹಕ್ಕನ್ನು ಕಸಿಯುವ ಇದು ಸಂವಿಧಾನ ವಿರೋಧಿ ಅಪರಾಧ ಎಂದು ಆರೋಪಿಸಿದ್ದಾರೆ. ಮೋದಿ ಸರ್ಕಾರವು ಬಡವರ ಜೇಬಿನಿಂದ ರೂ.25 ಸಾವಿರ ಕೋಟಿಯನ್ನು ಕಸಿಯಲು ಮುಂದಾಗಿದೆ ಎಂದು ದೂರಿದ್ದಾರೆ.

ಇದು ಬೇಡಿಕೆ ಆಧಾರಿತ ಯೋಜನೆಯಾಗಿದ್ದು, ಒಂದು ವೇಳೆ. ವರ್ಷದ ಮೊದಲಾರ್ಧದಲ್ಲಿ ವಿಪತ್ತು ಅಥವಾ ಹವಾಮಾನ ವೈಪರೀತ್ಯದಂತಹ ಘಟನೆಗಳು ಸಂಭವಿಸಿದಾಗ ಉದ್ಯೋಗಕ್ಕೆ ಬೇಡಿಕೆ ಹೆಚ್ಚಾದರೆ ಏನು ಮಾಡುವುದು ಮಿತಿ ಹೇರುವುದರಿಂದ ಈ ಯೋಜನೆಯನ್ನೇ ನಂಬಿಕೊಂಡಿರುವ ಬಡವರ ಜೀವನಕ್ಕೆ ತೊಂದರೆಯಾಗುವುದಿಲ್ಲವೇ ಎಂದು ಪ್ರಶ್ನಿಸಿದ್ದಾರೆ.

## 2028ಕ್ಕೂ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತೆ: ಲಕ್ಷ್ಮಣ್ ಸವದಿ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಕಾಂಗ್ರೆಸ್‌ಅಧಿಕಾರಕ್ಕೆ ಬರುತ್ತದೆ. ಹೆಚ್‌ಡಿಕೆ ಅವರು ಸಂಸದರಾಗಿ ಕೇಂದ್ರದಲ್ಲಿ ಇರಲಿ ಎಂದು ಮಾಜಿ ಸಚಿವ ಲಕ್ಷ್ಮಣ್ ಸವದಿ ತಿರುಗೇಟು ನೀಡಿದರು. 2028ಕ್ಕೆ ರಾಜ್ಯದಲ್ಲಿ ಬಿಜೆಪಿ ಜೆಡಿಎಸ್ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬರುತ್ತೆ ಎಂಬ ಹೆಚ್‌ಡಿಕೆ ಹೇಳಿಕೆಗೆ ಅವರು ಪ್ರತಿಕ್ರಿಯಿಸಿದರು. ಕುಮಾರಸ್ವಾಮಿಯವರು ಅದನ್ನೇ ಹೇಳಬೇಕು. ಪಾಪ ಅವರಿಗೆ ಬೇರೆ ಏನು ಹೇಳೋಕೂ ಸಾಧ್ಯವಿಲ್ಲ ಎಂದು ವ್ಯಂಗ್ಯವಾಡಿದರು. 2028ಕ್ಕೆ ನಾವೇ ಬರುತ್ತೀವಿ ಅಂತ ಅವರು ಹೇಳ್ತಾರೆ. ಮತ್ತೆ ನಾವೇ ಬರುತ್ತೀವಿ ಅಂತ ನಾವು ಹೇಳ್ತೀವಿ. ಕುಮಾರಸ್ವಾಮಿ ಅವರು ನಿರಂತರವಾಗಿ ಕೇಂದ್ರದಲ್ಲಿ ಇರಲಿ. ರಾಜ್ಯದಲ್ಲಿ 2028ಕ್ಕೂ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತೆ. ಹೀಗಾಗಿ ರಾಜ್ಯಕ್ಕೆ ನೀವು ಬರೋದು ಬೇಡ. ಎಂಪಿ ಆಗಿಯೇ ಇರಿ ಎಂದು ಹೇಳಿದರು.

## ಮನೆ ಕೆಲಸದವರ ಶಾಸನ ರಚಿಸಿ: ಗೃಹ ಕಾರ್ಮಿಕರ ವೇದಿಕೆ ಆಗ್ರಹ

• ಉದಯವಾಹಿನಿ, ಬೆಂಗಳೂರು

ಮನೆ ಕೆಲಸದವರ ಹಕ್ಕುಗಳಿಗಾಗಿ ಸರ್ಕಾರ ಶಾಸನ ರಚನೆ ಮಾಡಬೇಕು. ಸುಪ್ರೀಂ ಕೋರ್ಟ್ ಆದೇಶದಂತೆ ಕೇಂದ್ರ ಸರ್ಕಾರವು ರಾಷ್ಟ್ರೀಯ ಕಾನೂನು ರೂಪಿಸಬೇಕು ಎಂದು ಕರ್ನಾಟಕ ಗೃಹ ಕಾರ್ಮಿಕರ ವೇದಿಕೆ (ಕೆಜಿಕೆವಿ) ಆಗ್ರಹಿಸಿದೆ. ವಿಶ್ವ ಗೃಹ ಕಾರ್ಮಿಕರ ದಿನಾಚರಣೆಯ ಅಂಗವಾಗಿ ಸೋಮವಾರ ಕೆಜಿಕೆವಿ ಅಧ್ಯಕ್ಷೆ ರುತ್ ಮನೋರಮಾ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ವೇದಿಕೆ ವಿವಿಧ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದೆ. ಗೃಹ ಕಾರ್ಮಿಕರ ಹಕ್ಕು ರಕ್ಷಣೆಯನ್ನು ಖಾತರಿಪಡಿಸಲು ಭಾರತ ಸರ್ಕಾರವು ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಸಿ 189 ನಿಯಮವನ್ನು ಅನುಮೋದಿಸಬೇಕು. ಕೆಲಸದ ಸ್ಥಳದಲ್ಲಿ ಆಗುವ ಲೈಂಗಿಕ ಕಿರುಕುಳ ತಡೆಯಲು ಜಿಲ್ಲಾ ಮಟ್ಟದ ಸಮಿತಿ ಅಥವಾ ಮೊಬೈಲ್ ದೂರು ಸಮಿತಿ ರಚಿಸಬೇಕು. ಸರ್ಕಾರಿ ಆರೋಗ್ಯ ವಿಮೆಯನ್ನು ಗೃಹ ಕಾರ್ಮಿಕರಿಗೂ ಅನ್ವಯಿಸಬೇಕು. ಭವಿಷ್ಯನಿಧಿ, ಪಿಂಚಣಿ ನೀಡಬೇಕು. ಕನಿಷ್ಠ ವೇತನ ನಿಗದಿಪಡಿಸಬೇಕು ಎಂದು ಒತ್ತಾಯಿಸಿದೆ. ಕೆಲಸದ ಸ್ಥಳದಲ್ಲಿ ಜಾತಿ ತಾರತಮ್ಯವನ್ನು ತಡೆಗಟ್ಟಲು ತಾರತಮ್ಯ ವಿರೋಧಿ ಕಾನೂನು ಜಾರಿಗೊಳಿಸಬೇಕು. ಉದ್ಯೋಗದಾತರು ಮತ್ತು ಉದ್ಯೋಗಿಗಳ ನೋಂದಣಿ ಮಾಡಿಕೊಳ್ಳಬೇಕು.

# ಆರ್ಟ್ ಆಫ್ ಲಿವಿಂಗ್ ಕೇಂದ್ರಕ್ಕೆ ಕಾಂಚಿ ಶಂಕರಾಚಾರ್ಯರ ಭೇಟಿ

• ಉದಯವಾಹಿನಿ, ಬೆಂಗಳೂರು

ಕಾಂಚಿ ಕಾಮಕೋಟಿ ಪೀಠದ 70ನೇ ಪೀಠಾಧಿಪತಿಗಳಾದ ಜಗದ್ಗುರು ಶ್ರೀ ಶಂಕರ ವಿಜಯೇಂದ್ರ ಸರಸ್ವತಿ ಸ್ವಾಮೀಜಿಯವರು ಬೆಂಗಳೂರಿನ ಕನಕಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಅಂತಾರಾಷ್ಟ್ರೀಯ ಕೇಂದ್ರಕ್ಕೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ, ಕಾಂಚಿಯ ಶಂಕರಾಚಾರ್ಯರು, ಆಧ್ಯಾತ್ಮಿಕ ಜ್ಞಾನ, ಧ್ಯಾನ ಮತ್ತು ಶಾಂತಿಯನ್ನು ಜಾಗತಿಕ ಮಟ್ಟದಲ್ಲಿ ಪಸರಿಸಲು ಶ್ರೀ ಶ್ರೀ ರವಿಶಂಕರ ಗುರುದೇವರ ನಿರಂತರವಾದ ಪ್ರಯತ್ನವನ್ನು ಮೆಚ್ಚಿ ಆಶೀರ್ವದಿಸಿದರು. ಗುರುದೇವರು ನಡೆಸುತ್ತಿರುವ ಸೇವಾ ಕಾರ್ಯಗಳನ್ನು ಮತ್ತು ಭಾರತದ ಪ್ರಾಚೀನ ಜ್ಞಾನ ಪರಂಪರೆಯನ್ನು ಉಳಿಸುವಲ್ಲಿ ಅವರ ಬದ್ಧತೆ ಹಾಗೂ ಆಧ್ಯಾತ್ಮಿಕ ಅಭ್ಯಾಸಗಳನ್ನು ಎಲ್ಲರೂ ಅನುಸರಿಸುವಂತೆ ಸರಳ, ಪ್ರಸ್ತುತವಾಗಿಸಿದ ಪರಿಯನ್ನು ಅವರು ಶ್ಲಾಘಿಸಿದರು.




ಕಾಂಚಿಯ ಸ್ವಾಮಿಗಳು, ಆಶ್ರಮದ ಗುರುಕುಲ, ಗೋಶಾಲೆ ಮತ್ತು ವಿವಿಧ ಅಧ್ಯಾತ್ಮಿಕ ಕಲಿಕಾ ಕೇಂದ್ರಗಳನ್ನು ಕಂಡು ಸಂತಸ ವ್ಯಕ್ತಪಡಿಸಿದರು. ವಿಶ್ವದಾದ್ಯಂತದಿಂದ ಆಗಮಿಸಿದ್ದ ಸಾಧಕರಿಗೆ ತಮ್ಮ ಆಶೀರ್ವಚನದ ಮೂಲಕ ಮಾರ್ಗದರ್ಶನ ಮಾಡಿದರು.

ಗುರುದೇವರೊಂದಿಗೆ ತಮ್ಮ ಸಂಬಂಧವನ್ನು ನೆನೆದು ಕಾಂಚಿ ಶಂಕರಾಚಾರ್ಯರು ಹೀಗೆ ಹೇಳಿದರು.

ಗುರುದೇವರು, ಹಲವು ವರ್ಷಗಳಿಂದ ನಮ್ಮ ಕಾಂಚಿ ಪರಂಪರೆಯೊಂದಿಗೆ ನಿಕಟ ಸಂಬಂಧ ಹೊಂದಿದ್ದಾರೆ. ನಾವು ಇಲ್ಲಿಗೆ ಬರುವುದು ನಮಗೆ ಸಹಜ, ಸ್ವಾಭಾವಿಕ ಇದು ಪ್ರೀತಿಯ ಸಂಗಮವಾಗಿದೆ ಎಂದರು. ಗುರುದೇವರ ಕೈಂಕರ್ಯಗಳ ಕುರಿತು ಮಾತನಾಡುತ್ತಾ ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಆರ್ಟ್ ಆಫ್ ಲಿವಿಂಗ್ ನಡೆಸುತ್ತಿರುವ ಸೇವೆಗಳು ಸಮಾಜದಲ್ಲಿನ ಅಶಾಂತಿಯ ಮೂಲ ಕಾರಣಗಳನ್ನು ನಿವಾರಿಸಿವೆ.

### ಶ್ರೀ ರವಿಶಂಕರರ ಕಾರ್ಯಕ್ಕೆ ಶ್ಲಾಘನೆ

ಶಸ್ತ್ರ ಹಿಡಿದಿದ್ದವರು ಪ್ರೀತಿ ಮತ್ತು ಭಕ್ತಿಯ ಮೂಲಕ ಶಾಂತಿಯತ್ತ ಸೆಳೆಯಲ್ಪಟ್ಟಿದ್ದಾರೆ. ಆರ್ಟ್ ಆಫ್ ಲಿವಿಂಗ್‌ನಿಂದ ಜರುಗುತ್ತಿರುವ ವೈದೀಕ ಜ್ಞಾನ, ಸಾತ್ವಿಕ ಅಭ್ಯಾಸಗಳು ಹಾಗೂ ಸನಾತನ ಧರ್ಮದ ಮೌಲ್ಯಗಳನ್ನು ರಕ್ಷಿಸಿ ಉಳಿಸುವುದು ನಿಜವಾದ ಮಾನವ ಸೇವೆಯಾಗಿದೆ. ಗುರುದೇವರು ದೀರ್ಘಾಯುಷಿಗಳಾಗಿ, ತಮ್ಮ ಈ ದೈವೀ ಕಾರ್ಯವನ್ನು ಮುಂದುವರಿಸಲಿ. ಎಂದು ತಿಳಿಸಿದರು. ಕಾಂಚಿ ಶಂಕರಾಚಾರ್ಯರನ್ನು, ಗುರುದೇವ ಶ್ರೀ ಶ್ರೀ ರವಿಶಂಕರರು ಸಾಂಪ್ರದಾಯಿಕ ಗೌರವದೊಂದಿಗೆ ಆತ್ಮೀಯವಾಗಿ ಬರಮಾಡಿಕೊಂಡರು ಮತ್ತು ಸ್ವಾಮಿಗಳ ಈ ಭೇಟಿ ಎಲ್ಲಾ ಆಧ್ಯಾತ್ಮಿಕ ಸಾಧಕರಿಗೆ ಬಹು ದೊಡ್ಡ ಆಶೀರ್ವಾದ ಎಂದು ಹೇಳಿದರು. ಸಭಾ ಕಾರ್ಯಕ್ರಮದ ಕೊನೆಯಲ್ಲಿ ವೇದ ಮಂತ್ರಗಳ ಪಠಣ, ಭಕ್ತಿ-ಗೌರವದಿಂದ ಪರಸ್ಪರ ಸನ್ಮಾನ ಹಾಗೂ ಭಾರತದ ಆಧ್ಯಾತ್ಮಿಕ ಪರಂಪರೆಯ ಮೌಲ್ಯಗಳನ್ನು ಶಾಶ್ವತವಾಗಿ ಸಂರಕ್ಷಿಸಿ ಬೆಳೆಸುವ ದೃಢ ಸಂಕಲ್ಪದೊಂದಿಗೆ ಸಮಾರಂಭವು ಸಂಪನ್ನವಾಯಿತು.



## ಇಸ್ರೇಲ್‌ಗೆ ಇರಾನ್ ಎಚ್ಚರಿಕೆ

# ಉಭಯ ದೇಶಗಳ ಕದನ ತಾರಕಕ್ಕೆ

■ ಕಚ್ಚಾ ತೈಲ ಬೆಲೆಯಲ್ಲಿ ಭಾರೀ ಏರಿಕೆ, ಮತ್ತಷ್ಟು ಹೆಚ್ಚಳದ ಭೀತಿ ■ ಹುಚ್ಚಾಟ ನಿಲ್ಲಿಸಲು ಪಾಕ್‌ನಿಂದ ನ್ಯೂಕ್ಲಿಯರ್ ಬಾಂಬ್ ದಾಳಿ ಮಾಡಿಸ್ತೀವಿ: ■ ಇಸ್ರೇಲ್‌ಗೆ ಇರಾನ್ ಎಚ್ಚರಿಕೆ ■ ಇರಾನ್ ಕ್ಷಿಪಣಿಗಳ ಸುರಿಮಳೆ, ಅಡ್ಡಗೋಡೆ ಮೇಲೆ ದೀಪವಿಟ್ಟ ಟ್ರಂಪ್ : ಅಕ್ಷರಶಃ ಅಡಕತ್ತರಿಯಲ್ಲಿ ಇಸ್ರೇಲ್ ■ ಕರ್ನಾಟಕದ ವಿದ್ಯಾರ್ಥಿಗಳ ಪರದಾಟ...! ರಕ್ಷಣೆಗಾಗಿ ಮೋದಿ-ಸಿದ್ದರಾಮಯ್ಯಗೆ ಮೊರೆ

1. ಇರಾನ್ ಪರಮಾಣು ಶಕ್ತಿಕೇಂದ್ರವನ್ನು ಬೇಧಿಸಲು ಬೇಕಾದ ಟೆಕ್ನಾಲಜಿ ಇಸ್ರೇಲ್ ಸೈನ್ಯದಲ್ಲಿಲ್ಲ
2. ಅಮೆರಿಕಾದ ಸಹಾಯ ಕೇಳುತ್ತಿರುವ ಇಸ್ರೇಲಿಗೆ, ಏಕಾಂಗಿಯಾಗಿ ಯುದ್ಧ ಗೆಲ್ಲಲಾಗದ ಸ್ಥಿತಿ
3. ಡೊನಾಲ್ಡ್ ಟ್ರಂಪ್ ಆಡಳಿತದ ಜೊತೆಗೆ ನಿರಂತರ ಸಂಪರ್ಕದಲ್ಲಿರಿವ ಇಸ್ರೇಲ್ ಅಧಿಕಾರಿಗಳು



• ಉದಯವಾಹಿನಿ, ಟೆಹರಾನ್

ಇಸ್ರೇಲ್ ಮತ್ತು ಇರಾನ್ ನಡುವೆ ಸಂಘರ್ಷ ತೀವ್ರಗೊಳ್ಳುತ್ತಿದೆ. ಉಭಯ ದೇಶಗಳು ಪರಸ್ಪರ ಬಾಂಬ್ ದಾಳಿಗಳನ್ನು ಮಾಡಿಕೊಳ್ಳುತ್ತಿದ್ದು ಭಾರೀ ಸಂಖ್ಯೆಯಲ್ಲಿ ಸಾವು ನೋವು ವರದಿಯಾಗುತ್ತಿವೆ. ಇಸ್ರೇಲ್ ಈ ಬಾರಿ ತನ್ನ ದಾಳಿ ತೀವ್ರಗೊಳಿಸಿದ್ದು, ಇರಾನ್‌ನ ನ್ಯೂಕ್ಲಿಯರ್ ಕೇಂದ್ರ, ಕ್ಷಿಪಣಿ ವ್ಯವಸ್ಥೆಗಳು, ಸೇನಾ ಮುಖ್ಯಸ್ಥರು, ಅನಿಲ ದಾಸ್ತಾನುಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿವೆ.

ಇದು ಇರಾನ್‌ಗೆ ತೀವ್ರ ಪ್ರಮಾಣದಲ್ಲಿ ಹಾನಿಯುಂಟು ಮಾಡಿದೆ. ಬೆನ್ನಲ್ಲೇ ಇರಾನ್ ರೆವಲ್ಯೂಷನರಿ ಗಾರ್ಡ್ಸ್ ಹಿರಿಯ ಕಮಾಂಡರ್ ಮತ್ತು ರಾಷ್ಟ್ರೀಯ ಭದ್ರತಾ ಮಂಡಳಿಯ ಸದಸ್ಯ ಜನರಲ್ ಮೊಹ್ಸಿನ್ ರಾಜೈ ಇರಾನ್ ಮೇಲೆ ಇಸ್ರೇಲ್ ಪರಮಾಣು ಬಾಂಬ್‌ಗಳನ್ನು ಬಳಸಿದರೆ, ಪಾಕಿಸ್ತಾನವು ಇಸ್ರೇಲ್‌ನ ಮೇಲೆ ಪರಮಾಣು ಬಾಂಬ್‌ಗಳ ಮೂಲಕ ದಾಳಿ ಮಾಡುತ್ತದೆ ಎಂದು ಪಾಕಿಸ್ತಾನ ನಮಗೆ ತಿಳಿಸಿದೆ ಎಂದು ಹೇಳಿದ್ದಾರೆ.

2025ರ ಜೂನ್ 13ರಂದು 'ಆಪರೇಷನ್ ರೈಸಿಂಗ್ ಲಯನ್' ಅಡಿಯಲ್ಲಿ ಇಸ್ರೇಲ್ ಇರಾನ್‌ನ ಪರಮಾಣು, ಮಿಲಿಟರಿ ಮತ್ತು ತೈಲ-ಅನಿಲ ಸ್ಥಾಪನೆಗಳ ಮೇಲೆ ಬೃಹತ್ ದಾಳಿಗಳನ್ನು ನಡೆಸಿದ ಸಮಯದಲ್ಲಿ ಈ ಹೇಳಿಕೆ ಬಂದಿದೆ. ಈ ದಾಳಿಗಳಲ್ಲಿ ನಾಲ್ಕು ಹಿರಿಯ ಇರಾನಿನ ಮಿಲಿಟರಿ ಕಮಾಂಡರ್‌ಗಳು, ಆರು ಪರಮಾಣು ವಿಜ್ಞಾನಿಗಳು ಮತ್ತು 78 ನಾಗರಿಕರು ಸಾವನ್ನಪ್ಪಿದರು. ಇದಕ್ಕೆ ಪ್ರತಿಕ್ರಿಯೆಯಾಗಿ ಇರಾನ್ ಇಸ್ರೇಲ್ ಮೇಲೆ 100ಕ್ಕೂ ಹೆಚ್ಚು ಬ್ಯಾಲಿಸ್ಟಿಕ್ ಕ್ಷಿಪಣಿಗಳು ಮತ್ತು ಡ್ರೋನ್‌ಗಳನ್ನು ಹಾರಿಸಿತು. ಇದು ಉದ್ವಿಗ್ನತೆಯನ್ನು ಮತ್ತಷ್ಟು ಹೆಚ್ಚಿಸಿತು. ಇರಾನ್‌ನ ಹೇಳಿಕೆಯು ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧವನ್ನು ಮತ್ತಷ್ಟು ಸಂಕೀರ್ಣಗೊಳಿಸುತ್ತದೆ. ಏಕೆಂದರೆ ಅದು ಪಾಕಿಸ್ತಾನದಂತಹ ಪರಮಾಣು-ಸಶಸ್ತ್ರ ದೇಶವನ್ನು ಈ ಸಂಘರ್ಷದಲ್ಲಿ ತೊಡಗಿಸಿಕೊಳ್ಳಲು ಪ್ರಯತ್ನಿಸುತ್ತಿದೆ. 2025ರ ಜೂನ್ 16ರಂದು, ಇರಾನ್‌ನ ಹಿರಿಯ ಮಿಲಿಟರಿ ಅಧಿಕಾರಿಯೊಬ್ಬರು ಇಸ್ರೇಲ್ ಇರಾನ್ ಮೇಲೆ ಪರಮಾಣು ಬಾಂಬ್ ಬಳಸಿದರೆ, ಪಾಕಿಸ್ತಾನವು ಇಸ್ರೇಲ್ ಮೇಲೆ ಪರಮಾಣು ದಾಳಿ ನಡೆಸುತ್ತದೆ ಎಂದು ಹೇಳಿದ್ದರು. ಇರಾನ್ ಮತ್ತು ಇಸ್ರೇಲ್ ನಡುವೆ ಹೆಚ್ಚುತ್ತಿರುವ ಉದ್ವಿಗ್ನತೆಯ ಮಧ್ಯೆ ಈ ಹೇಳಿಕೆ ಬಂದಿದ್ದು, ಎರಡೂ ದೇಶಗಳು ಪರಸ್ಪರ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳನ್ನು ನಡೆಸುತ್ತಿವೆ.

ಆದಾಗ್ಯೂ, ಪಾಕಿಸ್ತಾನ ಈ ಹೇಳಿಕೆಯನ್ನು ಸಾರಾಸಗಟಾಗಿ ತಿರಸ್ಕರಿಸಿತು. ಅಂತಹ ಯಾವುದೇ ಕೆಲಸಕ್ಕೆ ಮುಂದಾಗಲ್ಲ ಎಂದು ಹೇಳಿದೆ.

**ಇರಾನ್‌ಗೆ ಇಸ್ರೇಲ್‌ನ ಕಠಿಣ ಎಚ್ಚರಿಕೆ:** ಪಾಕಿಸ್ತಾನ ರಕ್ಷಣಾ ಸಚಿವ ಖವಾಜಾ ಆಸಿಫ್ ಅವರು ಇರಾನ್‌ನ ಹೇಳಿಕೆ ಸಂಪೂರ್ಣವಾಗಿ ತಿರಸ್ಕರಿಸಿದರು. ಇಸ್ಲಾಮಾಬಾದ್ ಇಸ್ರೇಲ್ ವಿರುದ್ಧ ಪರಮಾಣು ದಾಳಿಯ ಬಗ್ಗೆ ಮಾತನಾಡಿಲ್ಲ ಎಂದು ಅವರು ಹೇಳಿದರು. ಪಾಕಿಸ್ತಾನವು ಅಂತಹ ಯಾವುದೇ ಉದ್ದೇಶವನ್ನು ಹೊಂದಿಲ್ಲ ಎಂದು ಸ್ಪಷ್ಟಪಡಿಸಿತು. ಇಸ್ರೇಲ್‌ನ ಕ್ರಮಗಳನ್ನು ಖಂಡಿಸಿರುವ ಪಾಕಿಸ್ತಾನವು ಇರಾನ್‌ಗೆ ಬೆಂಬಲ ವ್ಯಕ್ತಪಡಿಸಿದೆ.

ಈ ಕಾರಣಕ್ಕಾಗಿಯೇ, ಇಸ್ರೇಲ್ ವಿರುದ್ಧ ನಮ್ಮ ದಾಳಿಯನ್ನು ತಡೆಯಲು ಪ್ರಯತ್ನಿಸಿದರೆ ಅಮೆರಿಕ, ಫ್ರಾನ್ಸ್, ಬ್ರಿಟನ್ ದೇಶದ ವಾಯು ಮತ್ತು ನೌಕಾನೆಲೆಯ ಮೇಲೆ ದಾಳಿ ಮಾಡುವುದಾಗಿ ಇರಾನ್ ಎಚ್ಚರಿಕೆ ನೀಡಿದೆ. ಇನ್ನೊಂದು ಕಡೆ, ದಾಳಿ ಮುಂದುವರಿದರೆ, ಟೆಹರಾನ್ ನಗರವನ್ನು ಸುಟ್ಟು ಬೂದಿಯಾಗಿಸುವುದಾಗಿ ಇಸ್ರೇಲ್ ಹೇಳಿದೆ. ಯಾವ ಉದ್ದೇಶಕ್ಕಾಗಿ ಇಸ್ರೇಲ್ ದಾಳಿ ಆರಂಭಿಸಿತೋ, ಅದು ಪೂರ್ಣಗೊಳ್ಳಬೇಕಾದರೆ, ಅಮೆರಿಕ ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳ ಸಹಾಯ, ಇಸ್ರೇಲಿಗೆ ಅತ್ಯವಶ್ಯಕ.

### ಅಮೆರಿಕ, ಫ್ರಾನ್ಸ್ ವಾಯುನೆಲೆಗಳ ಧ್ವಂಸದ ಎಚ್ಚರಿಕೆ

### ಇಸ್ರೇಲ್ ದಾಳಿಗೆ ಇರಾನ್‌ನಲ್ಲಿ ಕನಿಷ್ಠ 406 ಜನ ಸಾ*ವು





### ಇರಾನ್ ದೇಶದ ಫೋರ್ಡೋ ಯುರೇನಿಯಂ ತಾಣ

ಇರಾನ್ ದೇಶದ ಫೋರ್ಡೋ ಯುರೇನಿಯಂ ತಾಣವನ್ನು ನಾಶ ಮಾಡಲು ಇದಕ್ಕೆ ಬೇಕಾಗಿರುವ ಬಂಕರ್ ಭೇದಕ ಬಾಂಬ್ ಮತ್ತು ಬಾಂಬರ್‌ಗಳು ಇಸ್ರೇಲ್ ಮಿಲಿಟರಿಯಲ್ಲಿಲ್ಲ. ಇರಾನ್ ಗುಡ್ಡಗಾಡು ಪ್ರದೇಶಗಳಲ್ಲಿನ ಭೂಮಿಯಡಿಯಲ್ಲಿ ನ್ಯೂಕ್ಲಿಯರ್ ರಿಯಾಕ್ಟರ್ ಗಳನ್ನು ಇರಾನ್ ನಿರ್ಮಿಸಿದೆ. ಧ್ವಂಸಗೊಳಿಸಲು ಬೇಕಾಗಿರುವ ಬಂಕರ್ ಬಾಂಬ್ ಎನ್ನುವ ಟೆಕ್ನಾಲಜಿ ಅಮೆರಿಕಾದ ಬತ್ತಳಿಕೆಯಲ್ಲಿದೆ. ಹಾಗಾಗಿ, ಇಸ್ರೇಲ್ ದೇಶವು, ಅಮೆರಿಕಾದ ನೆರವನ್ನು ಯಾಚಿಸುತ್ತಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

### ಇಸ್ರೇಲ್ ದೇಶದಿಂದ ಅಮೆರಿಕಾಗೆ ಬಹಿರಂಗ ಮನವಿ

ಈ ಸತ್ಯವನ್ನು ಅರಿತಿರುವ ಇಸ್ರೇಲ್, ಅಮೆರಿಕಾವನ್ನು ಅಧಿಕೃತವಾಗಿ ಇರಾನ್ ಪರಮಾಣು ನಾಶದ ವಿರುದ್ಧ ಹೋರಾಟಕ್ಕೆ ಕೈಜೋಡಿಸುವಂತೆ ಸತತವಾಗಿ ಮನವಿ ಮಾಡುತ್ತಿದೆ. ಆದರೆ, ಇದಕ್ಕೆ ಅಮೆರಿಕಾದ ಸ್ಪಷ್ಟನೆ ಇದುವರೆಗೂ ಬಂದಿಲ್ಲ. ಆದರೂ, ಪರಿಣಾಮ ತೀವ್ರಗೊಂಡರೆ ಅಮೆರಿಕಾದ ಸಹಾಯ ಸಿಕ್ಕೇ ಸಿಗುತ್ತದೆ ಎನ್ನುವ ವಿಶ್ವಾಸ ಇಸ್ರೇಲ್ ದೇಶಕ್ಕಿದೆ. ಅನಧಿಕೃತವಾಗಿ, ಇದರ ಭರವಸೆಯೂ ಅಮೆರಿಕಾ ಕಡೆಯಿಂದ ಸಿಕ್ಕಿದೆ ಎಂದು ಹೇಳಲಾಗುತ್ತಿದೆ.

# ಮೆಟ್ರೋ ನಿಲ್ದಾಣಕ್ಕೆ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಹೆಸರು; ಚರ್ಚಿಸಿ ತೀರ್ಮಾನ


## ಏಳು ಎಕರೆ ಭೂಮಿ ಮಂಜೂರು ಮಾಡಿರುವ ಹಿನ್ನೆಲೆಯಲ್ಲಿ ಕೊಡವ ಸಮಾಜದವರು ನಗರದಲ್ಲಿ ಏರ್ಪಡಿಸಿದ್ದ ಅಭಿನಂದನಾ ಸಮಾರಂಭ

• ಉದಯವಾಹಿನಿ, ಬೆಂಗಳೂರು

ಮೆಟ್ರೋ ನಿಲ್ದಾಣಕ್ಕೆ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಅವರ ಹೆಸರಿಡುವ ಬಗ್ಗೆ ನಾನು ಹಾಗೂ ಮುಖ್ಯಮಂತ್ರಿಗಳು ಚರ್ಚೆ ಮಾಡಿ ತೀರ್ಮಾನಿಸುತ್ತೇವೆ. ಕಾರ್ಯಪ್ಪ ಅವರ ಹೆಸರಿಡುವುದು ನಮ್ಮ ಭಾಗ್ಯ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಹೇಳಿದರು.

ಕರ್ನಾಟಕ ಸರ್ಕಾರವು ಬೆಂಗಳೂರಿನಲ್ಲಿ ಏಳು ಎಕರೆ ಭೂಮಿ ಮಂಜೂರು ಮಾಡಿರುವ ಹಿನ್ನೆಲೆಯಲ್ಲಿ ಕೊಡವ ಸಮಾಜದವರು ನಗರದಲ್ಲಿ ಏರ್ಪಡಿಸಿದ್ದ ಅಭಿನಂದನಾ ಸಮಾರಂಭ ಉದ್ದೇಶಿಸಿ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಮಾತನಾಡಿದರು. ಈ ವಿಚಾರವಾಗಿ ನಾವು ಮುಕ್ತ ಮನಸ್ಸು ಹೊಂದಿದ್ದೇವೆ. ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರ ಹಾಗೂ ಈ ಡಿ.ಕೆ. ಶಿವಕುಮಾರ್ ಸೇರಿ ಕಾರ್ಯಪ್ಪ ಅವರ ಹೆಸರನ್ನು ಉಳಿಸುವ ಕೆಲಸ ಮಾಡುತ್ತೇವೆ ಎಂದು ಭರವಸೆ ನೀಡಿದರು.

ಮನುಷ್ಯನಿಗೆ ಮುತ್ತುರತ್ನ ಶೋಭೆ ತರುವಂತೆ ಇಡೀ ದೇಶಕ್ಕೆ ಕೊಡಗು ಹಾಗೂ ಕೊಡವರು ಆಭರಣವಿದ್ದಂತೆ. ಇತಿಹಾಸ ನೋಡಿದಾಗ ನಿಮಗೆ ಯಾವುದೇ ಜವಾಬ್ದಾರಿ ಕೊಟ್ಟರೂ ಅದನ್ನು ಸಮರ್ಥವಾಗಿ ನಿಭಾಯಿಸಿದ್ದೀರಿ. ರಾಜಕೀಯ ಮಾತ್ರವಲ್ಲ ಕ್ರೀಡೆ, ಕಾನೂನು ವ್ಯವಸ್ಥೆ, ಸೇನೆ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಕೊಡವರ ಕೊಡುಗೆ ಅಪಾರ. ದೇಶದ ಸ್ವಾತಂತ್ರ್ಯ ಹೋರಾಟಕ್ಕೂ ನಿಮ್ಮ ಕೊಡುಗೆ ಇದೆ ಎಂದು ಬಣ್ಣಿಸಿದರು.



ದೇವರು ನಮಗೆ ವರ ಹಾಗೂ ಶಾಪ ನೀಡುವುದಿಲ್ಲ. ಕೇವಲ ಅವಕಾಶ ಮಾತ್ರ ನೀಡುತ್ತಾನೆ. ನಮಗೆ ಸಿಕ್ಕ ಅವಕಾಶದಲ್ಲಿ ನಾವು ಏನು ಸಾಧನೆ ಮಾಡುತ್ತೇವೆ ಎಂಬುದು ಮುಖ್ಯ. ಅದೇರೀತಿ ನಮಗೆ ಈಗ ಸಿಕ್ಕಿರುವ ಅವಕಾಶದಲ್ಲಿ ಸಿದ್ದರಾಮಯ್ಯ ಅವರ ಸರ್ಕಾರ ನಿಮಗೆ ಅಗತ್ಯ ನೆರವು ನೀಡುತ್ತಿದೆ. ನಾವು ನಿಮ್ಮ ಜತೆ ಇದ್ದೇವೆ, ನೀವು ನಮ್ಮ ಜತೆ ನಿಂತು ನಮ್ಮ ಕೈಗೆ ಶಕ್ತಿ ತುಂಬಬೇಕು ಎಂದು ಪಕ್ಷದ ಅಧ್ಯಕ್ಷನಾಗಿ ಮನವಿ ಮಾಡುತ್ತೇನೆ. ಪೊನ್ನಣ್ಣ ಹಾಗೂ ಮಂಥರ್ ಗೌಡ ಅವರನ್ನು ಶಾಸಕರಾಗಿ ಆಯ್ಕೆ ಮಾಡಿದ್ದೀರಿ. ಮುಂದೆಯೂ ನೀವು ಇವರನ್ನು ವಿಧಾನಸೌಧಕ್ಕೆ ಆರಿಸಬೇಕು ಎಂದು ಹೇಳಿದರು.

ಸಂಸ್ಕೃತಿ ಹಾಗೂ ಪರಂಪರೆಗಳನ್ನು ನಾವು ಹಾಳು ಮಾಡಿಕೊಳ್ಳಬಾರದು ಎಂಬುದು ನಮ್ಮ ಬಯಕೆ. ಕೊಡವ ಸಮಾಜಕ್ಕೆ ನೀಡಲಾಗಿರುವ 7 ಎಕರೆ ಜಮೀನಿಗೆ 30-40 ಕೋಟಿ ಕಡಿಮೆ ಮಾಡಿರುವುದು ದೊಡ್ಡ ವಿಚಾರವಲ್ಲ. ಇದಕ್ಕಿಂತ ನಿಮ್ಮ ತ್ಯಾಗ, ಪರಿಶ್ರಮ, ಶಿಸ್ತು ದೊಡ್ಡದು ಎಂದು ತಿಳಿಸಿದರು. ಸರ್ವರಿಗೂ ಸಮಪಾಲು, ಸಮಬಾಳು ತತ್ವದ ಮೇಲೆ ನಮ್ಮ ಸರ್ಕಾರ ಅನೇಕ ಕಾರ್ಯಕ್ರಮ ರೂಪಿಸುತ್ತಿದೆ. ದುರ್ಬಲ ಸಮಾಜ, ಶೋಷಿತ ಸಮಾಜ, ಹಿಂದುಳಿದವರಿಗೆ ಸಹಾಯ ಮಾಡಲು ಕಾಂಗ್ರೆಸ್ ಬದ್ಧವಾಗಿದೆ ಎಂದು ತಿಳಿಸಿದರು. ಕಾಂಗ್ರೆಸ್ ಸರ್ಕಾರಗಳು ಈ ಹಿಂದಿನಿಂದಲೂ ಹೃದಯ ಶ್ರೀಮಂತಿಕೆಯಿಂದ ಸಣ್ಣ ಸಮಾಜಗಳಿಗೆ ಸಹಾಯ ಮಾಡಿಕೊಂಡು ಬಂದಿವೆ. ನಮ್ಮ ಸರ್ಕಾರ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ಮಾಡಿ ನಿಮಗೆ ಈ ಭೂಮಿ ನೀಡಲು ತೀರ್ಮಾನಿಸಿದೆ ಎಂದರು.

ನಮ್ಮ ಸರ್ಕಾರ ನಿಮಗೆ ಅನೇಕ ಕಾರ್ಯಕ್ರಮ ಕೊಟ್ಟಿದೆ. ಸೇನೆಯಲ್ಲಿ ಸೇವೆ ಸಲ್ಲಿಸಿ ಬಂದವರಿಗೆ ಭೂಮಿ ಕೊಟ್ಟಿದೆ. ಕೊಡವರನ್ನು ರಾಜ್ಯಸಭೆ ಸದಸ್ಯರನ್ನಾಗಿ ಮಾಡಿದ್ದೇವೆ, ಮೂರ್ನಾಲ್ಕು ನಾಯಕರನ್ನು ಶಾಸಕರನ್ನಾಗಿ ಮಾಡಿದ್ದೇವೆ. ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡಿದ್ದೇವೆ. ರಾಜಕೀಯದಲ್ಲಿ ನಿಮ್ಮ ಧ್ವನಿ ಇರಬೇಕು ಎಂದು ಹಲವು ತೀರ್ಮಾನ ಮಾಡಿದ್ದೇವೆ. ಈ ಇತಿಹಾಸವನ್ನು ಅರಿತು ನೀವು ನಮ್ಮ ಪರವಾಗಿ ನಿಲ್ಲಬೇಕು ಎಂದು ಮನವಿ ಮಾಡಿದರು.

### ಎಲ್ಲಾ ಕ್ಷೇತ್ರಗಳಲ್ಲಿ ಕೊಡವರ ಕೊಡುಗೆ ಅಪಾರ



**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹10,151/Gram24ct ₹9,305/Gram22ct ಬೆಳ್ಳಿ: ₹109.90 /Gram

## ಸರ್ಕಾರ ಬಡವರ ಪಿಂಚಣಿ ಹಣದಲ್ಲಿ ಉಳಿತಾಯ ಮಾಡಲು ಹೊರಟಿದೆ

• ಉದಯವಾಹಿನಿ, ಬೆಂಗಳೂರು

ಸಂಧ್ಯಾ ಸುರಕ್ಷಾ, ವೃದ್ಧಾಪ್ಯ ವೇತನ ಯೋಜನೆಯಡಿ 23.19 ಲಕ್ಷ ಫಲಾನುಭವಿಗಳನ್ನು ಅನರ್ಹರೆಂದು ಘೋಷಿಸಿದ್ದು. ಇವರ ಪಿಂಚಣಿಯನ್ನು ರದ್ದುಗೊಳಿಸಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಕಂದಾಯ ಇಲಾಖೆ ಆದೇಶ ನೀಡಿದೆ.ಬಿಜೆಪಿ ಶಾಸಕ ವಿ.ಸುನಿಲ್ ಕುಮಾರ್ ಅವರು ಆದೇಶದ ಪ್ರತಿಯನ್ನು ಎಕ್ಸ್‌ನಲ್ಲಿ ಟ್ಯಾಗ್ ಮಾಡಿ ಸರ್ಕಾರದ ಈ ಕ್ರಮವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಬಡವರ ಬಗ್ಗೆ ಕಾಳಜಿ, ಸಹಾನುಭೂತಿ ಇರಲಿ ಎಂದು ಜಿಲ್ಲಾಧಿಕಾರಿಗಳ ಸಭೆಯಲ್ಲಿ ಪ್ರವಚನ ಮಾಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಗ ಬಡವರ ಮೇಲೆ ಪ್ರಹಾರ ಮಾಡಲು ಹೊರಟಿದ್ದಾರೆ. ವಿವಿಧ ಸಾಮಾಜಿಕ ಭದ್ರತಾ ಯೋಜನೆಯ ಅಡಿ ವೃದ್ಧರು, ಅಸಹಾಯಕರು, ದುರ್ಬಲರಿಗೆ ನೀಡುತ್ತಿದ್ದ ಪಿಂಚಣಿ ಹಣದ ಮೇಲೆ 60 ಪರ್ಸೆಂಟ್ ಸರ್ಕಾರದ ಕಣ್ಣು ಬಿದ್ದಿದೆ ಎಂದು ಟೀಕಿಸಿದ್ದಾರೆ. ರಾಜ್ಯದಲ್ಲಿ ಒಟ್ಟು 21.87 ಲಕ್ಷ ವೃದ್ಧಾಪ್ಯ 31.33 ಲಕ್ಷ ಸಂಧ್ಯಾ ಸುರಕ್ಷಾ ಯೋಜನೆಯ ಫಲಾನುಭವಿಗಳಲ್ಲಿ ಅನರ್ಹರನ್ನು ಹುಡುಕುವುದಕ್ಕೆ ಸರ್ಕಾರ ಮುಂದಾಗದೆ. 9.04 ಲಕ್ಷ ವೃದ್ಧಾಪ್ಯ ವೇತನದಾರರು 14.15 ಲಕ್ಷ ಸಂಧ್ಯಾ ಸುರಕ್ಷಾ ಕಾರ್ಡ್‌ಗಳನ್ನು ರದ್ದುಗೊಳಿಸುವುದಕ್ಕೆ ಸಂಬಂಧಿಸಿದಂತೆ ಅಧಿಕೃತ ಆದೇಶ ಹೊರಡಿಸಲಾಗಿದೆ ಎಂದಿದ್ದಾರೆ. ತಮ್ಮದು ಆಲಿಸುವ ಸರ್ಕಾರ ಎಂದು ಜಾಹೀರಾತಿನಲ್ಲಿ ಪೋಸು ಕೊಡುವ ಕಾಂಗ್ರೆಸ್ ಸರ್ಕಾರ ಬಡವರ ಪಿಂಚಣಿ ಹಣದಲ್ಲಿ ಉಳಿತಾಯ ಮಾಡಲು ಹೊರಟಿದೆ. ಸರ್ಕಾರ ದಿವಾಳಿ ಅಂಚಿಗೆ ತಲುಪಿದೆ ಎಂಬುದಕ್ಕೆ ಇದಕ್ಕಿಂತ ಬೇರೆ ಸಾಕ್ಷಿ ಬೇಕೆ ಎಂದು ಪ್ರಶ್ನಿಸಿದ್ದಾರೆ.

## ನೀಟ್ ಫಲಿತಾಂಶ: ನಾರಾಯಣ ಶಿಕ್ಷಣ ಸಂಸ್ಥೆ ಉತ್ತಮ ಸಾಧನೆ

• ಉದಯವಾಹಿನಿ, ಬೆಂಗಳೂರು

ವೈದ್ಯಕೀಯ ಶಿಕ್ಷಣ ಕೋರ್ಸ್ ಪ್ರವೇಶಕ್ಕೆ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ನಡೆಸಿದ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯಲ್ಲಿ (ನೀಟ್–ಯುಜಿ) ನಾರಾಯಣ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ. ಅಖಿಲ ಭಾರತ ಮಟ್ಟದಲ್ಲಿ 4, 7, 12, 14, 18, 20 ಮತ್ತು 35ನೇ ಸ್ಥಾನವನ್ನು ಸಂಸ್ಥೆಯ ವಿದ್ಯಾರ್ಥಿಗಳು ಗಳಿಸಿದ್ದಾರೆ. ನವದೆಹಲಿಯ ಮೃಣಾಲ್ ಕಿಶೋರ್ ಝಾ (4), ಪಂಜಾಬ್‌ನ ಕೇಶವ್ ಮಿತ್ತಲ್ (7), ನವದೆಹಲಿಯ ಆಶಿ ಸಿಂಗ್ (12), ರಾಜಸ್ಥಾನದ ಸೌಮ್ಯಾ ಶರ್ಮಾ (14), ತೆಲಂಗಾಣದ ಕಾಕರ್ಲಾ ಜೀವನ್ ಸಾಯಿ ಕುಮಾರ್ (18) ಮತ್ತು ಪಶ್ಚಿಮ ಬಂಗಾಳದ ರೂಪ್ಯಾನ್ ಪಾಲ್ (20) ಅವರು ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ಅಖಿಲ ಭಾರತ ಮಟ್ಟದಲ್ಲಿ ಅಗ್ರ 100 ಸ್ಥಾನಗಳಲ್ಲಿ 21 ಸ್ಥಾನಗಳು, ಅಗ್ರ ಸಾವಿರ ಸ್ಥಾನಗಳಲ್ಲಿ 84 ಸ್ಥಾನಗಳನ್ನು ಸಂಸ್ಥೆಯ ವಿದ್ಯಾರ್ಥಿಗಳು ಪಡೆದಿದ್ದಾರೆ. ಈ ಸಾಧಕರನ್ನು ಅಭಿನಂದಿಸಿರುವ ನಾರಾಯಣ ಶಿಕ್ಷಣ ಸಂಸ್ಥೆಗಳ ನಿರ್ದೇಶಕರಾದ ಡಾ.ಪಿ. ಸಿಂಧೂರ ನಾರಾಯಣ ಮತ್ತು ಪಿ.ಶರಣಿ ನಾರಾಯಣ, ರಾಷ್ಟ್ರೀಯ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸಂಸ್ಥೆಯು ಉತ್ತಮ ಸಾಧನೆ ಮಾಡುತ್ತಿದೆ. ವ್ಯವಸ್ಥಿತ ಪರೀಕ್ಷೆಗಳು, ತಜ್ಞ ಅಧ್ಯಾಪಕರ ಮಾರ್ಗದರ್ಶನ, ತಂತ್ರಜ್ಞಾನ ಆಧಾರಿತ ಕಲಿಕಾ ಚೌಕಟ್ಟುಗಳು ಮತ್ತು ವಿದ್ಯಾರ್ಥಿ ಕೇಂದ್ರೀಕೃತ ವಿಶೇಷ ಕಾರ್ಯಕ್ರಮಗಳೇ ಇದಕ್ಕೆ ಕಾರಣ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪತ್ರಕರ್ತರಿಗೆ ಸಾಮಾಜಿಕ ಜವಾಬ್ದಾರಿ ಅವಶ್ಯ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೆ.ಆರ್.ಪುರ

ಮುಂದಿನ ಅವಧಿಗೆ ಕಸಾಪ ಮಹದೇವಪುರ ಕ್ಷೇತ್ರದ ಅಧ್ಯಕ್ಷ ಸ್ಥಾನಕ್ಕೆ ಉಪೇಂದ್ರ ಕುಮಾರ್ ಅರ್ಹ ಮತ್ತು ಸೂಕ್ತ ಎಂದು ಸಾಹಿತಿ ಹಾಗೂ ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟಿನ ಅಧ್ಯಕ್ಷರಾದ ಡಾ. ಎಸ್.ರಾಮಲಿಂಗೇಶ್ವರ (ಸಿಸಿರಾ) ತಿಳಿಸಿದರು. ಮಹದೇವಪುರ ಕ್ಷೇತ್ರದ ಗುಂಡೂರು ಶಾಲಾ ಆವರಣದಲ್ಲಿ ಮಿಡಿತ ಫೌಂಡೇಶನ್ ಹಮ್ಮಿಕೊಂಡಿದ್ದ ಸಸಿ ನೆಡುವ, ನ್ಯೂಸ್ ಪೇಪರ್ ಕಿರು ಚಿತ್ರ ಪೋಸ್ಟರ್ ಬಿಡುಗಡೆ ಹಾಗೂ ದೊಡ್ಡಸ್ತಿಕೆ ಕವನ ಸಂಕಲನ ಮುಖಪುಟ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು. ಕನ್ನಡ ನಾಡು ಮತ್ತು ನುಡಿ ಅಭಿಮಾನ ತುಂಬುವ ಕೆಲಸಗಳನ್ನು ನಿತ್ಯ ನಿರಂತರ ಮಾಡುವ ಮೂಲಕ ಚಿರಪರಿಚಿತರಾಗಿರುವ ಉಪೇಂದ್ರಕುಮಾರ್ ಅವರಿಗೆ ಮುಂದಿನ ಅವಧಿಯಲ್ಲಿ ಮಹದೇವಪುರ ಕ್ಷೇತ್ರದ ಕಸಾಪ ಅಧ್ಯಕ್ಷರಾಗಿ ನೇಮಕ ಮಾಡಿದರೆ ಸೂಕ್ತ ಎಂದರು. ಸಾಮಾಜಿಕ ಜವಾಬ್ದಾರಿಯೊಂದಿಗೆ ಪತ್ರಕರ್ತರು ವ್ಯವಹಾರಿಸಬೇಕಾಗಿದೆ, ಪತ್ರಕಾ ವಿತ್ತರಕರು ಹಾಗೂ ಪತ್ರಕರ್ತರು ನಿತ್ಯ ಜೀವನದ ಬಗ್ಗೆ ಅರಿವು ಮೂಡಿಸುವ ಕಿರುಚಿತ್ರವನ್ನು ಪತ್ರಕರ್ತರ ದಿನದೊಂದು ಬಿಡುಗಡೆ ಮಾಡಲಾಗುವುದು ಎಂದು ಪತ್ರಕರ್ತ ಹಾಗೂ ಪರಿಸರವಾದಿ ಪರಿಸರ ಮಂಜು ತಿಳಿಸಿದರು. ಈ ವೇಳೆ ಸಾಹಿತಿ ಉಪೇಂದ್ರ ಕುಮಾರ್ ಅವರಿಗೆ ಫೌಂಡೇಶನ್ ವತಿಯಿಂದ ಕನ್ನಡ ಕಾಯಕ ಜೀವಿ ಪ್ರಶಸ್ತಿ ಪ್ರಧಾನ ನೀಡಿ ಅಭಿನಂದಿಸಲಾಯಿತು. ಕನ್ನಡ ಜನಪದ ಪರಿಷತ್ ಬೆಂ. ಕಾರ್ಯಾಧ್ಯಕ್ಷ ಡಾ. ಅಜಿತ್ ಕುಮಾರ್, ಕಸಾಪ ಕ್ಷೇತ್ರಾಧ್ಯಕ್ಷ ಟಿ. ವೀರಭದ್ರಪ್ಪ, ಸಾಹಿತಿ ವಾದಿರಾಜ್, ಫೌಂಡೇಶನ್‌ನ ಉಪಾಧ್ಯಕ್ಷರಾದ ಸೌಮ್ಯ ಪವಾರ್, ಪ್ರಕೃತಿ ಸಂತೋಷ್ ಸೇರಿದಂತೆ ತೇಗರಾಜ ಕೆ.ಬಿ ಕೊಳ್ಳಂಗಿ, ಕನ್ನಡ ಭಕ್ತ ಕಿರಣ್, ಕಿರಣ್ ಯಾದವ್ ಸೇರಿದಂತೆ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಯಲಹಂಕ ವಲಯದಲ್ಲಿ 13 ಕಟ್ಟಡಗಳ ಅನಧಿಕೃತ ಭಾಗ ತೆರವು!

### ಕಟ್ಟಡ ಮಾಲೀಕರು ನೆಲ ಮಹಡಿ ಮತ್ತು ಎರಡು ಹೆಚ್ಚುವರಿ ಮಹಡಿಗಳಿಗೆ ಮಾತ್ರ ಅನುಮತಿ

• ಉದಯವಾಹಿನಿ, ಬೆಂಗಳೂರು

ಹೆಚ್ಚುತ್ತಿರುವ ಸಾರ್ವಜನಿಕರ ಒತ್ತಡ, ಕಾನೂನು ದೂರುಗಳು ನಿಯಮಬಾಹಿರವಾಗಿ ಕಟ್ಟಡ ನಿರ್ಮಾಣದ ಬಗ್ಗೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಪ್ರತಿಭಟನೆಗಳಿಗೆ ಸ್ಪಂದಿಸಿದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಂತಿಮವಾಗಿ ತನ್ನ ವ್ಯಾಪ್ತಿಯಲ್ಲಿರುವ ಅಕ್ರಮ ಕಟ್ಟಡಗಳ ವಿರುದ್ಧ ನಿರ್ಣಾಯಕ ಶಿಸ್ತುಕ್ರಮವನ್ನು ಪ್ರಾರಂಭಿಸಿದೆ. ಬಿಬಿಎಂಪಿ ಮುಖ್ಯ ಆಯುಕ್ತರ ಕಟ್ಟುನಿಟ್ಟಿನ ಆದೇಶದ ಮೇರೆಗೆ ಯಲಹಂಕ ವಲಯದ 13 ಕಟ್ಟಡದ ಅನಧಿಕೃತ ಫ್ಲೋರ್‌ಗಳನ್ನು ಬಿಬಿಎಂಪಿ ಎಂಜಿನಿಯರ್‌ಗಳು ನೆಲಸಮಗೊಳಿಸಿದ್ದಾರೆ.

ಯಲಹಂಕ ಉಪವಿಭಾಗದ ಕಾರ್ಯಪಾಲಕ ಇಂಜಿನಿಯರ್ ಸುಧಾಕರ್ ಮಾತನಾಡಿ, ಕಟ್ಟಡ ಮಾಲೀಕರು ನೆಲ ಮಹಡಿ, ಎರಡು ಹೆಚ್ಚುವರಿ ಮಹಡಿಗಳಿಗೆ ಮಾತ್ರ ಅನುಮತಿ ಪಡೆದಿದ್ದಾರೆ. ಆದರೆ ಅನುಮೋದನೆ ಮೀರಿ ಒಂದು ಅಥವಾ ಎರಡು ಹೆಚ್ಚುವರಿ ಮಹಡಿಗಳನ್ನು ಅಕ್ರಮವಾಗಿ ನಿರ್ಮಿಸಿದ್ದಾರೆ. ಮುಖ್ಯ ಆಯುಕ್ತರ ನಿರ್ದೇಶನದಂತೆ ಅನಧಿಕೃತ ಭಾಗವನ್ನು ತೆರವುಗೊಳಿಸಿದ್ದೇವೆ. ಆದರೆ ಕಟ್ಟಡಕ್ಕೆ ಯಾವುದೇ ಹಾನಿಯಾಗದಂತೆ ಫಿಲ್ಲರ್ ಮತ್ತು ಮೇಲ್ಛಾವಣಿಗೆ ಯಾವುದೇ ತೊಂದರೆ ಮಾಡಿಲ್ಲ. ಅಂತಹ ಮಹಡಿಗಳನ್ನು ತೆರವುಗೊಳಿಸುವುದಷ್ಟೇ ನಮ್ಮ ಗುರಿಯಾಗಿದೆ ಎಂದರು.



ಅಕ್ರಮ ನಿರ್ಮಾಣದ ವಿರುದ್ಧ ಬಿಬಿಎಂಪಿ ಸಮರ

> ಕಾನೂನು ಪ್ರಕಾರ ಅನಧಿಕೃತ ಭಾಗ ತೆರವು ಕಾರ್ಯಾಚರಣೆ ಮಾಡಲಾಗುತ್ತಿದೆ. ಆರಂಭದಲ್ಲಿ ಆಸ್ತಿ ಮಾಲೀಕರು ಏಳು ದಿನಗಳೊಳಗೆ ಪರವಾನಗಿಗಳು, ನಕ್ಷೆ ಮತ್ತು ಸಂಬಂಧಿತ ಅನುಮೋದನೆಗಳನ್ನು ಒದಗಿಸುವಂತೆ ಬಿಬಿಎಂಪಿ ಕಾಯ್ದೆ 2020ರ ಸೆಕ್ಷನ್ 313ರ ಅಡಿಯಲ್ಲಿ ನೋಟೀಸ್ ನೀಡಲಾಗಿತ್ತು. ಇದರ ನಂತರ ಕಟ್ಟಡದ ಬೈಲಾ ಉಲ್ಲಂಘನೆಯನ್ನು ದೃಢೀಕರಿಸುವ ಸೆಕ್ಷನ್ 248(1), 248(2), ಮತ್ತು 248(3) ಅಡಿಯಲ್ಲಿ ನೋಟಿಸ್‌ಗಳನ್ನು ನೀಡಲಾಯಿತು. ಅಂತಿಮವಾಗಿ, ಸೆಕ್ಷನ್ 356ರ ಅಡಿಯಲ್ಲಿ ಅನಧಿಕೃತ ಭಾಗಗಳನ್ನು ತೆರವುಗೊಳಿಸಲು ಮಾಲೀಕರಿಗೆ ಸೂಚಿಸಲಾಗಿತ್ತು. ಆದರೆ ಅವರು ಹಾಗೆ ಮಾಡದ ಹಿನ್ನೆಲೆಯಲ್ಲಿ ಬಿಬಿಎಂಪಿ ಮಧ್ಯಪ್ರವೇಶಿಸಿದೆ.

ಬಿಬಿಎಂಪಿ ವ್ಯಾಪ್ತಿಯ ಕೆಂಪೇಗೌಡ, ಚೌಡೇಶ್ವರಿ, ಅತ್ತೂರು, ಯಲಹಂಕ ನ್ಯೂ ಟೌನ್ ವಾರ್ಡ್‌ಗಳಲ್ಲಿ ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ಖಚಿತಪಡಿಸಿದರು. ಮುಂಜಾನೆ ಆರಂಭವಾದ ತೆರವು ಕಾರ್ಯಾಚರಣೆ ದಿನವಿಡೀ ಮುಂದುವರಿಯುವ ನಿರೀಕ್ಷೆಯಿದೆ. ಇನ್ನುಳಿದ ವಲಯಗಳಲ್ಲೂ ಇದೇ ಕ್ರಮ ಕೈಗೊಳ್ಳಲಾಗುವುದು ಎಂದು ಬಿಬಿಎಂಪಿ ಮೂಲಗಳು ತಿಳಿಸಿವೆ. ಅದರಲ್ಲೂ ವಿಲ್ಸನ್ ಗಾರ್ಡನ್‌ನಲ್ಲಿರುವ ಬಿಜೆಪಿ ಮುಖಂಡ ಸುರೇಶ್ ಬಾಬು ಅವರಿಗೆ ಸಂಬಂಧಿಸಿದ ಬಹುಮಹಡಿ ಕಟ್ಟಡದ ಬಗ್ಗೆ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿರುವ ಬಗ್ಗೆ ದಕ್ಷಿಣ ವಲಯದಲ್ಲಿ ದೂರುಗಳು ಬಂದಿವೆ. ಕಟ್ಟಡವು ಎಂಟು ಮಹಡಿಗಳನ್ನು ಮೀರಿದೆ. ಈ ಸಂಬಂಧ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ಚಿಕ್ಕಪೇಟೆ ವಿಧಾನಸಭೆ ಕಾರ್ಯನಿರ್ವಾಹಕ ಇಂಜಿನಿಯರ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಅವರಿಗೆ ನೋಟಿಸ್ ನೀಡುವ ಸಾಧ್ಯತೆಯಿದೆ. ಇಸಿಸಿ ರಸ್ತೆ, ಅಥಾಶ್ರೀ ಲೇಔಟ್ ಮತ್ತು ವೈಟ್ ಫೀಲ್ಡ್ ಮತ್ತು ಕೆಆರ್ ಪುರಂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹಲವಾರು ಅಕ್ರಮ ನಿರ್ಮಾಣಗಳನ್ನು ಗುರುತಿಸಲಾಗಿದ್ದು, ಮಹದೇವಪುರ ವಲಯದಲ್ಲಿ ಮುಂದಿನ ಹಂತದಲ್ಲಿ ತೆರವು ಕಾರ್ಯಾಚರಣೆ ಆರಂಭವಾಗುವ ಸಾಧ್ಯತೆಯಿದೆ ಎಂದು ಬಿಬಿಎಂಪಿ ಮೂಲಗಳು ಬಹಿರಂಗಪಡಿಸಿವೆ.

## ಪೊಲೀಸರಿಂದ ಕೇರಳ ಅರ್ಚಕನ ಬಂಧನ

• ಉದಯವಾಹಿನಿ, ಬೆಂಗಳೂರು



ಬ್ಲ್ಯಾಕ್ ಮೇಲ್, ಅತ್ಯಾಚಾರ ಯತ್ನ

ಉದಯವಾಹಿನಿ ಚಿತ್ರ

ಮಹಿಳೆಯೊಬ್ಬರಿಗೆ ಬ್ಲ್ಯಾಕ್‌ಮೇಲ್ ಮಾಡಿ ಅತ್ಯಾಚಾರಕ್ಕೆ ಯತ್ನಿಸಿದ ಆರೋಪದ ಮೇಲೆ ಬೆಂಗಳೂರು ಪೊಲೀಸರು ಕೇರಳದ ಅರ್ಚಕರೊಬ್ಬರನ್ನು ಬಂಧಿಸಿದ್ದಾರೆ ಮತ್ತು ತಲೆಮರೆಸಿಕೊಂಡಿರುವ ಮತ್ತೊಬ್ಬ ಅರ್ಚಕನಿಗಾಗಿ ಹುಡುಕಾಟ ಆರಂಭಿಸಿದ್ದಾರೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ. ಪೊಲೀಸರ ಪ್ರಕಾರ, ಬಂಧಿತ ವ್ಯಕ್ತಿಯನ್ನು ಕೇರಳದಲ್ಲಿರುವ ಪೆರಿಂಗೊಟ್ಟುಕರ ದೇವಸ್ಥಾನದ ಅರುಣ್ ಎಂದು ಗುರುತಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ದೇವಾಲಯದ ಪ್ರಧಾನ ಅರ್ಚಕ ಉನ್ನಿ ದಾಮೋದರನ್‌ಗಾಗಿ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ.

ಆರ್ಥಿಕ ತೊಂದರೆಗಳನ್ನು ಅನುಭವಿಸುತ್ತಿದ್ದ ಮಹಿಳೆಯ ಕುಟುಂಬಕ್ಕೆ ಪರಿಹಾರಕ್ಕಾಗಿ ಪೆರಿಂಗೊಟ್ಟುಕರ ದೇವಸ್ಥಾನಕ್ಕೆ ಭೇಟಿ ನೀಡುವಂತೆ ಆಕೆಯ ಸ್ನೇಹಿತರು ಸಲಹೆ ನೀಡಿದ್ದರು. ಬೆಂಗಳೂರಿನ ನಿವಾಸಿಯಾಗಿರುವ ಸಂತ್ರಸ್ತ ಮಹಿಳೆ ದೇವಾಲಯದ ಬಗ್ಗೆ ವಿಡಿಯೋವನ್ನು ಸಹ ನೋಡಿದ್ದರು ಮತ್ತು ಅಲ್ಲಿ ವಿಶೇಷ ಪೂಜೆ ಮಾಡುವುದರಿಂದ ಆಕೆಯ ಬಿಕ್ಕಟ್ಟು ಕೊನೆಗೊಳ್ಳುತ್ತದೆ ಎಂದು ಮನವರಿಕೆ ಮಾಡಿಕೊಂಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ವಿಶೇಷ ಪೂಜೆ ಮಾಡಲು ಮಹಿಳೆ ದೇವಸ್ಥಾನಕ್ಕೆ ಹೋದಾಗ ಆರೋಪಿಗೆ ಪರಿಚಯವಾಯಿತು. ಆರೋಪಿ ಅರ್ಚಕರು ಆಕೆಯ ವಿಶ್ವಾಸವನ್ನು ಗಳಿಸಿದರು. ನಂತರ ಆಕೆಗೆ ವಾಟ್ಸಾಪ್ ವಿಡಿಯೋ ಕರೆಗಳನ್ನು ಮಾಡಿ ಅನುಚಿತವಾಗಿ ವರ್ತಿಸಿದ್ದಾರೆ ಎಂದು ಆರೋಪಿಸಲಾಗಿದೆ. ಆಕೆಯ ದುರ್ಬಲ ಪರಿಸ್ಥಿತಿಯ ಲಾಭ ಪಡೆದು, ಆರೋಪಿಯು ಸಂತ್ರಸ್ತೆಯನ್ನು ಮಾಟಮಂತ್ರ ಮಾಡುವ ನೆಪದಲ್ಲಿ ಬೆದರಿಸಿ ಅಪರಾಧ ಎಸಗಿದ್ದಾನೆ. ನಂತರ, ಅವರು ಆಕೆಯನ್ನು ದೇವಸ್ಥಾನಕ್ಕೆ ಕರೆಸಿ ಈ ಬಾರಿ ಲೈಂಗಿಕ ಕ್ರಿಯೆಗೆ ಸಹಕಾರ ನೀಡುವಂತೆ ಒತ್ತಾಯಿಸಿದ್ದು, ಅಸ್ವಾಭಾವಿಕ ಲೈಂಗಿಕ ಕ್ರಿಯೆಗೂ ಒತ್ತಾಯಿಸಿದ್ದಾನೆ ಎಂದು ಸಂತ್ರಸ್ತೆ ದೂರಿನಲ್ಲಿ ಆರೋಪಿಸಿದ್ದಾರೆ.

## ಬೈಕ್ ಟ್ಯಾಕ್ಸಿ ವಿರುದ್ಧ ಇಂದಿನಿಂದ ಕ್ರಮ: ಗ್ರಾಹಕರೆ ಎಚ್ಚರ!

• ಉದಯವಾಹಿನಿ, ಬೆಂಗಳೂರು

ಬೈಕ್ ಟ್ಯಾಕ್ಸಿ ಸೇವೆ ಸ್ಥಗಿತಗೊಳಿಸಬೇಕು ಎಂದು ಏಕಸದಸ್ಯ ನ್ಯಾಯಪೀಠ ನೀಡಿರುವ ಆದೇಶಕ್ಕೆ ತಡೆ ನೀಡಲು ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ನಿರಾಕರಿಸಿದ್ದು, ಸಾರಿಗೆ ಅಧಿಕಾರಿಗಳು ಬೈಕ್ ಟ್ಯಾಕ್ಸಿಗಳ ವಿರುದ್ಧ ಕ್ರಮ ಕೈಗೊಳ್ಳಲಿದ್ದಾರೆ.

ಮೋಟಾರು ವಾಹನ ಕಾಯ್ದೆ–1988ರ ಕಲಂ 93ರ ಅನುಸಾರ ರಾಜ್ಯ ಸರ್ಕಾರ ಸೂಕ್ತ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸುವ ತನಕ ಸಂಬಂಧಿತ ಸಂಸ್ಥೆಗಳಾದ ಓಲಾ, ಉಬರ್ ಮತ್ತು ರ‍್ಯಾಪಿಡೊ ಬೈಕ್ ಟ್ಯಾಕ್ಸಿ ಸೇವೆ ಸ್ಥಗಿತಗೊಳಿಸಬೇಕು ಎಂದು ಏಕಸದಸ್ಯ ನ್ಯಾಯಪೀಠ ಆದೇಶ ನೀಡಿತ್ತು.

ಈ ಆದೇಶದ ವಿರುದ್ಧ ಉಬರ್ ಇಂಡಿಯಾ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್, ರೊಪ್ಪೆನ್ ಟ್ರಾನ್ಸ್‌ಪೋರ್ಟೇಶನ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ (ರ‍್ಯಾಪಿಡೊ) ಮತ್ತು ಎಎನ್‌ಐ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ (ಓಲಾ) ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿ ಬೈಕ್ ಟ್ಯಾಕ್ಸಿ ಸೇವೆಯನ್ನು ರಾಜ್ಯದಲ್ಲಿ ಮುಂದುವರಿಸಲು ನಿರ್ದೇಶಿಸಬೇಕು' ಎಂದು ಕೋರಿದ್ದವು. ಆದರೆ, ಹೈಕೋರ್ಟ್ ವಿಭಾಗೀಯ ನ್ಯಾಯಪೀಠವು ನಿರಾಕರಿಸಿತ್ತು.



ಉದಯವಾಹಿನಿ ಚಿತ್ರ

ಜೂನ್ 16ರಿಂದ ಬೈಕ್ ಟ್ಯಾಕ್ಸಿಗಳು ಪ್ರಯಾಣಿಕರನ್ನು ಕರೆದೊಯ್ದರೆ ಮುಟ್ಟುಗೋಲು ಹಾಕಿಕೊಳ್ಳುವ, ರೂ 2,000ದಿಂದ 10 ಸಾವಿರದವರೆಗೆ ದಂಡ ಬೀಳುವ ಸಾಧ್ಯತೆ ಇದೆ. ಮೂರು ತಿಂಗಳಿನಿಂದ ಒಂದು ವರ್ಷದವರೆಗೆ ಜೈಲು ಶಿಕ್ಷೆಗೂ ಅವಕಾಶವಿದೆ.

> ಬೈಕ್ ಟ್ಯಾಕ್ಸಿಗಳನ್ನು ಸ್ಥಗಿತಗೊಳಿಸಬೇಕು ಎಂಬ ಹೈಕೋರ್ಟ್ ಆದೇಶವನ್ನು ಜಾರಿಗೊಳಿಸಲು ಸಾರಿಗೆ ಅಧಿಕಾರಿಗಳು ಸಿದ್ಧರಿದ್ದಾರೆ' ಎಂದು ಸಾರಿಗೆ ಇಲಾಖೆಯ ಕಾರ್ಯದರ್ಶಿ ಎನ್.ವಿ. ಪ್ರಸಾದ್ ತಿಳಿಸಿದ್ದಾರೆ. ಹೈಕೋರ್ಟ್ ಆದೇಶವನ್ನು ಬೈಕ್ ಟ್ಯಾಕ್ಸಿ ಕಂಪನಿಗಳು ಹೇಗೆ ಪಾಲನೆ ಮಾಡುತ್ತವೆ ಎಂದು ನೋಡಿಕೊಂಡು ಕ್ರಮ ಕೈಗೊಳ್ಳಲಾಗುವುದು ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತ ಎ.ಎಂ. ಯೋಗೀಶ್ ತಿಳಿಸಿದ್ದಾರೆ.

## ಬಿಬಿಎಂಪಿ ವ್ಯಾಪ್ತಿಯಲ್ಲಿ ಕಾವೇರಿ ನೀರು ಸರಬರಾಜುನಲ್ಲಿ ವ್ಯತ್ಯಯ

• ಉದಯವಾಹಿನಿ, ಬೆಂಗಳೂರು

ಬೃಹತ್ ಬೆಂಗಳೂರು ನಗರದ ಜನತೆಗೆ ಯಾವುದೇ ಅಡತಡೆಯಿಲ್ಲದೇ ನೀರನ್ನು ಸರಬರಾಜು ಮಾಡುವ ಸದುದ್ದೇಶದಿಂದ ಟಿ.ಕೆ. ಹಳ್ಳಿಯಲ್ಲಿ ಕಾವೇರಿ 5ನೇ ಹಂತದ ಕೊಳವೆ ಮಾರ್ಗಕ್ಕೆ ಹೊಸ 3000 ಮಿ.ಮೀ. ವ್ಯಾಸ ಕೊಳವೆ ಮಾರ್ಗದ ಜೋಡಣೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ಸೂಚಿಸಿರುವ ವಿದ್ಯುತ್ ಸ್ಥಾವರಗಳ ವಾರ್ಷಿಕ ನಿರ್ವಹಣೆ, ತುರ್ತು ಕಾಮಗಾರಿ ಮತ್ತು ವಿವಿಧ ವಾರ್ಷಿಕ/ನಿಯಮಿತ ತುರ್ತು ನಿರ್ವಹಣಾ ಕಾಮಗಾರಿಗಳನ್ನು ಶೀಘ್ರವಾಗಿ ಕೈಗೆತ್ತಿಕೊಳ್ಳಬೇಕಾಗಿರುತ್ತದೆ.

ಆದ್ದರಿಂದ ತುರ್ತು ನಿರ್ವಹಣಾ ಕಾಮಗಾರಿಗಳನ್ನ ಕೈಗೊಳ್ಳುವ ಸಲುವಾಗಿ ದಿನಾಂಕ: 19–06–2025 ರ ಗುರುವಾರ ಬೆಳಿಗ್ಗೆ 6–00 ಗಂಟೆಯಿಂದ ದಿನಾಂಕ: 20–06–2025 ಶುಕ್ರವಾರದ ಬೆಳಿಗ್ಗೆ 6–0 ಗಂಟೆಯವರೆಗೆ ಒಟ್ಟು 24 ಗಂಟೆಗಳ ಕಾವೇರಿ ನೀರು ಸರಬರಾಜು ಯೋಜನೆಯ ಹಂತ–1 ರಿಂದ ಹಂತ – 5 ರ ಎಲ್ಲಾ ಜಲರೇಚಕ ಯಂತ್ರಾಗಾರಗಳನು ಸ್ಥಗಿತಗೊಳಿಸಲು ಸಕ್ಷಮ ಪ್ರಾಧಿಕಾರದಿಂದ ಅನುಮತಿ ದೊರೆತಿರುತ್ತದೆ.

ಈ ಹಿನ್ನಲೆಯಲ್ಲಿ, 24 ಗಂಟೆಗಳ ಕಾಲ ಕಾವೇರಿ ನೀರು ಸರಬರಾಜು ಯೋಜನೆಯ ಹಂತ–1 ರಿಂದ ಹಂತ–5ರವರೆಗಿನ ಜಲರೇಚಕ ಯಂತ್ರಾಗಾರಗಳನ್ನು ಸ್ಥಗಿತಗೊಳಿಸಲಾಗುವುದು. ಇದರಿಂದಾಗಿ ಬೃಹತ್ ಬೆಂಗಳೂರು ನಗರ ಪ್ರದೇಶದ ವ್ಯಾಪ್ತಿಯಲ್ಲಿ ಕಾವೇರಿ ನೀರು ಸರಬರಾಜಿನಲ್ಲಿ ವ್ಯತ್ಯಯವಾಗುವುದರಿಂದ ಬೆಂಗಳೂರಿನ ನಾಗರೀಕರಿಗೆ ಹಾಗೂ ವಾಣಿಜ್ಯ/ಕೈಗಾರಿಕಾ ಪ್ರದೇಶಗಳಿಗೆ ಮುಂಜಾಗ್ರತೆಯಾಗಿ ಅಗತ್ಯವಿರುವ ನೀರನ್ನು ಸಂಗ್ರಹಣೆ ಮಾಡಿಕೊಳ್ಳುವಂತೆ ಕೋರಿದೆ.




## ಸ್ಮಾರ್ಟ್ ಮೀಟರ್: ಇನ್ನೂ ಜೋಡಣೆಯಾಗದ ತಂತ್ರಾಂಶ!

• ಉದಯವಾಹಿನಿ, ಬೆಂಗಳೂರು

ಹೊಸ ವಿದ್ಯುತ್ ಸಂಪರ್ಕಗಳು ಹಾಗೂ ತಾತ್ಕಾಲಿಕ ಸಂಪರ್ಕಕ್ಕಾಗಿ ಅಳವಡಿಸುತ್ತಿರುವ ಸ್ಮಾರ್ಟ್ ಮೀಟರ್‌ಗಳನ್ನು ಸಂಪೂರ್ಣವಾಗಿ ತಂತ್ರಾಂಶದೊಂದಿಗೆ ಸಮರ್ಪಕವಾಗಿ ಸಂಯೋಜಿಸದ ಕಾರಣ, ಅವು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ಗ್ರಾಹಕರು ದೂರುತ್ತಿದ್ದಾರೆ. ಸ್ಮಾರ್ಟ್ ಮೀಟರ್‌ಗಳನ್ನು ತಂತ್ರಾಂಶಕ್ಕೆ ಸರಿಯಾಗಿ ಜೋಡಣೆ ಮಾಡದಿದ್ದರೆ, ಆ ಮೀಟರ್‌ಗಳು ಸಾಮಾನ್ಯ ಡಿಜಿಟಲ್ ಮೀಟರ್‌ನಂತೆ ಕಾರ್ಯನಿರ್ವಹಿಸುತ್ತವೆ.



ಸ್ಮಾರ್ಟ್ ಮೀಟರ್‌ಗೆ ಅಗತ್ಯವಾಗಿ ಬೇಕಾಗಿರುವ ತಂತ್ರಾಂಶವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸದೇ, ಹೊಸ ವಿದ್ಯುತ್ ಸಂಪರ್ಕಗಳಿಗೆ ಅಳವಡಿಸಲಾಗುತ್ತಿದೆ ಎಂದು ಕರ್ನಾಟಕ ರಾಜ್ಯ ಪರವಾನಗಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದವರು ಕೆಎಸ್‌ಎಲ್‌ಇಸಿಎ ಆರೋಪಿಸಿದ್ದಾರೆ. ದುಬಾರಿ ಹಣದಲ್ಲಿ ಟಿ.ವಿ ಖರೀದಿಸಿ, ಅದರಲ್ಲಿ ಏನೂ ವೀಕ್ಷಿಸಲು ಸಾಧ್ಯವಾಗುತ್ತಿಲ್ಲ ಎಂಬಂತಾಗಿದೆ. ದುಬಾರಿ ಹಣ ತೆತ್ತು ಸ್ಮಾರ್ಟ್ ಮೀಟರ್ ಖರೀದಿಸಿರುವ ಗ್ರಾಹಕರ ಪರಿಸ್ಥಿತಿ' ಎಂದು ಕೆಎಲ್‌ಇಸಿಎ ಅಧ್ಯಕ್ಷ ಸಿ.ರಮೇಶ್ ಹೇಳಿದರು.

ಸ್ಮಾರ್ಟ್ ಮೀಟರ್ ಅಳವಡಿಕೆ ಕಡ್ಡಾಯಗೊಳಿಸುವ ಮುನ್ನ ಬೆಸ್ಕಾಂ, ಎಲ್ಲಾ ರೀತಿಯ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಿತ್ತು ಎಂದು ಸ್ಮಾರ್ಟ್ ಮೀಟರ್ ಅಳವಡಿಕೆಯ ಒತ್ತಡ ಎದುರಿಸಿದ ಹಲವು ಗ್ರಾಹಕರು ಅಭಿಪ್ರಾಯಪಟ್ಟಿದ್ದಾರೆ. ಸ್ಮಾರ್ಟ್ ಮೀಟರ್ ಹಲವು ವೈಶಿಷ್ಟ್ಯಗಳನ್ನು ಹೊಂದಿದೆ. ಇದರಿಂದ ವಿದ್ಯುತ್ ಬಳಕೆ ಮಾಪನ, ಇತರೆ ವಿವರಗಳನ್ನು ಟ್ರ್ಯಾಕ್ ಮಾಡಬಹುದು ಎಂದು ಹೇಳಲಾಗಿತ್ತು. ಆದರೆ, ಈ ಸ್ಮಾರ್ಟ್ ಮೀಟರ್‌ಗಳು ಸಾಮಾನ್ಯ ಡಿಜಿಟಲ್ ಮೀಟರ್‌ನಂತೆ ಕಾರ್ಯನಿರ್ವಹಿಸುತ್ತಿವೆ.

ಹಾಗಿದ್ದಲ್ಲಿ ನಾವು ಏಕೆ ಹೆಚ್ಚು ಹಣ ಪಾವತಿಸಬೇಕು ಎಂದು ಜೆ.ಪಿ ನಗರದ ನಿವಾಸಿಯೊಬ್ಬರು ಪ್ರಶ್ನಿಸಿದರು. 'ಗ್ರಾಹಕರಿಗೆ ನೀಡಿರುವ ಮೀಟರ್‌ಗಳಿಗೆ ತಂತ್ರಾಂಶವನ್ನು ಸಂಯೋಜಿಸಬೇಕಿದೆ ಹಾಗೂ ಬಳಕೆದಾರ ಇಂಟರ್‌ಫೇಸ್ ಅನ್ನು ಒದಗಿಸಿಲ್ಲ ಎಂಬುದನ್ನು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಎನ್. ಶಿವಶಂಕರ್ ಒಪ್ಪಿಕೊಂಡರು. ಈಗಾಗಲೇ ಸಂವಹನ ವ್ಯವಸ್ಥೆ ಸಿದ್ಧವಾಗಿದ್ದು.

ರಿಮೋಟ್ ಮೂಲಕ ವಿದ್ಯುತ್ ಬಳಕೆಯನ್ನು ಟ್ರ್ಯಾಕ್ ಮಾಡಲು ಸಮರ್ಥರಾಗಿದ್ದೇವೆ.

> ಆದರೆ, ಬೆಸ್ಕಾಂನವರು ರಿಮೋಟ್ ಮೂಲಕ ಮೀಟರ್ ರೀಡಿಂಗ್ ಮಾಡಲು ಇನ್ನೂ ಪೂರ್ಣಪ್ರಮಾಣದಲ್ಲಿ ಸಿದ್ಧರಾಗಿಲ್ಲ' ಎಂದು ವಿದ್ಯುತ್ ಗುತ್ತಿಗೆದಾರರು ಬಲವಾಗಿ ವಾದಿಸುತ್ತಾರೆ.'ಬೆಸ್ಕಾಂನವರು ರಿಮೋಟ್ ಮೂಲಕ ಮೀಟರ್ ರೀಡಿಂಗ್ ಮಾಡಲು ಸಮರ್ಥರಿದ್ದರೆ, ಮೀಟರ್ ರೀಡರ್‌ಗಳು ಏಕೆ ಸ್ಮಾರ್ಟ್ ಮೀಟರ್ ಅಳವಡಿಸಿರುವ ಮನೆಗಳಿಗೆ ಭೇಟಿ ನೀಡುತ್ತಿದ್ದಾರೆ. ಸ್ಮಾರ್ಟ್ ಮೀಟರ್‌ಗೆ ಸಂಬಂಧಿಸಿದ ಎಲ್ಲಾ ಕೆಲಸಗಳು ಪೂರ್ಣಗೊಂಡಿರುವ ವಿಶ್ವಾಸವಿದ್ದರೆ, ಅದನ್ನು ಸಾಬೀತುಪಡಿಸಲಿ. ನಾವು ಸ್ಮಾರ್ಟ್ ಮೀಟರ್ ಇರುವ ಗ್ರಾಹಕರ ಆರ್.ಆರ್ ನಂಬರ್ ಒದಗಿಸುತ್ತೇವೆ. ಅವರು ಆ ಮೀಟರ್‌ನ ರೀಡಿಂಗ್ ತೋರಿಸಲಿ' ಎಂದು ರಮೇಶ್ ಸವಾಲು ಹಾಕಿದರು.

ಈ ಸೌಲಭ್ಯವನ್ನು ಗ್ರಾಹಕರಿಗೆ ತಲುಪಿಸುವುದು ಬಾಕಿ ಇದೆ. ಈ ಪ್ರಕ್ರಿಯೆ ಹಂತ ಹಂತವಾಗಿ ನಡೆಯಲಿದೆ' ಎಂದು ಅವರು ತಿಳಿಸಿದರು.

## ಸಿಗ್ನಲಿಂಗ್ ಸಮಸ್ಯೆ: ನಮ್ಮ ಮೆಟ್ರೋ ನೇರಳೆ ಮಾರ್ಗ ಸಂಚಾರದಲ್ಲಿ ವ್ಯತ್ಯಯ

• ಉದಯವಾಹಿನಿ, ಬೆಂಗಳೂರು

ಸಿಗ್ನಲಿಂಗ್ ಸಮಸ್ಯೆಯಿಂದಾಗಿ ನಮ್ಮ ಮೆಟ್ರೋ ನೇರಳೆ ಮಾರ್ಗದಲ್ಲಿ ಸಂಚಾರ ವ್ಯತ್ಯಯ ಉಂಟಾಗಿದ್ದು, ಪರಿಣಾಮ ವಾರಾಂತ್ಯದ ರಜೆ ಬಳಿಕ ಸೋಮವಾರ ಕೆಲಸ, ಕಚೇರಿ, ಕಾಲೇಜುಗಳಿಗೆ ಹೊರಟವರು ಸಮಸ್ಯೆ ಎದುರಿಸುವಂತಾಗಿದೆ. ಪೀಕ್ ಅವರ್ ನಲ್ಲೇ ವ್ಯತ್ಯಯ ಎದುರಾಗಿದ್ದು, ನಮ್ಮ ಮೆಟ್ರೋ ಸಂಚಾರದ ಮೇಲೆ ಅವಲಂಬಿತರಾಗಿರುವ ಜನರು ಪೇಚಾಡುವಂತಾಗಿದೆ. ಮೆಜೆಸ್ಟಿಕ್ ಮೆಟ್ರೋ ನಿಲ್ದಾಣ ಹಸಿರು ಹಾಗೂ ನೇರಳೆ ಬಣ್ಣದ ಇಂಟರ್‌ಚೇಂಜ್ ನಿಲ್ದಾಣವೂ ಆಗಿದ್ದು, ನಿಲ್ದಾಣದಲ್ಲಿ ಭಾರೀ ಜನ ದಟ್ಟಣೆ ಉಂಟಾಗಿದೆ. ನಿಮಿಷ ನಿಮಿಷಕ್ಕೂ ನೂರಾರು ಪ್ರಯಾಣಿಕರ ದಟ್ಟಣೆ ಉಂಟಾಗಿ ಮೆಜೆಸ್ಟಿಕ್ ನಿಲ್ದಾಣದಲ್ಲಿ ಕಾಲಿಡಲೂ ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆ ಎಂದು ತಿಳಿದುಬಂದಿದೆ. ಸಿಗ್ನಲಿಂಗ್ ಸಮಸ್ಯೆಯಿಂದಾಗಿ ಸಂಚಾರದಲ್ಲಿ ವ್ಯತ್ಯಯ ಎದುರಾಗಿತ್ತು. ನೇರಳೆ ಮಾರ್ಗದಲ್ಲಿ ಸಿಗ್ನಲ್ ಸಮಸ್ಯೆಯಾಗಿತ್ತು. ಇದೀಗ ಎಲ್ಲವೂ ಸರಿ ಹೋಗಿದ್ದು ಸಹಜ ಸ್ಥಿತಿಗೆ ಮರಳುತ್ತಿದೆ. ಇದೀಗ ಮೆಟ್ರೋ ಕಾರ್ಯಾಚರಣೆ ಎಂದಿನಂತೆ ಇದೆ ಎಂದು ಬಿಎಂಆರ್'ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.




# ಜು.1ರಿಂದ ಮೊಬೈಲ್ ಹಾಜರಾತಿ ಕಡ್ಡಾಯ..!

### ಹೊಸ ಸೌಲಭ್ಯಗಳಿಗೆ ವಿಸ್ತರಿಸಲು ಹಾರ್ಡ್‌ವೇರ್ ಹೂಡಿಕೆಗಳು, ಭೌತಿಕ ಸ್ಥಾಪನಾ ಪ್ರಕ್ರಿಯೆಗಳ ಅಗತ್ಯ

• ಉದಯವಾಹಿನಿ, ಬೆಂಗಳೂರು

ಆರೋಗ್ಯ ಇಲಾಖೆಯಲ್ಲಿ ಪಾರದರ್ಶಕ ವ್ಯವಸ್ಥೆ ಜಾರಿಗೆ ತರಲು ರಾಜ್ಯ ಸರ್ಕಾರ ಮುಂದಾಗಿದ್ದು, ಈ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು ಸೇರಿದಂತೆ ಸಿಬ್ಬಂದಿಗಳಿಗೆ ಮೊಬೈಲ್ ಹಾಜರಾತಿಯನ್ನು ಕಡ್ಡಾಯಗೊಳಿಸಿದೆ.

ಈ ಸಂಬಂಧ ಆರೋಗ್ಯ ಇಲಾಖೆ ಆದೇಶ ಹೊರಡಿಸಿದ್ದು, ಆರೋಗ್ಯ, ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಪ್ರಸ್ತುತ ಬಳಸಲ್ಪಡುತ್ತಿರುವ ಹಾಜರಾತಿ ನಿರ್ವಹಣಾ ವ್ಯವಸ್ಥೆಯು ಮೀಸಲಾದ ಹಾರ್ಡ್‌ವೇರ್ ಸಾಧನಗಳ ಮೂಲಕ ಆಧಾರ್ ಆಧಾರಿತ ಬಯೋಮೆಟ್ರಿಕ್ ಪ್ರಮಾಣೀಕರಣವನ್ನು ಅವಲಂಭಿಸಿದೆ. ಹಾರ್ಡ್‌ವೇರ್ ಸಾಧನಗಳಿಗೆ ಆಗಾಗ್ಗೆ ನಿರ್ವಹಣೆ, ದುರಸ್ತಿ ಮತ್ತು ಆವರ್ತಕ ಬದಲಾವಣೆಗಳ ಅಗತ್ಯವಿದ್ದು, ಇದು ಇಲಾಖೆಗೆ ಗಣನೀಯ ಪುನರಾವರ್ತಿತ ವೆಚ್ಚಗಳಿಗೆ ಕಾರಣವಾಗಿದೆ. ಬಯೋಮೆಟ್ರಿಕ್ ಸಾಧನಗಳ ಸ್ಥಿರ ಸ್ವರೂಪದಿಂದಾಗಿ ಹಾಜರಾತಿ ಗುರುತಿಸುವಿಕೆಯನ್ನು ನಿರ್ದಿಷ್ಟ ಸ್ಥಳಗಳಿಗೆ ಸೀಮಿತಗೊಳಿಸಿದೆ. ಕ್ಷೇತ್ರ ಸಿಬ್ಬಂದಿ ಮತ್ತು ದೂರದ ಪ್ರದೇಶಗಳಲ್ಲಿ ಕೆಲಸ ಮಾಡುವವರಿಗೆ ಅಸಮರ್ಥತೆಗಳನ್ನು ಸೃಷ್ಟಿಸುತ್ತದೆ.



ಉದಯವಾಹಿನಿ ಚಿತ್ರ

ಈ ವ್ಯವಸ್ಥೆಯ ಸೀಮಿತ ವಿಸ್ತರಣೆ, ಅಂದರೆ ಹೊಸ ಸೌಲಭ್ಯಗಳಿಗೆ ವಿಸ್ತರಿಸಲು ಹಾರ್ಡ್‌ವೇರ್ ಹೂಡಿಕೆಗಳು ಮತ್ತು ಭೌತಿಕ ಸ್ಥಾಪನಾ ಪ್ರಕ್ರಿಯೆಗಳ ಅಗತ್ಯವಿದೆ. ಇದಲ್ಲದೆ, ಹಾರ್ಡ್‌ವೇರ್ ವೈಫಲ್ಯಗಳು ಮತ್ತು ಸಂಪರ್ಕ ಸಮಸ್ಯೆಗಳು ಆಗಾಗ್ಗೆ ವ್ಯವಸ್ಥೆಯ ಡೌನ್‌ಟೈಮ್‌ಗೆ ಕಾರಣವಾಗುತ್ತದೆ. ಆರೋಗ್ಯ, ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ 2025–26ನೇ ಸಾಲಿನ ಬಜೆಟ್ ಭಾಷಣದ ಕಂಡಿಕೆ–152() ರಲ್ಲಿ ಮೊಬೈಲ್ ತಂತ್ರಾಂಶದ ಮೂಲಕ ಹಾಜರಾತಿ ನೀಡುವ ವ್ಯವಸ್ಥೆಯನ್ನು ಜಾರಿಗೆ ತರಲಾಗುವುದು'' ಎಂದು ಘೋಷಿಸಲಾಗಿದೆ. ಅದರಂತೆ ಕರ್ನಾಟಕದ ಎಲ್ಲಾ 12000 ಆರೋಗ್ಯ ಸಂಸ್ಥೆಗಳನ್ನು ಒಳಗೊಂಡು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಾದ್ಯಂತ ಕರ್ನಾಟಕ ಹಾಜರಾತಿ ನಿರ್ವಹಣಾ ವ್ಯವಸ್ಥೆ ಅನುಷ್ಠಾನಗೊಳಿಸುವುದನ್ನು ಪ್ರಸ್ತಾಪಿಸಲಾಗಿದ್ದು, ವ್ಯವಸ್ಥೆಯು ಆಧಾರ್ ಆಧಾರಿತ ಮುಖ ಪಮಾಣೀಕರಣ, ಭೌಗೋಳಿಕ ನಿರ್ದಿಷ್ಟಾಂಕಗಳೊಳಗೆ ಕ್ಷೇತ್ರದಲ್ಲಿ ಹಾಜರಾತಿ ಗುರುತಿಸಲು ಸೌಲಭ್ಯವನ್ನು ನೀಡುತ್ತದೆ.

ಮೊಬೈಲ್ ಆಧಾರಿತ ಪರಿಹಾರವು ಹಾರ್ಡ್‌ವೇರ್‌ನ ಅಗತ್ಯವನ್ನು ತೆಗೆದುಹಾಕುತ್ತದೆ ಮತ್ತು ಕಾರ್ಯಾಚರಣೆಯ ವೆಚ್ಚಗಳನ್ನು ಕಡಿಮೆ ಮಾಡಲಿದೆ. ಹಾಜರಾತಿ ಮೇಲ್ವಿಚಾರಣೆ ಮತ್ತು ಕಾರ್ಯಬಲ ನಿರ್ವಹಣೆಯನ್ನು ಸುಧಾರಿಸಲಿದೆ, ಆದ್ದರಿಂದ ಮೊಬೈಲ್ ಆಧಾರಿತ ಹಾಜರಾತಿ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.


ಈ ಯೋಜನೆಯು ಸ್ವತಂತ್ರವಾಗಿ ಇ–ಆಡಳಿತ ಚೌಕಟ್ಟಿನೊಳಗೆ ಕಾರ್ಯನಿರ್ವಹಿಸಲಿದ್ದು, ಕರ್ನಾಟಕದ ಎಲ್ಲಾ ಆರೋಗ್ಯ ಸಂಸ್ಥೆಗಳನ್ನೊಳಗೊಂಡಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಾದ್ಯಂತ ಮೊಬೈಲ್ ಆಧಾರಿತ ಹಾಜರಾತಿ ವ್ಯವಸ್ಥೆಯನ್ನು ಅನುಷ್ಠಾನಗೊಳಿಸುವಂತೆ ಆದೇಶಿಸಿದೆ.

> ಈ ಕುರಿತು ಪ್ರತಿಕ್ರಿಯೆ ನೀಡಿರುವ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು, ಪಾರದರ್ಶಕ ವ್ಯವಸ್ಥೆ ತರುವತ್ತು ರಾಜ್ಯದ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು ಸೇರಿದಂತೆ ಸಿಬ್ಬಂದಿಗಳಿಗೆ ಮೊಬೈಲ್ ಹಾಜರಾತಿ ಕಡ್ಡಾಯಗೊಳಿಸಲಾಗುತ್ತಿದೆ. ನೂತನ ಹಾಜರಾತಿ ವ್ಯವಸ್ಥೆಗೆ ಆರೋಗ್ಯ ಇಲಾಖೆ ಅಧಿಕಾರಿ, ನೌಕರರು ಸಹಕರಿಸುವಂತೆ ನಾನು ಮನವಿ ಮಾಡುತ್ತೇನೆ. ಜುಲೈ 1 ಮೊಬೈಲ್ ಹಾಜರಾಗಿ ಜಾರಿಗೆ ಬರಲಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರು ಸಿಗುವುದಿಲ್ಲ ಎಂಬ ಸಾರ್ವಜನಿಕರ ದೂರುಗಳು ಇನ್ಮುಂದೆ ಕಡಿಮೆಯಾಗಲಿವೆ ಎಂಬ ನಿರೀಕ್ಷೆ ನನಗಿದೆ ಎಂದು ಹೇಳಿದ್ದಾರೆ.

## ಇಸ್ರೇಲ್‌ನಲ್ಲಿ ಸಿಲುಕಿರುವ ಕನ್ನಡಿಗರ ಜೊತೆ ಮಾತನಾಡಿದ ಎಚ್‌ಡಿಕೆ, ರಕ್ಷಣೆಯ ಭರವಸೆ

• ಉದಯವಾಹಿನಿ, ಬೆಂಗಳೂರು

ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷ ತಾರಕಕ್ಕೇರಿದ್ದು, ಈ ನಡುವಲ್ಲೇ ಇಸ್ರೇಲ್ ನಲ್ಲಿ ಸಂಕಷ್ಟಕ್ಕೆ ಸಿಲುಕಿರುವ ಕನ್ನಡಿಗರೊಂದಿಗೆ ಕೇಂದ್ರ ಭಾರೀ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಮಾತುಕತೆ ನಡೆಸಿ, ರಕ್ಷಣೆಯ ಭರವಸೆ ನೀಡಿದರು.



ಇಸ್ರೇಲ್‌ನಲ್ಲಿ ಸಿಲುಕಿರುವ ಹಲವಾರು ಕನ್ನಡಿಗರೊಂದಿಗೆ ವೀಡಿಯೋ ಕರೆ ಮಾಡಿದ ಕುಮಾರಸ್ವಾಮಿಯವರು, ಅವರ ಕ್ಷೇಮ, ಸುರಕ್ಷತೆ ಬಗ್ಗೆ ಮಾಹಿತಿ ಪಡೆದುಕೊಂಡರು. ಈ ವೇಳೆ ಕೇಂದ್ರ ಸರಕಾರದಿಂದ ಸಂಪೂರ್ಣ ಬೆಂಬಲದ ಭರವಸೆ ನೀಡಿದರು.

ಕಚೇರಿಯ ಅಧಿಕಾರಿಗಳು ಅಗತ್ಯ

ನಮ್ಮ ಜನರು ಸುರಕ್ಷಿತವಾಗಿ ಮತ್ತು ತ್ವರಿತವಾಗಿ ತಾಯ್ನಾಡಿಗೆ ಮರಳುವುದನ್ನು ಖಚಿತಪಡಿಸಿಕೊಳ್ಳಲು ವಿದೇಶಾಂಗ ಸಚಿವಾಲಯದೊಂದಿಗೆ ಈ ವಿಷಯವನ್ನು ತಕ್ಷಣವೇ ಚರ್ಚಿಸುವುದಾಗಿ ಸಚಿವರು ಹೇಳಿದರು. ವೀಡಿಯೋ ಕರೆಯ ಮೂಲಕ ಮಾತನಾಡಿದ ಎಲ್ಲಾ ಕನ್ನಡಿಗರು, ತಾವು ಸುರಕ್ಷಿತರಾಗಿದ್ದೇವೆ ಮತ್ತು ಟೆಲ್ ಅವೀವ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯ ಅಧಿಕಾರಿಗಳು ಅಗತ್ಯವಿರುವ ಎಲ್ಲಾ ಸಹಾಯವನ್ನು ನೀಡುತ್ತಿದ್ದಾರೆ ಎಂದು ಸಚಿವರಿಗೆ ತಿಳಿಸಿದರು.

ನಮ್ಮನ್ನು ಚೆನ್ನಾಗಿ ನೋಡಿಕೊಳ್ಳಲಾಗುತ್ತಿದೆ ಎಂದು ಸಚಿವರಿಗೆ ಮಾಹಿತಿ ನೀಡಿದರಲ್ಲದೆ, ಇದಕ್ಕಾಗಿ ರಾಯಭಾರ ಕಚೇರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು. ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಭಾರತ ಸರಕಾರವು ವಿದೇಶದಲ್ಲಿರುವ ಭಾರತೀಯ ಪ್ರಜೆಗಳ ಸುರಕ್ಷತೆ ಮತ್ತು ಯೋಗ ಕ್ಷೇಮವನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ತಿಳಿಸಿದರು.

# ಸಿಎಂ, ಡಿಸಿಎಂ ರಾಜೀನಾಮೆಗೆ ಆಗ್ರಹ ಮದ್ದೂರಿನಲ್ಲಿ ಬಿಜೆಪಿಯಿಂದ ಪ್ರತಿಭಟನೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಮದ್ದೂರು

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಇತ್ತೀಚೆಗೆ ಕಾಲ್ತುಳಿತಕ್ಕೆ 11 ಮಂದಿ ಸಾವನ್ನಪ್ಪಿದ ಘಟನೆಗೆ ಸಂಬಂಧಪಟ್ಟಂತೆ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗೂ ಗೃಹಸಚಿವರು ಕೂಡಲೇ ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ಬಿಜೆಪಿ ತಾಲ್ಲೂಕು ಘಟಕದವತಿಯಿಂದ ಪಟ್ಟಣದ ತಾಲ್ಲೂಕು ಕಚೇರಿ ಎದುರು ಸೋಮವಾರ ಪ್ರತಿಭಟನೆ ನಡೆಯಿತು. ಬಿಜೆಪಿ ತಾಲ್ಲೂಕು ಘಟಕದ ಅಧ್ಯಕ್ಷ ಶಿವದಾಸ್ ಸತೀಶ್ ಮಾತನಾಡಿ, ಕಾಲ್ತುಳಿತದಿಂದ 11 ಮಂದಿ ಸಾವನ್ನಪ್ಪಿರುವುದು ತಲೆ ತಗ್ಗಿಸುವಂತಹ ಘಟನೆ. ಇದಕ್ಕೆ ರಾಜ್ಯ ಸರ್ಕಾರದ ವೈಫಲ್ಯ ಹಾಗೂ ಅವಿವೇಕಿತನದ ನಿರ್ಧಾರಗಳು ಕಾರಣ ಎಂದು ಆರೋಪಿಸಿದರು. ಆರ್‌ಸಿಬಿ ಖಾಸಗಿ ಒಡೆತನದ ತಂಡ ಹಾಗೂ ಐಪಿಎಲ್ ಒಂದು ಟೂರ್ನಿಯಷ್ಟೇ. ಅಷ್ಟಕ್ಕೆ ವಿಶ್ವಕಪ್, ರಾಜ್ಯ ತಂಡವು ರಣಜಿ ಟ್ರೋಫಿ ಗೆದ್ದಂತೆ ಸಂಭ್ರಮಿಸುವುದು ಸರಿಯಲ್ಲ. ಐಪಿಎಲ್ ವಿಜಯೋತ್ಸವದ ವೇಳೆ ದೇಶ ಅಥವಾ ರಾಜ್ಯ ತಂಡ ಗೆದ್ದ ಹಾಗೆ ವಿಜಯೋತ್ಸವವನ್ನು ಈ ಪರಿಯಲ್ಲಿ ಆಚರಿಸುವ ಅಗತ್ಯ ಏನಿತ್ತು ಎಂದು ಪ್ರಶ್ನಿಸಿದರು. ಪಂದ್ಯ ನಡೆದು 24 ಗಂಟೆಯೂ ಆಗಿರಲಿಲ್ಲ, ಯಾವುದೇ ಪೂರ್ವಸಿದ್ಧತೆ ಕೈಗೊಳ್ಳದೇ ಆತುರದಲ್ಲಿ ಮರುದಿನವೇ ಮಾಡುವ ಅವಸರವೇನಿತ್ತು ಎಂದು ಕಿಡಿಕಾರಿದರು. ಬಡ ಹಾಗೂ ಮಧ್ಯಮ ವರ್ಗದವರಿಗೆ ಸಹಾಯವಾಗಲೆಂದು ಪ್ರಧಾನಿ ನರೇಂದ್ರ ಮೋದಿ ಅವರು ಜನೌಷಧ ಕೇಂದ್ರಗಳನ್ನು ಜಾರಿಗೆ ತಂದಿದ್ದರು. ಜನಸಾಮಾನ್ಯರಿಗೆ ಕಡಿಮೆ ದರಕ್ಕೆ ಔಷಧಿಗಳು ದೊರೆಯುತ್ತಿದ್ದವು. ಆದರೆ ರಾಜ್ಯ ಸರ್ಕಾರ ಅವುಗಳನ್ನು ಮುಚ್ಚಲು ಹೊರಟಿರುವುದು ಸರಿಯಲ್ಲ ಎಂದು ಹೇಳಿದರು. ಕೂಡಲೇ ರಾಜೀನಾಮೆ ನೀಡದಿದ್ದರೆ ರಾಜ್ಯವ್ಯಾಪಿ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು. ತಹಶೀಲ್ದಾರ್ ಸ್ಮಿತಾ ಅವರಿಗೆ ಮನವಿ ಸಲ್ಲಿಸಲಾಯಿತು.

### ಯತೀಂದ್ರಗೆ ಜಾತಿ ಗಣತಿ ಬಗ್ಗೆ ಗೊತ್ತಿಲ್ಲ, ಕುರ್ಚಿ ಉಳಿಸಿಕೊಳ್ಳಲು ಸಿದ್ದರಾಮಯ್ಯ ಹೆಣಗಾಟ

# ಕಾಂಗ್ರೆಸ್‌ನಲ್ಲಿ ಸಿಎಂ ಕುರ್ಚಿಗಾಗಿ ಕಿತ್ತಾಟ: ಪ್ರತಾಪ್ ಸಿಂಹ

• ಉದಯವಾಹಿನಿ, ಮೈಸೂರು





ಯತೀಂದ್ರ ಸಿದ್ದರಾಮಯ್ಯ ಅವರಿಗೆ ಜಾತಿಗಣತಿ ಬಗ್ಗೆ ಏನೂ ತಿಳಿದಿಲ್ಲ. ಅವರು ಸೋಷಿಯೋ ಎಕನಾಮಿಕ್ ಬಗ್ಗೆ ತಿಳಿದುಕೊಳ್ಳಬೇಕು. ಲಿಂಗಾಯತರು ವಿರೋಧಿಸಿದ್ದರಿಂದ ಮತ್ತೆ ಜಾತಿಗಣತಿ ಮಾಡುತ್ತೇವೆ ಎನ್ನುತ್ತಿದ್ದಾರೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಸಿಎಂ ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಜಾತಿ ಗಣತಿ ಮರು ಸಮೀಕ್ಷೆ ಮತ್ತು ಸಿಎಂ ಸಿದ್ದರಾಮಯ್ಯ ಕುರಿತು ಪ್ರತಾಪ್ ಸಿಂಹ ಮಾತನಾಡಿ, ಸಿಎಂ ಸಿದ್ದರಾಮಯ್ಯನವರು ಕುರ್ಚಿ ಉಳಿಸಿಕೊಳ್ಳಲು ಪ್ರತಿದಿನ ಜನರನ್ನು ಬೇರೆಡೆಗೆ ಗಮನಹರಿಸುವಂತೆ ಮಾಡುತ್ತಿದ್ದಾರೆ. ಒಬ್ಬರು ಕುರ್ಚಿ ಉಳಿಸಿಕೊಳ್ಳಲು ನೋಡುತ್ತಿದ್ದಾರೆ. ಇನ್ನೊಬ್ಬರು ಕುರ್ಚಿಗಾಗಿ ಎಳೆದಾಡುತ್ತಿದ್ದಾರೆ. ಇಬ್ಬರ ಕುರ್ಚಿ ಗಲಾಟೆಯಲ್ಲಿ ನಮಗೇನಾದರೂ ಲಾಭ ಆಗುತ್ತಾ ಅಂತ ಇನ್ನೊಂದು ಸ್ವಲ್ಪ ಜನ ಕಾಯುತ್ತಿದ್ದಾರೆ ಎಂದು ಪ್ರತಾಪ್ ಸಿಂಹ ವ್ಯಂಗ್ಯವಾಡಿದ್ದಾರೆ.

**ಮೈಸೂರಿಗಾಗಿ ಬಿಡಿಗಾಸು ಕೆಲಸ ಮಾಡಿಲ್ಲ:** ಸಿದ್ದರಾಮಯ್ಯ ಮೈಸೂರಿಗೆ ಏನು ಅಭಿವೃದ್ಧಿ ಕೆಲಸ ಮಾಡಲಿಲ್ಲ. ಸಿಎಂ ಸ್ಥಾನದಿಂದ ಸಿದ್ದರಾಮಯ್ಯ ಬದಲಾಗುತ್ತಾರಾ ಅನ್ನೋದನ್ನಾ ಡಿಕೆ ಶಿವಕುಮಾರ್ ಅವರನ್ನು ಕೇಳಿ. ಇದರಲ್ಲಿ ತಂತ್ರ, ಮಂತ್ರ ಏನು ಮಾಡಿದ್ದಾರೋ ಗೊತ್ತಿಲ್ಲ. ನವೆಂಬರ್‌ನಲ್ಲಿ ಬದಲಾವಣೆ ಆಗುತ್ತೋ ಇಲ್ಲವೋ ಗೊತ್ತಿಲ್ಲ. ಆದರೆ, ಇನ್ನೂ 3 ವರ್ಷ ಇವರ ಕುರ್ಚಿ ಕಿತ್ತಾಟದ ಅಸಹ್ಯ ನಡೆಯುತ್ತಲೇ ಇರುತ್ತದೆ. ರಾಜ್ಯದ ಜನ ಅಂತೂ ಅವರಿಗೆ 136 ಸೀಟು ಕೊಟ್ಟಿದ್ದಾರೆ. ಹಾಗಾಗಿ ಇನ್ನು 3 ವರ್ಷ ಇವರ ಕಿತ್ತಾಟ ನೋಡಬೇಕು ಎಂದು ಪ್ರತಾಪ್ ಸಿಂಹ ಹೇಳಿದ್ದಾರೆ. ಮಾಜಿ ಸಂಸದ ಪ್ರತಾಪ್ ಸಿಂಹ ಅವರು ರಾಜ್ಯ ಸರ್ಕಾರದ ಜಾತಿಗಣತಿ ನಿರ್ಧಾರವನ್ನು ಟೀಕಿಸಿದ್ದಾರೆ. ಸಿದ್ದರಾಮಯ್ಯ ಅವರು ಕುರ್ಚಿ ಉಳಿಸಿಕೊಳ್ಳಲು ಜನರ ಗಮನ ಬೇರೆಡೆಗೆ ಸೆಳೆಯುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ಅಲ್ಲದೆ, ಈ ಗಣತಿಯಿಂದ 150 ಕೋಟಿ ರೂ. ವ್ಯರ್ಥವಾಗುತ್ತದೆ ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರವೇ ಜಾತಿಗಣತಿ ನಡೆಸುತ್ತಿರುವಾಗ ರಾಜ್ಯ ಸರ್ಕಾರಕ್ಕೆ ಇದು ಬೇಕಿಲ್ಲ. ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರ ಕುರ್ಚಿ ಕಿತ್ತಾಟದಿಂದ ಜನರಿಗೆ ಯಾವುದೇ ಲಾಭವಾಗುವುದಿಲ್ಲ ಎಂದು ಪ್ರತಾಪ್ ಸಿಂಹ ಗುಡುಗಿದರು.



**50 ಕೋಟಿ ರೂ.** **ಖರ್ಚು ಮಾಡಿ ಕಾಟಾಚಾರಕ್ಕೆ ಗಣತಿ:** ಹುಳುಕು ಮುಚ್ಚಿಕೊಳ್ಳಲು ಯತೀಂದ್ರ ಸಿದ್ದರಾಮಯ್ಯ ಏನೇನೋ ಹೇಳಬೇಡಿ. ಸಿಎಂ ಸಿದ್ದರಾಮಯ್ಯ 150 ಕೋಟಿ ವ್ಯಯ ಮಾಡಿ ಕಾಟಾಚಾರಕ್ಕೆ ಜಾತಿ ಗಣತಿ ಮಾಡಿದ್ದರು. ಇದನ್ನು ಬಿಜೆಪಿ, ಜೆಡಿಎಸ್ ವಿರೋಧ ಮಾಡಿತು. ಇದು ಅವೈಜ್ಞಾನಿಕ ಅಂತ ಎಲ್ಲರಿಗೂ ಗೊತ್ತಿತ್ತು. ಈಗ ರಾಹುಲ್ ಗಾಂಧಿ ಭೇಟಿ ಮಾಡಿದ ಬಳಿಕ ಮತ್ತೊಂದು ಬಾರಿ ಸಮೀಕ್ಷೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಇದರಿಂದ 150 ಕೋಟಿ ಹಣ ವ್ಯರ್ಥವಾಗಿದೆ ಎಂದು ಕಿಡಿಕಾರಿದರು. ಕೇಂದ್ರ ಸರ್ಕಾರ ಜಾತಿಗಣತಿ ಮಾಡುತ್ತೇವೆ ಎಂದು ಹೇಳಿದೆ. ಹೀಗಿರುವಾಗ ಮತ್ತೊಂದು ಬಾರಿ ನಿಮ್ಮ ಗಣತಿ ಮಾಡುವುದು ಬೇಡ. ಇದು ಸರ್ಕಾರದ ವೈಫಲ್ಯ ಮುಚ್ಚಿಕೊಳ್ಳಲು ಮಾಡುತ್ತಿರುವ ತಂತ್ರ ಅಷ್ಟೇ ಎಂದು ಅವರು ಆರೋಪಿಸಿದ್ದಾರೆ. ಕೇಂದ್ರ ಸರ್ಕಾರ ರಾಜಕೀಯವಾಗಿ ಬಲ ತೋರಿಸಲು ಈ ಸರ್ವೇ ಮಾಡುತ್ತಿಲ್ಲ. ಜನರ ಆರ್ಥಿಕ ಸ್ಥಿತಿಗತಿ ಬಗ್ಗೆ ತಿಳಿಯಲು ಸರ್ವೇ ಮಾಡುತ್ತಿದೆ. ನಮ್ಮ ಸರ್ವೇ ಆಗುತ್ತದೆ, ನೀವು ಸುಮ್ಮನೆ ಇರಿ. ನಿಮ್ಮ ಸರ್ವೇ ನಮಗೆ ಅಗತ್ಯವಿಲ್ಲ ಎಂದು ಪ್ರತಾಪ್ ಸಿಂಹ ಹೇಳಿದ್ದಾರೆ.

> **ಸಿದ್ದು ಕುರ್ಚಿ ಬಿಟ್ಟುಕೊಡಲಿ**
>
> ಕಾಂಗ್ರೆಸ್‌ನಲ್ಲಿ 39 ಜನ ಲಿಂಗಾಯತ ಶಾಸಕರು ಇದ್ದಾರೆ. ವಿರೋಧವಿದ್ದರೆ ಸಿದ್ದರಾಮಯ್ಯ ಅವರು ಕುರ್ಚಿ ಬಿಟ್ಟುಕೊಡಲಿ ಎಂದು ಸವಾಲು ಹಾಕಿದ್ದಾರೆ. ಯತೀಂದ್ರ ತಮ್ಮ ತಪ್ಪುಗಳನ್ನು ಮುಚ್ಚಿಕೊಳ್ಳಲು ಏನೇನೋ ಹೇಳುತ್ತಿದ್ದಾರೆ ಎಂದು ಟೀಕಿಸಿದ್ದಾರೆ.

# ಬನ್ನಿಕುಪ್ಪೆ ಕೆರೆ ಒಡಲು ಸೇರಿಸುತ್ತಿದೆ ಕಾರ್ಖಾನೆಗಳ ತ್ಯಾಜ್ಯ: ಆರೋಪ

• ಉದಯವಾಹಿನಿ, ಹಾರೋಹಳ್ಳಿ

ಹಾರೋಹಳ್ಳಿ ಕೈಗಾರಿಕಾ ಪ್ರದೇಶದ 1 ಮತ್ತು 2ನೇ ಹಂತದಲ್ಲಿರುವ ಕೆಲವು ಕಾರ್ಖಾನೆಗಳು ತ್ಯಾಜ್ಯದ ನೀರನ್ನು ಚರಂಡಿಗೆ ಹರಿಸುತ್ತಿದ್ದು, ತ್ಯಾಜ್ಯ ನೀರಿನ ಮೂಲಗಳಿಗೆ ಸೇರುತ್ತಿದೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ. ಹಾರೋಹಳ್ಳಿ ಕೈಗಾರಿಕಾ ಪ್ರದೇಶದ ಬನ್ನಿಕುಪ್ಪೆ ಗ್ರಾಮದ ಬಳಿಯಿರುವ ಕೆಲವು ಕಾರ್ಖಾನೆಗಳು ತ್ಯಾಜ್ಯದ ನೀರನ್ನು ಚರಂಡಿಗೆ ನೇರವಾಗಿ ಬಿಟ್ಟು ಸರ್ಕಾರದ ನೀತಿ ನಿಯಮಗಳನ್ನು ಗಾಳಿಗೆ ತೂರಿವೆ. ಇದರಿಂದ ಬನ್ನಿಕುಪ್ಪೆ ಕೆರೆಗಳು ಕಲುಷಿತಗೊಂಡಿವೆ.


ಉದಯವಾಹಿನಿ ಚಿತ್ರ

ಇಲ್ಲಿನ ಕಾರ್ಖಾನೆಗಳು ರಾತ್ರಿ ವೇಳೆ ಚರಂಗಳಿಗೆ ವಿಷಪೂರಿತ ರಾಸಾಯನಿಕಯುಕ್ತಗಳನ್ನು ಹರಿಸುತ್ತಿದ್ದು, ಕುಡಿಯುವ ನೀರಿನ ಮೇಲೆ ಹೆಚ್ಚು ಪರಿಣಾಮ ಬೀರುತ್ತಿದೆ. ಕಾರ್ಖಾನೆಗಳು ವಿಷಪೂರಿತ ತ್ಯಾಜ್ಯದ ನೀರನ್ನು ಸಂಸ್ಕರಿಸದೆ ನೇರವಾಗಿ ಚರಂಡಿ ಮೂಲಕ ಹಳ್ಳಕ್ಕೆ ಸೇರುತ್ತಿದೆ. ಹಳ್ಳ ಸೇರಿದ ತ್ಯಾಜ್ಯ ನೇರವಾಗಿ ಕೆರೆ ಸೇರಿ, ಕೆರೆಯ ನೀರು ಕಲುಷಿತ ಗೊಂಡು ಜಲಚರಗಳಿಗೆ ಮಾರಕವಾಗಿ ಪರಿಣಮಿಸಿದೆ. ಬನ್ನಿಕುಪ್ಪೆ ಬಳಿ ಆರೇಳು ಕಾರ್ಖಾನೆಗಳು ತ್ಯಾಜ್ಯವನ್ನು ಸಂಸ್ಕರಣೆ ಮಾಡದೆ ನೇರವಾಗಿ ಹಳ್ಳಕ್ಕೆ ಬಿಟ್ಟ ತ್ಯಾಜ್ಯ ಗ್ರಾಮದ ಕೆರೆ ಒಡಲು ಸೇರುತ್ತಿದೆ.

ಇದರಿಂದಾಗಿ ಕೆರೆಯ ನೀರು ಕಲುಷಿತ ಗೊಂಡು ಕೆಟ್ಟ ವಾಸನೆ ಬರುತ್ತಿದೆ. ಹಾಗಾಗಿ ಕಾರ್ಖಾನೆಗಳು ತಮ್ಮ ಆವರಣದಲ್ಲೇ ಎಸ್‌ಟಿಪಿ ಪ್ಲಾಂಟ್ ಸ್ಥಾಪಿಸಿ ತಮ್ಮಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಶುದ್ಧೀಕರಿಸಿ ನಂತರ ಹೊರಬಿಡಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

> ಅಕ್ರಮವಾಗಿ ತ್ಯಾಜ್ಯ ವಿಲೇವಾರಿ ಮಾಡುತ್ತಿರುವ ಕಾರ್ಖಾನೆಗಳ ಪರಿಶೀಲನೆ ನಡೆಸಿ ಕ್ರಮ ಜರುಗಿಸಲಾಗುವುದು
>
> -ಮಂಜುನಾಥ್, ಜಿಲ್ಲಾ ಪರಿಸರ ಇಲಾಖೆ ಅಧಿಕಾರಿ


> ಕಾರ್ಖಾನೆಗಳು ಮಳೆ ಬಂದು ಹಳ್ಳ ಹರಿಯುವ ಸಮಯದಲ್ಲಿ ರಾತ್ರಿ ವೇಳೆ ತ್ಯಾಜ್ಯವನ್ನು ಹರಿಬಿಡುತ್ತಿದ್ದಾರೆ. ಈ ಬಗ್ಗೆ ಸಂಬಂಧಪಟ್ಟವರಿಗೆ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ
>
> -ರಾಜು, ಬನ್ನಿಕುಪ್ಪೆ ಗ್ರಾಮಸ್ಥ

# ಬಾಲ್ಯ ವಿವಾಹ ತಡೆಗಟ್ಟಲು ಅಧಿಕಾರಿಗಳು ವಿಫಲ

• ಉದಯವಾಹಿನಿ, ಬಂಗಾರಪೇಟೆ:

ರಾಜ್ಯದಾದ್ಯಂತ ಬಾಲ ಗರ್ಭಿಣಿಯರ ಸಂಖ್ಯೆ ಹೆಚ್ಚಾಗಿದೆ. ಅಧಿಕಾರಿಗಳ ವಿರುದ್ಧ ಬಾಲ್ಯ ವಿವಾಹ ನಿಷೇಧ ಕಾಯ್ದೆ ಹಾಗೂ ಪೋಕ್ಸೊ ಕಾಯ್ದೆಯಡಿ ದೂರು ದಾಖಲಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ದಲಿತ ರೈತ ಸೇನೆ ರಾಜ್ಯಾಧ್ಯಕ್ಷ ಹುಣಸನಹಳ್ಳಿ ವೆಂಕಟೇಶ್ ಆಗ್ರಹಿಸಿದರು. ಪಟ್ಟಣದ ತಾಲ್ಲೂಕು ಕಚೇರಿಯಲ್ಲಿ ತಹಶೀಲ್ದಾರ್ ಎಸ್. ವೆಂಕಟೇಶಪ್ಪ ಅವರ ಮೂಲಕ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕೆ ಮನವಿ ಪತ್ರ ಸಲ್ಲಿಸಿ ಮಾತನಾಡಿದರು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆರ್.ಸಿ ಎಚ್ ಪೋರ್ಟಲ್‌ನಲ್ಲಿ ಸಂಗ್ರಹಿಸಿರುವ ಮಾಹಿತಿ ಪ್ರಕಾರ ರಾಜ್ಯದಲ್ಲಿ ಹತ್ತು ತಿಂಗಳಲ್ಲಿ 26,462 ಬಾಲ ಗರ್ಭಿಣಿಯರು ಪತ್ತೆಯಾಗಿದ್ದಾರೆ. ಈ ಬೆಳವಣಿಗೆ ಆತಂಕಕಾರಿಯಾಗಿದೆ. ಬಾಲ್ಯ ವಿವಾಹ ತಡೆಗಟ್ಟಲು ಅಧಿಕಾರಿಗಳು ವಿಫಲರಾಗಿದ್ದಾರೆ ಎಂದರು.

ಬಾಲ್ಯ ವಿವಾಹ ನಿಯಂತ್ರಣಕ್ಕೆ ರಾಜ್ಯ-ಕೇಂದ್ರ ಸರ್ಕಾರ ಪ್ರತಿ ವರ್ಷ ಕೋಟ್ಯಂತರ ರೂಪಾಯಿವೆಚ್ಚ ಮಾಡುತ್ತಿದ್ದರೂ ಜಿಲ್ಲಾ ಮಟ್ಟದಲ್ಲಿ ಸರ್ಕಾರದ ಆದೇಶಗಳನ್ನು ಪಾಲನೆ ಆಗುತ್ತಿಲ್ಲ ಎಂದು ದೂರಿದರು. ಕೋಲಾರ ಜಿಲ್ಲೆಯಲ್ಲಿ 727 ಬಾಲಗರ್ಭಿಣಿಯರು ಕಂಡು ಬಂದಿದ್ದಾರೆ. ಮಹಿಳಾ ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿ. ಮಕ್ಕಳ ಸಹಾಯವಾಣಿ ಸಿಬ್ಬಂದಿ ಜವಾಬ್ದಾರಿಯುತವಾಗಿ ಕೆಲಸ ಮಾಡಬೇಕಾಗಿದೆ ಎಂದರು.


ಉದಯವಾಹಿನಿ ಚಿತ್ರ

# ಎಲ್ಲೆಂದರಲ್ಲಿ ಕೆಟ್ಟು ನಿಲ್ಲುವ ಹಳೆ ಸರ್ಕಾರಿ ಬಸ್

## ಸರ್ಕಾರಿ ಬಸ್‌ಗಳ ಕೊರತೆ ರಜಾ ದಿನಗಳಲ್ಲಿ ಪ್ರಯಾಣಿಕರು ಬಸ್‌ಗಳಿಗಾಗಿ ಪರದಾಡುವಂತಾಗಿದೆ

• ಉದಯವಾಹಿನಿ, ಮಾಗಡಿ

ತಾಲ್ಲೂಕಿನಲ್ಲಿ ಸರ್ಕಾರಿ ಬಸ್‌ಗಳ ಕೊರತೆ ಇದ್ದು, ರಜಾ ದಿನಗಳಲ್ಲಿ ಪ್ರಯಾಣಿಕರು ಬಸ್‌ಗಳಿಗಾಗಿ ಪರದಾಡುವಂತಾಗಿದೆ. ಮಾಗಡಿ ಡಿಪೋದಲ್ಲಿ ಹಳೆ ಬಸ್‌ಗಳು ಹೆಚ್ಚಾಗಿದ್ದು, ಎಲ್ಲೆಂದರಲ್ಲಿ ಕೆಟ್ಟು ನಿಲ್ಲುತ್ತಿವೆ. ಇದರಿಂದ ಸರಿಯಾದ ಸಮಯಕ್ಕೆ ಬಸ್ ಬಾರದಿರುವುದು ರೈತರು, ಉದ್ಯೋಗಿಗಳು, ವಿದ್ಯಾರ್ಥಿಗಳಿಗೆ ಸಾಕಷ್ಟು ತೊಂದರೆಯಾಗುತ್ತಿದೆ. ಹಾಗಾಗಿ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳು ಹೆಚ್ಚುವರಿ ಬಸ್ ಬಿಡುವಂತೆ ಡಿಪೋ ಬಳಿ ಗಲಾಟೆ ಮಾಡಿದ್ದಾರೆ. ಹೆಚ್ಚುವರಿ ಬಸ್ ಬಿಟ್ಟಾಗ ಮಾತ್ರ ಕಾಲೇಜು, ಕೆಲಸಕ್ಕೆ ತೆರಳಲು ಸಹಾಯವಾಗುತ್ತದೆ ಎಂಬುದು ಪ್ರಯಾಣಿಕರ ಮಾತಾಗಿದೆ.

**ಸಿಬ್ಬಂದಿ ಹಾಗೂ ಬಸ್‌ಗಳ ಕೊರತೆ:** ಮಾಗಡಿ ಸರ್ಕಾರಿ ಡಿಪೋದಲ್ಲಿ 30ಕ್ಕೂ ಹೆಚ್ಚು ಚಾಲಕರು ಹಾಗೂ ನಿರ್ವಾಹಕರ ಕೊರತೆಯಿದೆ. ಜೊತೆಗೆ ತಾಂತ್ರಿಕ ಮೇಲ್ವಿಚಾರಕರು, ಸಂಚಾರಿ ವಿಚಾರಕರ ಕೊರತೆಯಿಂದ ಮಾಗಡಿ ಡಿಪೋದಿಂದ ಸರ್ಕಾರಿ ಬಸ್‌ಗಳನ್ನು ರೂಟ್‌ಗಳಿಗೆ ಬಿಡಲು ಸಮಸ್ಯೆಯಾಗುತ್ತಿದೆ. 10ಕ್ಕೂ ಹೆಚ್ಚು ಬಸ್‌ಗಳ ಕೊರತೆಯಿಂದ ಪ್ರಯಾಣಿಕರಿಗೆ ಸಾಕಷ್ಟು ಸಮಸ್ಯೆಯಾಗುತ್ತಿದೆ. ಇಲಾಖೆ ಕೂಡಲೇ ಚಾಲಕರು, ನಿರ್ವಾಹಕರು ಮತ್ತು ಹೊಸ ಬಸ್‌ಗಳನ್ನು ಡಿಪೋಗೆ ನೀಡಿದರೆ ರೂಟ್‌ಗಳಿಗೆ ಬಸ್‌ಗಳನ್ನು ಕಳುಹಿಸಿ ಸಮಸ್ಯೆ ಇಲ್ಲದಂತೆ ನೋಡಿಕೊಳ್ಳಬಹುದು ಎಂಬುದು ಬಸ್ ಡಿಪೋ ಮೇಲ್ವಿಚಾರಕ ಅವರ ಮಾತಾಗಿದೆ.


ಉದಯವಾಹಿನಿ ಚಿತ್ರ

**ಅವಧಿ ಮುಗಿಸುವ ಎಂಟು ಬಸ್‌ಗಳು:** ಮಾಗಡಿ ಡಿಪೋದಲ್ಲಿ ಸಂಚರಿಸುತ್ತಿರುವ ಎಂಟು ಸರ್ಕಾರಿ ಬಸ್‌ಗಳು ಇನ್ನೂ ಆರು ತಿಂಗಳಲ್ಲಿ ಎಫ್‌ಸಿ ಅವಧಿ ಮುಗಿಯಲಿದ್ದು, ಈ ಬಸ್‌ಗಳನ್ನು ಸ್ಕ್ರ್ಯಾಪ್ ಮಾಡಿ ರೂಟ್‌ಗಳಿಗೆ ಬಿಡಲು ಆಗುವುದಿಲ್ಲ. ಇದರಿಂದ ಬಸ್‌ಗಳ ಕೊರತೆ ಇನ್ನೂ ಹೆಚ್ಚಾಗಲಿದೆ. ಹಾಗಾಗಿ ಇಲಾಖೆ ಮಾಗಡಿ ಡಿಪೋಗೆ 15 ಹೆಚ್ಚು ಬಸ್‌ಗಳನ್ನು ನೀಡಿದಾಗ ಮಾತ್ರ ಬಸ್‌ಗಳ ಸಮಸ್ಯೆ ನಿವಾರಣೆಯಾಗಲಿದೆ ಎಂದರು.

**ವಾಯು ವಜ್ರ ಬಸ್‌ಗಳ ಕಡಿತ:** ಡಿಪೋದಲ್ಲಿ 10ಕ್ಕೂ ಹೆಚ್ಚು ವಾಯು ವಜ್ರ ಬಸ್‌ಗಳ ಸಂಚಾರವನ್ನು ನಿಲ್ಲಿಸಿ ಕೇವಲ ಮೂರು ಬಸ್‌ಗಳು ಸಂಚರಿಸುತ್ತಿವೆ. ವಾಯುವಜ್ರ ಬಸ್‌ಗಳ ಸಂಖ್ಯೆ ಹೆಚ್ಚಿಸಿದರೆ ಪ್ರಯಾಣಿಕರಿಗೆ ಅನುಕೂಲವಾಗುತ್ತದೆ.

**ಶಕ್ತಿ ಯೋಜನೆಯಿಂದ ಮಹಿಳಾ ಪ್ರಯಾಣಿಕರ ಹೆಚ್ಚಳ:** ಶಕ್ತಿ ಯೋಜನೆಯಿಂದ ಸರ್ಕಾರಿ ಬಸ್‌ಗಳಲ್ಲಿ ಮಹಿಳಾ ಪ್ರಯಾಣಿಕರ ಸಂಖ್ಯೆ ಹೆಚ್ಚಿದೆ. ಏಪ್ರಿಲ್ 2024 ರಿಂದ ಮೇ 2025ವರೆಗೆ 70.55 ಲಕ್ಷ ಮಂದಿ ಮಹಿಳೆಯರು ಉಚಿತವಾಗಿ ಪ್ರಯಾಣಿಸಿದ್ದಾರೆ. ಬಸ್‌ಗಳಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಿದ್ದು, ಬಸ್‌ಗಳ ಸಂಖ್ಯೆ ಕಡಿಮೆಯಿದೆ. ಹಾಗಾಗಿ ಪ್ರಯಾಣಿಕರು ಬಸ್‌ಗಳಿಗಾಗಿ ಪರದಾಡುತ್ತಿದ್ದಾರೆ.

> ಹೊಸ ಬಸ್ ಬಿಡಿ ಶಕ್ತಿ ಯೋಜನೆ ಜಾರಿ ಬಳಿಕ ಮಹಿಳಾ ಪ್ರಯಾಣಿಕ ಸಂಖ್ಯೆ ಹೆಚ್ಚಿದೆ. ಹೊಸ ಬಸ್ ಮತ್ತು ಸರಿಯಾದ ಸಮಯಕ್ಕೆ ಬಸ್‌ಗಳನ್ನು ಬಿಡುವ ಮೂಲಕ ಪ್ರಯಾಣಿಕರಿಗೆ ಅನುಕೂಲತೆ ಮಾಡಿಕೊಡಲಿ.
>
> -ಶ್ರೀಪತಿಹಳ್ಳಿ ರಾಜಣ್ಣ, ಮುಖಂಡರು

> ಮಾಗಡಿ ಹಿರಿಯ ನಾಗರಿಕರಿಗೆ ತೊಂದರೆ ಬಸ್‌ಗಳ ಸಂಖ್ಯೆ ಕಡಿಮೆ ಇರುವುದರಿಂದ ಒಂದೇ ಬಸ್ಸಿನಲ್ಲಿ ಹೆಚ್ಚಿನ ಪ್ರಯಾಣಿಕರು ಸಂಚರಿಸುತ್ತಿದ್ದಾರೆ. ಇದರಿಂದ ಹಿರಿಯ ನಾಗರಿಕರಿಗೆ ತೊಂದರೆಯಾಗುತ್ತಿದೆ. ಹಾಗಾಗಿ ಹೆಚ್ಚುವರಿ ಬಸ್ ಬಿಡುವ ಮೂಲಕ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡಬೇಕು.
>
> -ಎನ್.ಶಿವಲಿಂಗಯ್ಯ
> ನಿಸರ್ಗ ಪರಿಚರಣ ಟ್ರಸ್ಟ್ ಅಧ್ಯಕ್ಷರು ಮಾಗಡಿ

# ತೆಂಗಿನ ಸಿಪ್ಪೆಗೂ ಕುದುರಿದ ಬೇಡಿಕೆ

• ಉದಯವಾಹಿನಿ, ತಿಪಟೂರು



ನಗರದ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಕೊಬ್ಬರಿ ಜೊತೆಗೆ ತೆಂಗಿನ ಒಣ ಸಿಪ್ಪೆಗೂ ಬೆಲೆ ಕುದುರಿದೆ. ಇಷ್ಟು ದಿನ ಪುಕ್ಕಟೆಯಾಗಿ ಕೊಡುತ್ತಿದ್ದ ಇಲ್ಲವೇ ಸುಡಲು ಬಳುಸುತ್ತಿದ್ದ ಒಣ ಸಿಪ್ಪೆಗೂ ಬೆಲೆ ಬಂದಿರುವುದು ತೆಂಗು ಬೆಳೆಗಾರರಿಗೆ ಖುಷಿ ತಂದಿದೆ.

ತೋಟಗಳಲ್ಲಿ ರಾಶಿ ಹಾಕಿರುತ್ತಿದ್ದ ಸಿಪ್ಪೆಯನ್ನು ಇಲ್ಲಿಯವರೆಗೆ ಬೆಳೆಗಾರರು ಪುಕ್ಕಟೆಯಾಗಿ ನಾರು ಕೇಂದ್ರಕ್ಕೆ ಕೊಂಡೊಯ್ದು ಸುರಿದು ಬರುತ್ತಿದ್ದರು. ಅಂತಹ ನಿರುಪಯೋಗಿ ಸಿಪ್ಪೆಗೂ ಈಗ ಬೆಲೆ ಬಂದಿದೆ.

ಸಾವಿರ ಸಿಪ್ಪೆಗೆ ಸಾವಿರ ರೂಪಾಯಿ ಬೆಲೆ ಸಿಗುತ್ತಿದೆ. ತಮಿಳುನಾಡು ಹಾಗೂ ಇತರ ರಾಜ್ಯಗಳಲ್ಲಿ ಸಾವಿರ ಸಿಪ್ಪೆಗೆ 3 ಸಾವಿರ ಬೆಲೆ ಇದೆ. ಹಾಗಾಗಿ ನೆರೆಯ ತಮಿಳುನಾಡು ಮತ್ತು ಹೊರ ರಾಜ್ಯಗಳ ವರ್ತಕರು ತುಮಕೂರು ಜಿಲ್ಲೆಯ ತೆಂಗಿನ ಸಿಪ್ಪೆಗೆ ಮುಗಿಬಿದ್ದಿದ್ದಾರೆ. ತೆಂಗಿನ ಸಿಪ್ಪೆಗೆ ಚೀನಾದಲ್ಲಿ ಭಾರಿ ಬೇಡಿಕೆ ಇದೆ. ಇಲ್ಲಿಂದ ಸಿಪ್ಪೆಯನ್ನು ಕೊಂಡೊಯ್ದು ಚೀನಾಕ್ಕೆ ರಫ್ತು ಮಾಡಲಾಗುತ್ತಿದೆ. ತುಮಕೂರು, ಅಕ್ಕಪಕ್ಕದ ಜಿಲ್ಲೆಯ ಕೊಬ್ಬರಿ ಸಿಪ್ಪೆ ದಪ್ಪ ಹಾಗೂ ಉತ್ತಮ ನಾರಿನಿಂದ ಕೂಡಿದೆ. ಹೀಗಾಗಿ ಬೇಡಿಕೆ ದುಪ್ಪಟ್ಟಾಗಿದೆ. ಒಣಗಿದ ಸಿಪ್ಪೆಯಿಂದ ನಾರು ತೆಗೆಯುವ ಘಟಕಗಳು ಜಿಲ್ಲೆಯಲ್ಲಿ ನಿಧಾನವಾಗಿ ತಲೆ ಎತ್ತುತ್ತಿವೆ. ಗೊಬ್ಬರ, ಮಣ್ಣು ರಹಿತ ಸಾವಯವ ಕೃಷಿ ಪದ್ಧತಿ ಜನಪ್ರಿಯವಾಗಿದ್ದು ಇದರಿಂದ ತೆಂಗಿನ ನಾರಿಗೂ ಮಹತ್ವ ಬಂದಿದೆ. ಮೂರು ತಿಂಗಳ ಹಿಂದೆ ಸಿಪ್ಪೆಗಳನ್ನು ನಾವೇ ಕೂಲಿ ಕೊಟ್ಟು ಲಾರಿಗಳಿಗೆ ತುಂಬಿ ಕಳಿಸುತ್ತಿದ್ದೆವು. ಆದರೆ ಈಗ ಸಿಪ್ಪೆಗೂ ಉತ್ತಮ ಬೆಲೆ ಬಂದಿದೆ ಎಂದು ರೈತ ಶಂಕರಮೂರ್ತಿ ರಂಗಾಪುರ ಹೇಳುತ್ತಾರೆ. ಕಳೆದ ವರ್ಷ ಅತಿಯಾದ ಮಳೆಯಿಂದ ತೋಟಗಳಲ್ಲಿ ನೀರು ನಿಂತು ತೆಂಗಿಗೆ ಕಾಂಡ ಸೋರುವ ರೋಗ, ಹಣಬೆ ರೋಗ, ಬಿಳಿನೊಣ ಹಾಗೂ ಇತರ ಕೀಟಬಾಧೆ ಹಾವಳಿಯಿಂದ ಇಳುವರಿ ಕುಂಠಿತಗೊಂಡಿತ್ತು.

ಎರಡು ವರ್ಷದಿಂದ ಈಚೆಗೆ ಎಳನೀರು ಹೆಚ್ಚು ಮಾರಾಟವಾಗುತ್ತಿದೆ. ತೆಂಗಿನ ಸಿಪ್ಪೆ ಸೇರಿದಂತೆ ಉಪ ಉತ್ಪನ್ನಗಳಿಗೆ ಬೇಡಿಕೆ ಕುದುರಿದೆ. ದರವೂ ಹೆಚ್ಚಳವಾಗಿದೆ ಎಂದು ಸಹಾಯಕ ತೋಟಗಾರಿಕಾ ನಿರ್ದೇಶಕ ನವೀನ್ ಕುಮಾರ್.ಕೆ.ಎಸ್ ಮಾಹಿತಿ ನೀಡಿದರು.

# ಜೆಡಿಎಸ್ ಕಾರ್ಯಕರ್ತರ ಸಮಾವೇಶ

• ಉದಯವಾಹಿನಿ, ಕುಣಿಗಲ್

ಡಿಜಿಟಲ್ ಮೂಲಕ ಸದಸ್ಯತ್ವ ನೊಂದಣಿ ಪಕ್ಷ ಸಂಘಟನೆ ಶಾಸಕನಾಗಲೂ ಅಲ್ಲ, ಸಂಸದನಾಗಲೂ ಅಲ್ಲ, ರಾಜ್ಯದ ಜನತೆಯ ಹಿತಕ್ಕಾಗಿ 2028ರಲ್ಲಿ ಪಕ್ಷವನ್ನು ಸ್ವತಂತ್ರವಾಗಿ ಅಧಿಕಾರಕ್ಕೆ ತಂದು ತಂದೆಯನ್ನು ಮುಖ್ಯಮಂತ್ರಿ ಮಾಡಲು' ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

ಪಟ್ಟಣದಲ್ಲಿ ಸೋಮವಾರ ಸದಸ್ಯತ್ವ ನೊಂದಣಿ ಮತ್ತು ಕಾರ್ಯಕರ್ತರ ಸಮಾವೇಶದಲ್ಲಿ ಮಾತನಾಡಿದರು. ರಾಜ್ಯದಲ್ಲಿ ಎರಡು ಪ್ರಾದೇಶಿಕ ಪಕ್ಷದ ನಡುವೆ ಜೆಡಿಎಸ್ ಉಳಿದಿರುವುದಕ್ಕೆ ಬಲಿಷ್ಠ ಕಾರ್ಯಕರ್ತರೆ ಕಾರಣ. ಮುಂದಿನ ದಿನಗಳಲ್ಲಿ 30-40 ಸ್ಥಾನಗಳಿಗೆ ಸೀಮಿತವಾಗದೆ ಪ್ರಬಲ ಪ್ರಾದೇಶಿಕ ಪಕ್ಷವಾಗಿ ಅಧಿಕಾರಕ್ಕೆ ಬರಬೇಕಿದೆ.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿ ದುರಾಡಳಿತ, ಭ್ರಷ್ಟಾಚಾರ, ಆಡಳಿತ ವೈಫಲ್ಯ, ದ್ವೇಷದ ರಾಜಕಾರಣ ಮೀತಿ ಮೀರಿದೆ. ಆರ್‌ಸಿಬಿ ವಿಜಯೋತ್ಸವದಲ್ಲಿ ಸರ್ಕಾರ ಕ್ರೆಡಿಟ್ ತೆಗೆದುಕೊಳ್ಳಲು ಹೋಗಿ 11 ಬಲಿಯಾಗಿದೆ. ಅತ್ಯಾಚಾರ, ಅನಾಚಾರಗಳು ಹೆಚ್ಚಾಗಿದೆ. ಬದಲಾವಣೆಗಾಗಿ ಉಳಿದಿರುವ 1000 ದಿನಗಳಲ್ಲಿ ಪಕ್ಷ ಸಂಘಟನೆ ಬಲಿಷ್ಠವಾಗಿ ಅಧಿಕಾರಕ್ಕೆ ಬರಬೇಕಿದೆ ಎಂದರು. ಮಾಜಿ ಸಚಿವ ಡಿ.ನಾಗರಾಜಯ್ಯ, ಕಾರ್ಯಕರ್ತರು ನಿಷ್ಕ್ರಿಯರಾಗಿಲ್ಲ. ನಿಷ್ಠಾವಂತ ಕಾರ್ಯಕರ್ತರು ಪಕ್ಷದ ಆಸ್ತಿ. ತಾಲ್ಲೂಕಿನಲ್ಲಿ ಸಹೋದರರು ಒಂದಾಗಿ ಎಂದು ಹೇಳುತ್ತಲೆ ಬರುತ್ತಿದ್ದಾರೆ. ಒಂದಾಗಿದ್ದೇವೆ ಮುಂದಿನ ದಿನಗಳಲ್ಲಿ ಬರುವ ಚುನಾವಣೆಗಳಲ್ಲಿ ಜೆಡಿಎಸ್ ತನ್ನ ಶಕ್ತಿ ತೋರಿಸಲಿದೆ ಎಂದರು. ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಬಿ.ಎನ್.ರವಿ, ಡಿಜಿಟಲ್ ಸದಸ್ಯತ್ವ ನೊಂದಣಿ ಬಗ್ಗೆ ಮಾಹಿತಿ ನೀಡಿ, ತಾಲ್ಲೂಕಿನಲ್ಲಿ ಜೆಡಿಎಸ್ ಸದೃಢವಾಗಿದ್ದು ದೇವೇಗೌಡರಿಗೆ ರಾಜಕೀಯ ಶಕ್ತಿ ನೀಡುವಲ್ಲಿ ತಾಲ್ಲೂಕು ಜೆಡಿಎಸ್ ಪ್ರಮುಖ ಪಾತ್ರವಹಿಸಿದೆ ಎಂದರು. ವಿಧಾನ ಪರಿಷತ್ತು ಮಾಜಿ ಸದಸ್ಯ ತಿಪ್ಪೆಸ್ವಾಮಿ, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಆಂಜನಪ್ಪ, ತಾಲ್ಲೂಕು ಅಧ್ಯಕ್ಷ ಬಿ.ಎನ್.ಜಗದೀಶ್, ಮುಖಂಡ ಕಾಮನಹಳ್ಳಿ ರಾಮಣ್ಣ ಇನ್ನಿತರರಿದ್ದರು.


ಉದಯವಾಹಿನಿ ಚಿತ್ರ

> ದೇವೇಗೌಡರಿಗೆ ನರೇಂದ್ರ ಮೋದಿ ನಾಯಕತ್ವದ ಬಗ್ಗೆ ವಿಶ್ವಾಸವಿರುವುದರಿಂದ ರಾಜ್ಯದಲ್ಲಿ ಬಿಜೆಪಿ ಜತೆ ಮೈತ್ರಿ ಮುಂದುವರೆಸಿಕೊಂಡು ಹೋಗುತ್ತೇವೆ. ಬಿಜೆಪಿ ಜತೆಗಿನ ನಂಟಿಗೆ ಧಕ್ಕೆ ಬರದಂತೆ ಪಕ್ಷ ಸಂಘಟನೆ ನಡೆಯುತ್ತದೆ.
>
> -ನಿಖಿಲ್ ಕುಮಾರಸ್ವಾಮಿ, ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ


# ಜಾತಿ ಗಣತಿ ಮರು ಸಮೀಕ್ಷೆ ಬದಲು ಕನ್ನಡ ಭಾಷಿಕರ ಗಣನೆ ಮಾಡಿ

## ಸಿದ್ದರಾಮಯ್ಯ ನೂರಾರು ನಾಗರಹಾವುಗಳ ಮಧ್ಯೆ ಸಿಲುಕಿ, ಬಲಹೀನರಾಗಿದ್ದಾರೆ: ವಾಟಾಳ್ ನಾಗರಾಜ್

• ಉದಯವಾಹಿನಿ, ಮೈಸೂರು

ಜಾತಿ ಗಣತಿ ಮರು ಸಮೀಕ್ಷೆ ಬದಲು ಕನ್ನಡ ಭಾಷಿಕರ ಗಣನೆ ಮಾಡಬೇಕು. ಮರು ಜಾತಿಗಣತಿ ವಿಚಾರಕ್ಕೆ ಸಿಎಂ ಸಿದ್ದರಾಮಯ್ಯ ಅವರ ನಿಲುವನ್ನು ಕನ್ನಡ ಚಳವಳಿ ಮುಖಂಡ ವಾಟಾಳ್ ನಾಗರಾಜ್ ವಿರೋಧ ವ್ಯಕ್ತಪಡಿಸಿದ್ದಾರೆ. ವಾಟಾಳ್ ನಾಗರಾಜ್ ಅವರು ಮೈಸೂರಿನಲ್ಲಿ ಜಾತಿಗಣತಿ ಮರು ಸಮೀಕ್ಷೆ ಕುರಿತಾಗಿ ಮಾತನಾಡಿ, ರಾಜ್ಯ ಸರ್ಕಾರ ಜಾತಿ ಗಣತಿ ಮರು ಸಮೀಕ್ಷೆ ಮಾಡುವ ಬದಲು ಕನ್ನಡ ಭಾಷಿಕರ ಗಣನೆ ಮಾಡಬೇಕು. ಮೈಸೂರಿನಲ್ಲಿ ಅನ್ಯ ಭಾಷಿಕರ ಪ್ರಾಬಲ್ಯ ಹೆಚ್ಚಾಗುತ್ತಿದೆ. ಆದ್ದರಿಂದ ಕರ್ನಾಟಕದಲ್ಲಿ ಕನ್ನಡಿಗರು ಎಷ್ಟು ಮಂದಿ ಇದ್ದಾರೆ ಎಂದು ಸರ್ಕಾರ ಗಣನೆ ಮಾಡಬೇಕು ಎಂದು ಒತ್ತಾಯಿಸಿದ್ದಾರೆ. ಕನ್ನಡ ಭಾಷಿಕರು ಮತ್ತು ಪರ ಭಾಷಿಕರು ಎಷ್ಟಿದ್ದಾರೆ ಎಂದು ಲೆಕ್ಕ ಹಾಕಬೇಕು. ಕನ್ನಡಿಗರಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಬೇಕು ಎಂದು ಹೇಳಿದರು.

**ಸಿಎಂ ಎರಡನೇ ಅವಧಿಯಲ್ಲಿ ಬಲಹೀನರಾಗಿದ್ದಾರೆ:** ಸಿಎಂ ಸಿದ್ದರಾಮಯ್ಯ ಮೊದಲ ಅವಧಿಯಲ್ಲಿ ಇದ್ದಂತೆ ಇಲ್ಲ. ಎರಡನೇ ಅವಧಿಯಲ್ಲಿ ಬಲಹೀನರಾಗಿದ್ದಾರೆ. ಮರು ಜಾತಿಗಣತಿ ವಿಚಾರದಲ್ಲಿ ಒಪ್ಪಿಕೊಂಡಿದ್ದಾರೆ. ನೂರಾರು ನಾಗರಹಾವುಗಳ ಮಧ್ಯೆ ಸಿದ್ದರಾಮಯ್ಯ ಸಿಲುಕಿಕೊಂಡಿದ್ದಾರೆ ಎಂದು ವಾಟಾಳ್ ನಾಗರಾಜ್ ಕಿಡಿಕಾರಿದರು.



**ದೇವರ ಹೆಸರಲ್ಲಿ ದರೋಡೆ:** ಆಷಾಢ ಮಾಸದ ಪ್ರಯುಕ್ತ ಚಾಮುಂಡಿ ಬೆಟ್ಟದಲ್ಲಿ 2 ಸಾವಿರ ರೂಪಾಯಿ ನೀಡುವವರಿಗೆ ವಿಶೇಷ ದರ್ಶನಕ್ಕೆ ಅವಕಾಶ ನೀಡಿರುವ ಬಗ್ಗೆ ಮಾತನಾಡಿದ ವಾಟಾಳ್ ನಾಗರಾಜ್ ಅವರು, ರಾಜ್ಯ ಸರ್ಕಾರ ಭಕ್ತಿಯ ಹೆಸರಿನಲ್ಲಿ ಭಕ್ತರ ದರೋಡೆ ಮಾಡಲು ಹೊರಟಿದೆ. ದೇಶ ವಿದೇಶಗಳ ಭಕ್ತರು ಚಾಮುಂಡಿ ಬೆಟ್ಟಕ್ಕೆ ಬರುತ್ತಾರೆ. ಇದೀಗ 2 ಸಾವಿರ ರೂಪಾಯಿ ಪಡೆದು ವಿಶೇಷ ದರ್ಶನದ ವ್ಯವಸ್ಥೆಗೆ ಮುಂದಾಗಿರುವುದು ಸರಿಯಲ್ಲ. ಈ ಬಗ್ಗೆ ರಾಜ್ಯ ಸರ್ಕಾರ ಚಿಂತನೆ ನಡೆಸಬೇಕು. ಭಕ್ತಿಯ ಹೆಸರಿನಲ್ಲಿ ಭಕ್ತರ ದರೋಡೆ ಮಾಡುವ ನಿರ್ಧಾರವನ್ನು ಕೈಬಿಡಬೇಕು ಎಂದು ಹೇಳಿದರು.

**ಆಂಧ್ರಪ್ರದೇಶ ತನ್ನ ನಿಲುವು ಬದಲಿಸಬೇಕು:** ಮಾವಿನ ದರ ಕುಸಿತ ಹಿನ್ನೆಲೆ ಕನ್ನಡ ಚಳವಳಿ ಮುಖಂಡ ವಾಟಾಳ್ ನಾಗರಾಜ್ ಅವರಿಂದ ಮಾವಿನಕಾಯಿ ಚಳವಳಿ ಮೈಸೂರಿನ ಹಾರ್ಡಿಂಗ್ ವೃತ್ತದಲ್ಲಿ. ಆಂಧ್ರ ಸರ್ಕಾರ ಚಿತ್ತೂರಿಗೆ ಕರ್ನಾಟಕದ ಮಾವು ಪ್ರವೇಶಿಸುವುದನ್ನು ನಿರ್ಬಂಧಿಸಿತ್ತು. ಆದೇಶ ವಾಪಸ್ ಪಡೆಯಲು ಸಿಎಂ ಸಿದ್ದರಾಮಯ್ಯ ಆಂಧ್ರಪ್ರದೇಶ ಸರ್ಕಾರಕ್ಕೆ ಪತ್ರ ಬರೆದಿದ್ದರು. ಸದ್ಯ ಕನ್ನಡ ಪರ ಹೋರಾಟಗಾರ ವಾಟಾಳ್ ನಾಗರಾಜ್ ಆಂಧ್ರಪ್ರದೇಶ ತನ್ನ ನಿಲುವು ಬದಲಿಸಬೇಕು ಎಂದು ಪ್ರತಿಭಟನೆ ನಡೆಸಿದರು.

ಕರ್ನಾಟಕ- ಆಂಧ್ರಪ್ರದೇಶ ಗಡಿ ಬಂದ್ ಮಾಡುವುದಾಗಿ ಎಚ್ಚರಿಕೆ ನೀಡಿದರು. ಆಂಧ್ರಪ್ರದೇಶ ಸಿಎಂ ಚಂದ್ರಬಾಬು ನಾಯ್ಡು ಗಮನ ಹರಿಸುವಂತೆ ಆಗ್ರಹಿಸಿದರು.

> **ಕಾವೇರಿ ಆರತಿ ಅವಶ್ಯಕತೆ ಇಲ್ಲ**
>
> ಕೆಆರ್‌ಎಸ್‌ನಲ್ಲಿ ಅಮ್ಯೂಸ್ ಮೆಂಟ್ ಪಾರ್ಕ್ ನಿರ್ಮಾಣ ಮತ್ತು ಕಾವೇರಿ ಆರತಿಗೆ ವಾಟಾಳ್ ನಾಗರಾಜ್ ವಿರೋಧ ವ್ಯಕ್ತಪಡಿಸಿದ್ದಾರೆ. ಕೆಆರ್‌ಎಸ್ ಜಲಾಶಯಕ್ಕೆ ಐತಿಹಾಸಿಕ ಹಿನ್ನೆಲೆ ಇದೆ. ಅದಕ್ಕೊಂದು ವಿಶೇಷ ಮಹತ್ವವಿದೆ. ಅಲ್ಲಿ ನೂರಾರು ಕೋಟಿ ರೂಪಾಯಿ ವೆಚ್ಚದಲ್ಲಿ ಪಾರ್ಕ್ ನಿರ್ಮಾಣದ ಅಗತ್ಯವಿಲ್ಲ. ಕಾವೇರಿ ಆರತಿಯ ಅವಶ್ಯಕತೆಯೂ ಇಲ್ಲ ಎಂದು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

## ಮಿನಿ ನ್ಯೂಸ್

# ನಿರೀಕ್ಷಣಾ ಮಂದಿರದ ಮರ ಕಡಿಸಿದ ಅಧಿಕಾರಿಗಳು

• ಉದಯವಾಹಿನಿ, ಗೌರಿಬಿದನೂರು

ನಗರದ ನಿರೀಕ್ಷಣಾ ಮಂದಿರದ ಆವರಣದಲ್ಲಿ ಬೃಹದಾಕಾರವಾಗಿ ಬೆಳೆದಿದ್ದ ಮರವನ್ನು ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಅರಣ್ಯ ಇಲಾಖೆ ಅನುಮತಿ ಪಡೆಯದೆ ಕಡಿಸಿದ್ದಾರೆ ಎಂದು ರೈತ ಸಂಘ ದೂರಿದೆ. ಸುಮಾರು 20 ರಿಂದ 25 ವರ್ಷಗಳಿಂದ ಬೆಳೆದಿದ್ದ ಪೆಲ್ಟೊಫಾರ್ಮ್ ಮರವನ್ನು ಕಡಿಯಲಾಗಿದೆ. ಪಕ್ಕದಲ್ಲೇ ಇರುವ ಬೇವಿನ ಮರದ ಕೊಂಬೆಗಳನ್ನು ಕತ್ತರಿಸಲಾಗಿದೆ ಎಂದು ರೈತ ಸಂಘದ ಅಧ್ಯಕ್ಷ ಲೋಕೇಶ್ ಗೌಡ ಆರೋಪಿಸಿದ್ದಾರೆ.

ಲೋಕೋಪಯೋಗಿ ಇಲಾಖೆ ಆವರಣದಲ್ಲಿರುವ ನೀಲಗಿರಿ ಮರಗಳನ್ನು ಕಡಿಯಲು ಟೆಂಡರ್ ಆಗಿದ್ದರೆ, ಇಲ್ಲಿನ ಅಧಿಕಾರಿಗಳು ಪಕ್ಕದ ನಿರೀಕ್ಷಣ ಮಂದಿರದ ಅವರಣದಲ್ಲಿರುವ ಮರವನ್ನು ಕಡಿದು ಹಾಕಿದ್ದಾರೆ. ಈ ಬಗ್ಗೆ ಅರಣ್ಯ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಮರ ಕಡಿಯುವವರತ್ತ ಬೊಟ್ಟು ಮಾಡುತ್ತಿದ್ದಾರೆ ಎಂದು ತಿಳಿಸಿದ್ದಾರೆ. ಇಲ್ಲಿನ ಮರ ಕಡಿಯಲು ಕಾರಣರಾದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

# ಕಾಲ್ತುಳಿತ: ಬಿಜೆಪಿ ಪ್ರತಿಭಟನೆ

• ಉದಯವಾಹಿನಿ, ತಿಪಟೂರು

ಆರ್‌ಸಿಬಿ ವಿಜಯೋತ್ಸವ ಸಂದರ್ಭ ಕಾಲ್ತುಳಿತ ಸಂಭವಿಸಿ ಸಾವಿಗೆ ಕಾರಣವಾಗಿರುವ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಗೃಹಸಚಿವ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ತಾಲ್ಲೂಕು ಬಿಜೆಪಿ ಘಟಕದಿಂದ ಸಿಂಗ್ರಿ ನಂಜಪ್ಪ ವೃತ್ತದ ಬಳಿ ಸೋಮವಾರ ಪ್ರತಿಭಟನೆ ನಡೆಯಿತು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗಂಗರಾಜು ಮಾತನಾಡಿ, ರಾಜ್ಯ ಪೊಲೀಸ್ ಇಲಾಖೆ ತರಾತುರಿಯಲ್ಲಿ ವಿಜಯೋತ್ಸವ ಆಯೋಜನೆ ಬೇಡ ಎಂಬ ಮಾಹಿತಿ ನೀಡಿದರೂ ಸಹ ಸರ್ಕಾರ ಕಾರ್ಯಕ್ರಮ ಆಯೋಜಿಸಿ ಜನರ ಸಾವಿಗೆ ಕಾರಣವಾಗಿದೆ.

ಕೆಎಸ್‌ಸಿಎ, ಆರ್‌ಸಿಬಿ, ಡಿಎನ್‌ಎ ಈ ಮೂರು ಸಂಸ್ಥೆಗಳು ಸಿಒಡಿ ಮುಂದೆ ಕಾಲ್ತುಳಿತಕ್ಕೆ ರಾಜ್ಯ ಸರ್ಕಾರವೇ ನೇರ ಕಾರಣವೆಂದು ಲಿಖಿತ ಹೇಳಿಕೆ ಕೊಟ್ಟಿರುವುದರಿಂದ ತಕ್ಷಣವೇ ರಾಜಿನಾಮೆ ನೀಡಬೇಕು. ತನಿಖೆ ಪಾರದರ್ಶಕವಾಗಿ ನಡೆಯಬೇಕಾಗಿದ್ದು ಸಿಬಿಐ ತನಿಖೆಗೆ ಆಗಬೇಕೆಂದು ಆಗ್ರಹಿಸಿದರು. ಸುರೇಶ್ ಬಳ್ಳೇಕಟ್ಟೆ ಮಾತನಾಡಿ, ಗುಬ್ಬಿ ಕೆನಾಲ್ ನೀರಾವರಿ ವಿಚಾರದಲ್ಲಿ ಸ್ವಾಮೀಜಿಗಳ ಮೇಲೆ ಪ್ರಕರಣ ದಾಖಲು ಮಾಡಿದ್ದು, ಪ್ರಕರಣ ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿದರು.

# 6 ತಿಂಗಳ ನಂತರ ರಾಜ್ಯದಲ್ಲಿ ಸಿಎಂ ಬದಲಾವಣೆ: ಚಿದಾನಂದ ಎಂ.ಗೌಡ

• ಉದಯವಾಹಿನಿ, ಮಧುಗಿರಿ

ಮುಂದಿನ 6 ತಿಂಗಳ ನಂತರ ರಾಜ್ಯದಲ್ಲಿ ಸಿ.ಎಂ ಬದಲಾವಣೆಯಾಗಲಿದ್ದು, ರಾಜ್ಯದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಸರ್ಕಾರ ಯಾವಾಗ ಬೇಕಾದರೂ ಪತನವಾಗಬಹುದು ಎಂದು ಮಧುಗಿರಿ ಬಿಜೆಪಿ ಸಂಘಟನಾತ್ಮಕ ಜಿಲ್ಲಾಧ್ಯಕ್ಷ ಚಿದಾನಂದ ಎಂ.ಗೌಡ ಹೇಳಿದರು. ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಸೋಮವಾರ ಮಾತನಾಡಿ, ಕಾರ್ಯಕರ್ತರು ಪಕ್ಷ ಸಂಘಟನೆಯಲ್ಲಿ ತೊಡಗಿಕೊಳ್ಳಿ. ಯಾವಾಗ ಬೇಕಾದರೂ ಚುನಾವಣೆ ಬರಬಹುದು. ಮಧುಗಿರಿ, ಕೊರಟಗೆರೆ, ಶಿರಾ ಮತ್ತು ಪಾವಗಡದಲ್ಲಿ ನಮ್ಮ ಅಭ್ಯರ್ಥಿಗಳೇ ಜಯ ಗಳಿಸಬೇಕು. ಯಾವುದೇ ಮೈತ್ರಿ ಶಾಶ್ವತವಲ್ಲ, ಅದು ಹೈಕಮಾಂಡ್ ತೀರ್ಮಾನ. ಈ ಬಾರಿ 4 ತಾಲ್ಲೂಕುಗಳಲ್ಲಿ ಬಿಜೆಪಿ ಅಭ್ಯರ್ಥಿಗಳೇ ಜಯಗಳಿಸಲಿದ್ದಾರೆ ಎಂದರು. 2 ವರ್ಷದಲ್ಲಿ ರಾಜ್ಯ 10 ವರ್ಷ ಹಿಂದಕ್ಕೆ ಹೋಗಿದ್ದು, ಇರುವ ಹಣವೆಲ್ಲ ಉಚಿತ ಭಾಗ್ಯಗಳಿಗೆ ನೀಡಿ, ಕೇಂದ್ರದತ್ತ ಬೊಟ್ಟು ಮಾಡುತ್ತಿದ್ದಾರೆ ಎಂದು ಲೇವಡಿ ಮಾಡಿದರು. ನಿಕಟಪೂರ್ವ ಜಿಲ್ಲಾಧ್ಯಕ್ಷ ಬಿ.ಸಿ. ಹನುಮಂತೇಗೌಡ ಮಾತನಾಡಿ, ಜಿ.ಪಂ, ತಾ.ಪಂ ಚುನಾವಣೆಯಲ್ಲಿ ಕಾರ್ಯಕರ್ತರು ಸ್ಪರ್ಧಿಸಿ ಪಕ್ಷ ಸಂಘಟಿಸಿ ಪಕ್ಷ ಕಟ್ಟಿದರೆ ಯಶಸ್ಸು ಸಾಧ್ಯ ಎಂದರು.

# ಆದರ್ಶ ಶಾಲೆಯ ಉಳಿಕೆ ಸ್ಥಾನಗಳಿಗೆ ಅರ್ಜಿ ಆಹ್ವಾನ

• ಉದಯವಾಹಿನಿ, ಮುಳಬಾಗಿಲು

ತಾಲ್ಲೂಕಿನ ತಾತಿಕಲ್ಲು ಸಮೀಪದಲ್ಲಿ ಇರುವ ಸರ್ಕಾರಿ ಆದರ್ಶ ಶಾಲೆಯಲ್ಲಿ 7 ಮತ್ತು 8, 9ನೇ ತರಗತಿಯಲ್ಲಿ ಖಾಲಿಯಾಗಿರುವ ಸ್ಥಾನಗಳಿಗೆ ಪ್ರವೇಶ ಪರೀಕ್ಷೆ ಮೂಲಕ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವ ಸಲುವಾಗಿ ಜೂನ್ 17ರಿಂದ ಅರ್ಜಿಗಳನ್ನು ಸಲ್ಲಿಸಬಹುದು ಎಂದು ಪ್ರಾಂಶುಪಾಲ ವಿ.ಕೃಷ್ಣಪ್ಪ ತಿಳಿಸಿದ್ದಾರೆ. ತಾಲ್ಲೂಕಿನ ಏಕೈಕ ಆದರ್ಶ ಶಾಲೆಯಲ್ಲಿ ಈಗಾಗಲೇ ಮೊದಲನೆ ಹಂತದಲ್ಲಿ ವಿದ್ಯಾರ್ಥಿಗಳು ಪ್ರವೇಶ ಪರೀಕ್ಷೆ ಬರೆದು ಆಯ್ಕೆಯಾಗಿದ್ದರೂ 7ನೇ ತರಗತಿಯಲ್ಲಿ 30 ಸ್ಥಾನ, 8ನೇ ತರಗತಿಯಲ್ಲಿ 4, 9ನೇ ತರಗತಿಯಲ್ಲಿ 2 ಸ್ಥಾನಗಳು ಖಾಲಿ ಇದ್ದು ಪ್ರವೇಶ ಪಡೆಯಲು ಆಸಕ್ತರು ಶಾಲೆಯಲ್ಲಿ ಅರ್ಜಿ ಪಡೆದು ಪ್ರವೇಶ ಪರೀಕ್ಷೆ ಮೂಲಕ ದಾಖಲಾತಿ ಪಡೆಯಬಹುದು ಎಂದು ಮಾಹಿತಿ ನೀಡಿದರು.

ಜಾತಿ, ಆದಾಯ ಪ್ರಮಾಣ ಪತ್ರ, ವಿದ್ಯಾರ್ಥಿ, ಪೋಷಕರ ಆಧಾರ್ ಕಾರ್ಡ್, 4 ಭಾವಚಿತ್ರ ಹಾಗೂ ಅಂಗವಿಕಲ ಅಭ್ಯರ್ಥಿ ಆಗಿದ್ದಲ್ಲಿ ಅಂಗವಿಕಲ ಮೂಲ ಪ್ರಮಾಣ ಪತ್ರದೊಂದಿಗೆ ಜೂನ್ 17ರಿಂದ ಜುಲೈ 30ರೊಳಗೆ ಅರ್ಜಿಗಳನ್ನು ಸಲ್ಲಿಸಬಹುದು. ಸಂಪರ್ಕ: 9740200181

# 11 ಮಂದಿ ಸಾವು ಪ್ರಕರಣ ಖಂಡಿಸಿ ಬಿಜೆಪಿ ಪ್ರತಿಭಟನೆ

• ಉದಯವಾಹಿನಿ, ಶ್ರೀರಂಗಪಟ್ಟಣ

ಬೆಂಗಳೂರಿನಲ್ಲಿ ನಡೆದ ಐಪಿಎಲ್ ವಿಜಯೋತ್ಸವದಲ್ಲಿ 11 ಮಂದಿ ಆರ್‌ಸಿಬಿ ಅಭಿಮಾನಿಗಳ ಸಾವಿನ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಹಾಗೂ ಗೃಹ ಸಚಿವರು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ಬಿಜೆಪಿ ಕಾರ್ಯಕರ್ತರು ಸೋಮವಾರ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು. ಇಲ್ಲಿನ ಮಿನಿ ವಿಧಾನಸೌಧದ ಎದುರು ಅರ್ಧ ತಾಸಿಗೂ ಹೆಚ್ಚು ಕಾಲ ಪ್ರತಿಭಟನೆ ನಡೆಯಿತು. ರಾಜ್ಯ ಸರ್ಕಾರ, ಮುಖ್ಯಮಂತ್ರಿ ಹಾಗೂ ಗೃಹ ಸಚಿವರ ವಿರುದ್ಧ ಪ್ರತಿಭಟನಾಕಾರರು ಘೋಷಣೆ ಕೂಗಿದರು. ಸರ್ಕಾರದ ನಿರ್ಲಕ್ಷ್ಯ, ಅಗ್ಗದ ಪ್ರಚಾರದ ಆಸೆಯಿಂದ ಅಮಾಯಕರು ಪ್ರಾಣ ಕಳೆದುಕೊಂಡಿದ್ದಾರೆ. ಇದು ಸರ್ಕಾರಿ ಪ್ರಾಯೋಜಿತ ಸಾಮೂಹಿಕ ಕೊಲೆ ಎಂದು ಬಿಜೆಪಿ ರಾಜ್ಯ ಕಾರ್ಯಕಾರಣಿ ಸದಸ್ಯ ಎಸ್. ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದರು. ಪಕ್ಷದ ಮಂಡಲದ ಅಧ್ಯಕ್ಷ ಪೀಹಳ್ಳಿ ಎಸ್. ರಮೇಶ್ ಮಾತನಾಡಿ, ಐಪಿಎಲ್ ವಿಜಯೋತ್ಸವಕ್ಕೆ ಪೊಲೀಸ್ ಅಧಿಕಾರಿಗಳು ವಿರೋಧ ವ್ಯಕ್ತಪಡಿಸಿದ್ದರೂ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಹಠಕ್ಕೆ ಬಿದ್ದು ಕಾರ್ಯಕ್ರಮ ನಡೆಸಿದ್ದಾರೆ. ಆರ್‌ಸಿಬಿ ಅಭಿಮಾನಿಗಳು ಮೃತಪಟ್ಟ ಸುದ್ದಿ ಬಂದ ನಂತರವೂ ಕಾರ್ಯಕ್ರಮ ಮುಂದುವರೆಸಿ ಅಮಾನವೀಯತೆ ಪ್ರದರ್ಶಿಸಿದ್ದಾರೆ. ತಮ್ಮ ತಪ್ಪು ಮುಚ್ಚಿಕೊಳ್ಳಲು ಪೊಲೀಸ್ ಅಧಿಕಾರಿಗಳನ್ನು ಬಲಿಪಶು ಮಾಡಿದ್ದಾರೆ ಎಂದು ಟೀಕಿಸಿದರು.

ಅಂತರಾಳದಿಂದ..
EDITORIAL

# ಜಾತಿವಾರು ಸಮೀಕ್ಷೆ ಪಾರದರ್ಶಕವಾಗಿ ನಡೆಯಲಿ



ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗವು ಹತ್ತು ವರ್ಷಗಳ ಹಿಂದೆ ನಡೆಸಿದ್ದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯ ವರದಿಯು ಮಾನ್ಯತೆ ಕಳೆದುಕೊಂಡಿದೆ ಎಂಬ ನಿರ್ಣಯಕ್ಕೆ ಬಂದಿರುವ ರಾಜ್ಯ ಸರ್ಕಾರವು ಹೊಸದಾಗಿ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ನಡೆಸಲು ತೀರ್ಮಾನಿಸಿದೆ. ಆಯೋಗದ ನೇತೃತ್ವದಲ್ಲೇ 90 ದಿನಗಳ ಕಾಲಮಿತಿಯಲ್ಲಿ ಸಮೀಕ್ಷೆ ನಡೆಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಸರ್ಕಾರದ ಆದೇಶದ ಅನ್ವಯ ಆಯೋಗವು ಜಾತಿ ಜನಗಣತಿ ಎಂದೇ ಹೆಸರಾಗಿರುವ ಈ ಸಮೀಕ್ಷೆಯನ್ನು 2015ರಲ್ಲಿ ನಡೆಸಿತ್ತು. ಪ್ರತಿ ಮನೆಗೂ ಭೇಟಿ ನೀಡಿ 54 ಪ್ರಶ್ನೆಗಳನ್ನು ಮುಂದಿಟ್ಟು ಮಾಹಿತಿ ಸಂಗ್ರಹಿಸಲಾಗಿದೆ ಎಂದು ಸರ್ಕಾರ ಹೇಳಿತ್ತು. ರಾಜ್ಯದ ಎರಡು ಪ್ರಬಲ ಸಮುದಾಯಗಳಾದ ಒಕ್ಕಲಿಗ ಮತ್ತು ಲಿಂಗಾಯತ ಮುಖಂಡರು ಸಮೀಕ್ಷೆ ಬಗ್ಗೆ ಆಕ್ಷೇಪ ಎತ್ತಿದ್ದರು. 2018ರ ಆರಂಭದಲ್ಲಿ ವರದಿ ತಯಾರಾಗಿತ್ತು. ಚುನಾವಣೆ ಬಂದಿದ್ದರಿಂದಾಗಿ ಅದು ನನೆಗುದಿಗೆ ಬಿದ್ದಿತು. ಯಾವುದೇ ಸಮೀಕ್ಷೆಯ ವರದಿಯು 10 ವರ್ಷಗಳ ಬಳಿಕ ಪ್ರಸ್ತುತತೆ ಕಳೆದುಕೊಳ್ಳಬಹುದು ಎಂಬ ವಾದವನ್ನು ಒಪ್ಪಬಹುದಾದರೂ ವರದಿಯನ್ನು ಅಷ್ಟೊಂದು ದೀರ್ಘ ಅವಧಿಗೆ ಅತಂತ್ರ ಸ್ಥಿತಿಯಲ್ಲಿ ಇರಿಸಿದ್ದು ಜವಾಬ್ದಾರಿಯುತ ನಡೆಯಾಗಿ ಕಾಣುವುದಿಲ್ಲ. ಈ ಅವಧಿಯಲ್ಲಿ ಜೆಡಿಎಸ್ ಪಕ್ಷದ ಎಚ್.ಡಿ. ಕುಮಾರಸ್ವಾಮಿ, ಬಿಜೆಪಿಯ ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಕಾಂಗ್ರೆಸ್‌ನ ಸಿದ್ದರಾಮಯ್ಯ ಅವರು ಸರ್ಕಾರವನ್ನು ಮುನ್ನಡೆಸಿದ್ದಾರೆ. ವರದಿಯು ಪ್ರಸ್ತುತತೆ ಕಳೆದುಕೊಂಡಿದ್ದರೆ ಅದಕ್ಕೆ ಇವರೆಲ್ಲ ಉತ್ತರದಾಯಿ ಆಗಬೇಕಾಗುತ್ತದೆ. 165 ಕೋಟಿ ವಿನಿಯೋಗಿಸಿ ನಡೆಸಲಾದ ಸಮೀಕ್ಷೆಯ ವರದಿಯನ್ನು ಕಪಾಟಿನಲ್ಲಿ ಮುಚ್ಚಿಡುವಂತಹ ಅಗತ್ಯ ಇರಲಿಲ್ಲ. ಸಚಿವ ಸಂಪುಟ ಸಭೆಗೆ ತಂದು ಚರ್ಚಿಸಬೇಕಿತ್ತು. ವರದಿಯನ್ನು ಒಪ್ಪಬಹುದಿತ್ತು, ಸರಿ ಎನಿಸದಿದ್ದರೆ ತಿರಸ್ಕರಿಸಬಹುದಿತ್ತು ಅಥವಾ ಪರಿಷ್ಕರಣೆಗೆ ಸೂಚಿಸುವ ಅವಕಾಶ ಇತ್ತು. ಎಚ್.ಕಾಂತರಾಜ ಆಯೋಗದ ವರದಿಯನ್ನು ಜಾರಿ ಮಾಡಿಯೇ ಸಿದ್ಧ ಎಂದು ಕಾಂಗ್ರೆಸ್ ನಾಯಕರು 2023ರ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಘೋಷಿಸಿದ್ದರು. ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಅಧಿಕಾರ ಹಿಡಿದ ಬಳಿಕ, ವರದಿ ಮಂಡನೆಯ ಪರ-ವಿರೋಧದ ಕೂಗು ಜೋರಾಯಿತು. ಅಷ್ಟರಲ್ಲೇ, 2024ರ ಲೋಕಸಭೆ ಚುನಾವಣೆ ಎದುರಾಯಿತು. ಅದು ಪೂರ್ಣಗೊಂಡ ಬಳಿಕವಾದರೂ ವರದಿಯ ಬಗ್ಗೆ ಸ್ಪಷ್ಟ ತೀರ್ಮಾನ ಕೈಗೊಳ್ಳಬಹುದಿತ್ತು. ಅದೂ ಆಗಲಿಲ್ಲ. ಪರ-ವಿರೋಧದ ಮಾತುಗಳು ಪುನಃ ಬಿರುಸು ಪಡೆದವು. ಈ ಮಧ್ಯೆಯೇ, ಮುಚ್ಚಿದ ಲಕೋಟೆಯಲ್ಲಿದ್ದ ವರದಿಯನ್ನು ಸಚಿವ ಸಂಪುಟದ ಮುಂದೆ ತೆರೆದು, ಅದರ ಪ್ರತಿಗಳನ್ನು ಸಚಿವರಿಗೆ ನೀಡಲಾಯಿತು. ಇದರ ಚರ್ಚೆಗಾಗಿಯೇ ವಿಶೇಷ ಸಂಪುಟ ಸಭೆಯೂ ನಿಗದಿಯಾಗಿತ್ತು. ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ದೆಹಲಿಗೆ ಕರೆಸಿಕೊಂಡ ಕಾಂಗ್ರೆಸ್ ಪಕ್ಷದ ವರಿಷ್ಠರು, ಮರು ಸಮೀಕ್ಷೆ ನಡೆಸಲು ನಿರ್ದೇಶನ ನೀಡಿದರು. ಇದರ ಹಿಂದಿನ ಬೆಳವಣಿಗೆಗಳನ್ನು ಗಮನಿಸಿದರೆ, ಪ್ರಭಾವಿ ಜಾತಿಗಳ ಒತ್ತಡಕ್ಕೆ ಪಕ್ಷ ಮಣೆ ಹಾಕಿರಬಹುದು ಎಂಬ ಅನುಮಾನ ಮೂಡುವುದು ಸಹಜ. ಮರು ಸಮೀಕ್ಷೆಗೆ ತೀರ್ಮಾನ ಕೈಗೊಂಡಿರುವುದು ನಾನಲ್ಲ ಎಂದು ಮೊದಲು ಹೇಳಿದ್ದ ಸಿದ್ದರಾಮಯ್ಯ, ಸಚಿವ ಸಂಪುಟ ಸಭೆಯ ಬಳಿಕ 10 ವರ್ಷಗಳ ಹಿಂದೆ ನಡೆಸಿದ್ದ ಸಮೀಕ್ಷೆಯ ವರದಿಯು ಹಿಂದುಳಿದ ವರ್ಗಗಳ ಆಯೋಗದ ಕಾಯ್ದೆಯ ಅನುಸಾರ ಮಾನ್ಯತೆ ಕಳೆದುಕೊಂಡಿರುವುದರಿಂದ ಹೊಸ ಸಮೀಕ್ಷೆ ನಡೆಸಲಾಗುವುದು. ಇದಕ್ಕೆ ಹೈಕಮಾಂಡ್ ಮಾರ್ಗದರ್ಶನವೂ ಇದೆ ಎಂದರು. ಯಾವುದೇ ಅಪಸ್ವರ ಹಾಗೂ ಸಂಶಯಗಳಿಗೆ ಕಿಂಚಿತ್ತೂ ಅಸ್ಪದ ಕೊಡದಂತೆ ಪೂರ್ವಸಿದ್ಧತೆ ನಡೆಸಿ, ಸಮೀಕ್ಷೆ ನಡೆಸಬೇಕಾದ ಹೊಣೆ ಸರ್ಕಾರದ ಮೇಲಿದೆ. ಜಾತಿ ಸಂಘಟನೆಗಳ ಪ್ರತಿನಿಧಿಗಳು, ಜನ ಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ಸಮೀಕ್ಷೆ ಆರಂಭಿಸುವುದು ಸೂಕ್ತ. ತಂತ್ರಜ್ಞಾನದ ಬಳಕೆ, ಅಧಾರ್ ಸಂಖ್ಯೆಯ ನೆರವು ಪಡೆದರೆ ನಿಖರ ದತ್ತಾಂಶವುಳ್ಳ ವರದಿ ಸಿದ್ಧಪಡಿಸಬಹುದು. ಸಮೀಕ್ಷೆಗೆ ಕಾಲಮಿತಿ ನಿಗದಿ ಮಾಡಿದಂತೆ, ವರದಿಯ ಬಗ್ಗೆ ಕ್ರಮಕೈಗೊಳ್ಳುವುದಕ್ಕೂ ಕಾಲಮಿತಿ ನಿಗದಿ ಮಾಡುವುದು ಒಳ್ಳೆಯದು. ಸಮುದಾಯಗಳ ಒಳಿತಿನ ಉದ್ದೇಶದಿಂದ ನಡೆಯುವ ಈ ದತ್ತಾಂಶ ಸಂಗ್ರಹದ ವಿಚಾರದಲ್ಲಿ ಕೆಟ್ಟ ರಾಜಕೀಯ ಮಾಡುವುದು ತರವಲ್ಲ.

**ಸಮುದಾಯಗಳ ಒಳಿತಿನ ಉದ್ದೇಶದಿಂದ ನಡೆಯುವ ಈ ದತ್ತಾಂಶ ಸಂಗ್ರಹದ ವಿಚಾರದಲ್ಲಿ ಕೆಟ್ಟ ರಾಜಕೀಯ ಮಾಡುವುದು ತರವಲ್ಲ**

# ರಾಮಾಯಣ



## ಶತೃಘನು ಮಂಥರೆಯನ್ನು ದಂಡಿಸಿದ್ದು

• ಹಿಂದಿನ ಸಂಚಿಕೆಯಿಂದ 78ನೆಯ ಅಧ್ಯಾಯ

ಮುತ್ತು ರತ್ನಗಳು ಹರಡಿದ ಆ ಅಂಗಳನ್ನು ನಕ್ಷತ್ರಗಳಿಂದ ಇಟ್ಟಣಿಸಿದ ಶರತ್ಕಾಲದ ಆಕಾಶದಂತೆ ಕಾಣುತ್ತಿತ್ತು. ಆಗ ಭರತನು ಮಂಥರೆಯ ನಿಮಿತ್ರವಾಗಿ ಅತ್ಯಂತ ದೈನ್ಯ ಪಡುತ್ತಿದ್ದ ಕೈಕೇಯಿದೇವಿಯನ್ನು ಕಂಡು ಶತ್ರುಘ್ನನು ಕುರಿತು ಶತ್ರುಘ್ನ, ಲೋಕದಲ್ಲಿ ಹೆಂಗೊಲೆಯು ನಿಷಿದ್ದ: ಇವಳನ್ನು ಕೊಂದು ಮಾಡುವುದೇನು? ಕ್ಷಮಿಸು, ಪಾಪಸ್ವರೂಪಳಾದ ಕೈಕೇಯಾ ದೇವಿಯನ್ನು ಕೊಳ್ಳಬೇಕು: ಹಾಗೆ ಮಾಡಿದರೆ ಧರ್ಮಿಷ್ಟನಾದ ಶ್ರೀರಾಮನು ನಮ್ಮ ಮೇಲೆ ಕೋಪಿಸುವನು. ಇಲ್ಲದಿದ್ದರೆ ಕೈಕೇಯಿಯನ್ನು ನಾನೇ ಕೊಲ್ಲುತ್ತಿದ್ದೆ ಎಂದು ನುಡಿದನು.


ಆ ಮಾತನ್ನು ಕೇಳಿ ಶತ್ರುಘ್ನನು ಮಂಥರೆಯನ್ನು ಬಿಟ್ಟು ಬಿಟ್ಟನು. ಅವಳು ಕೈಕೇಯಾ ದೇವಿಯ ಕಾಲುಗಳಲ್ಲಿ ಬಿದ್ದು ಗೋಳಾಡಿದಳು. ಈ ರೀತಿ ಶತ್ರುಘ್ನನ ಪೆಟ್ಟಿನಿಂದ ಮೂರ್ಛಿತಳಾಗಿ ಬಿದ್ದು ಬಲೆಗಾರರಿಂದ ಕಟ್ಟುವಟ್ಟು ಹಂಬಲಿಸುವ ಕ್ರೌಂಡಪಕ್ಷಿಯ ಹಾಗಿದ್ದ ಮಂಥರೆಯನ್ನು ಕೈಕೇಯಾದೇವಿಯು ಮೈಮನುಡಿಗಳಿಂದ ಸಂತವಿಟ್ಟಳು.

## ಶ್ರೀರಾಮನನ್ನು ಕರೆತರಲು ಭರತನ ನಿಶ್ಚಯ

ದಶರಥರಾಯನ್ನು ಸ್ವರ್ಗಸ್ಥನಾದ ಹದಿನಾಲ್ಕನೇಯ ದಿವಸ ಪ್ರಧಾನಿಗಳೆಲ್ಲರೂ ಕೂಡಿಕೊಂಡು ಭರತನನ್ನು ಕುರಿತು ರಾಜಕುಮಾರ, ನಮಗೆ ಒಡೆಯನಾದ ದಶರಥರಾಯನು ಲಕ್ಷ್ಮಣಸಮೇತನಾದ ರಾಮನನ್ನು ವನಕ್ಕೆ ಹೊರಡಿಸಿ ಸ್ವರ್ಗಸ್ಥನಾದನು. ಇನ್ನು ನಮಗೆಲ್ಲರಿಗೂ ನೀನೇ ಅರಸನಾಗಬೇಕು. ಮಸ್ತ ರಾಜ್ಯವೂ ನಿನಗೆ ಅನುಕೂಲವಲ್ಲದೆ ಪ್ರತಿಕೂಲವಲ್ಲ. ಪಟ್ಟಾಭಿಷೇಕಕ್ಕೆ ಸಂಪಾದಿಸಿದ ಸಾಮಗ್ರಿಗಳಲ್ಲವೂ ಸಿದ್ಧವಾಗಿವೆ. ನಿನಗೆ ಆಪ್ತರಾದ ಜನಸಮೂಹವು ನಿನಗೆ ರಾಜ್ಯಾಧಿಪತ್ಯವಾಗ ಬೇಕೆಂದು ಬಯಸುತ್ತಿದೆ. ನೀನು ನಿಮ್ಮ ವಂಶಪರಂಪರೆಯಿಂದ ಬಂದ ರಾಜ್ಯವನ್ನು ಪರಿಪಾಲಿಸು, ಪಟ್ಟಾಭಿಷೇಕವನ್ನಾ ಮಾಡಿಸಿಕೊಂಡು ನಮ್ಮನ್ನು ಪಾಲಿಸು ಎಂದು ನುಡಿದರು. ಭರತನು ಆ ಪ್ರಧಾನರನ್ನು ಕುರಿತು ಹೀಗೆಂದನು: ಎಲೈ ಪ್ರಧಾನರುಗಳಿರಾ, ನಮ್ಮ ವಂಶದಲ್ಲಿ ಜ್ಯೇಷ್ಠಪುತ್ರನಿಗೆ ರಾಜ್ಯಾಧಿಪತ್ಯವು ಸಲ್ಲುವುದಲ್ಲದೆ ಉಳಿದವರಿಗೆ ಸಲ್ಲದು: ನೀವು ನನಗೆ ಪಟ್ಟಾಭಿಷೇಕಮಾಡಿಕೊಳ್ಳಬೇಕೆಂದು ಹೇಳುವುದು ಉಚಿತವಲ್ಲ. ನನ್ನ ಜ್ಯೇಷ್ಠಬಭ್ರಾತೃವಾದ ಶ್ರೀರಾಮನು ರಾಜ್ಯಪರಿಪಾಲನವನ್ನು ಮಾಡಲಿ. ನಾನು ಹದಿನಾಲ್ಕು ವರ್ಷಗಳು ವನವಾಸವನ್ನು ಮಾಡುವೆನು. ನಾನು ಚತುರಂಗಬಲಸವೇತನಾಗಿ ಪ್ರಯಾಣಮಾಡಿ ಸರ್ವಪ್ರಕಾರದಿಂದಲೂ ಶ್ರೀರಾಮನನ್ನು ಕರತರುವೆನು. ಪಟ್ಟಾಭಿಷೇಕಕ್ಕೆ ಸಂಪಾದಿಸಿದ ಈ ವಸ್ತುಗಳನ್ನು ಮುಂದಿಟ್ಟುಕೊಂಡು ಆತನ ಸಮೀಪಕ್ಕೆ ಹೋಗಿ ಅಲ್ಲಿಯೇ ಪಟ್ಟಾಭಿಷೇಕವನ್ನು ಮಾಡಿ, ಯಾಗಮಂಟಪದಿಂದ ಯಜ್ಞ ಪುರುಷನನ್ನು ಬಿಜಯಂಗೈಯಿಸಿಕೊಂಡುಬರುವಂತೆ ವನದಿಂದ ಶ್ರೀರಾಮನನ್ನು ಕರೆತರುವೆನು. ನನಗೆ ಹೆತ್ತತಾಯಿಯೆಂದು ಹೇಳಿಸಿಕೊಂಡ ಕೈಕೇಯಾದೇವಿಯ ಇಷ್ಟಾರ್ಥವನ್ನು ನಡೆಯಿಸುವುದಿಲ್ಲ. ನಾನು ವನಕ್ಕೆ ಹೋಗುತ್ತೇನೆ. ಪ್ರೀರಾಮನಂ ರಾಜ್ಜವರಿವಾಲನವನ್ನು ಮಾಡಿಕೊಂಡು ಅಯೋಧ್ಯಾ ಕಲೆ ಪಟ್ಟಇದಲ್ಲಿರಲಿ. ಆತನಿರುವ ವನಕ್ಕೆ ಹೋಗುವ ಮಾರ್ಗಗಳಲ್ಲಿರುವ ಹಳ್ಳತಿಟ್ಟುಗಳನ್ನುತ್ಯ ಸರಿಮಾಡುವಹಾಗೆ ಆಯಾ ದಾರಿಗಳ ಸಮೀಪದಲ್ಲಿರುವ ಮೆರ್ಗಾಧಿಪತಿಗಳಿಗೆ ಹೇಳಿಕಳುಶಿಸ ಎಂದು ಹೇಳಿದನು. ಆ ಮಾತನ್ನೂ ಕೇಳಿ ಸಕಲಹನರೂ ಭರತನನ್ನು ಕುರಿತು ಭರತ. ನೀನು ಜ್ಯೇಷ್ಠ ಭ್ರಾತ್ಮವಾದ ಶ್ರೀರಾಮನಿಗೆ ರಾಜ್ಞಾಧಿಪತ್ಯವನ್ನು ಕೊಡಬೇಕೆಂದು ನುಡಿದಾಗಲೆ ಕಮಲಹಸ್ತಳಾದ ರಾಜಲಕಿ ಯು ನಿನಗೆ ಪ್ರತ್ಮಕವಾದಳಂ ಳಳ, ಬಜ ಓಮ ಮತ್ತು ಅವನು ಶ್ರೀರಾಮನನ್ನು ವನದಿಂದ ಕರತರುವನೆಂದು ಅತ್ಯಂತ ಸಂತೋಷಪಟ್ಟು ಆನೆಂದಾಶ್ರುಗಳನ್ನು ಸುರಿಸಿದರು. ಆ ಬಳಿಕ ಸಮಸ್ತ ಪ್ರಧಾನರೂ ತಮ್ಮ ಮನಸ್ಸಿನಲ್ಲಿದ್ದ ದುಃಖವನ್ನು ಬಿಟ್ಟು ಸಂತೋಷಯುಕ್ತರಾಗಿ ಅಲಲ್ಲಿದ್ದ ದುರ್ಗಾಧಿಪತಿಗಳಿಗೆ ಹೇಳಿಕಳುಶಿಸಿ ಆ ವೃತ್ತಾಂತವನ್ನು ಭರತನಿಗೆ ಹೇಳಿದರು.

ಮುಂದುವರಿಯುವುದು...

# ಗರ್ಭಾವಸ್ಥೆಯಲ್ಲಿ ಮಧುಮೇಹ ಬಂದ್ರೆ ಇನ್ಸುಲಿನ್ ತೆಗೆದುಕೊಳ್ಳಲೇ ಬೇಕಾ?



ಗರ್ಭಾವಸ್ಥೆಯಲ್ಲಿ ಭ್ರೂಣದ ಬೆಳವಣಿಗೆಯಿಂದಾಗಿ ಮಹಿಳೆಯರ ದೇಹದಲ್ಲಿ ಅನೇಕ ಬದಲಾವಣೆಗಳು ಸಂಭವಿಸುತ್ತವೆ. ಈ ಬದಲಾವಣೆಗಳಲ್ಲಿ ಹಾರ್ಮೋನುಗಳ ಬದಲಾವಣೆಗಳು ಸಹ ಸೇರಿವೆ. ಕೆಲವು ಮಹಿಳೆಯರ ದೇಹದಲ್ಲಿನ ಬದಲಾವಣೆಗಳಿಂದಾಗಿ, ಗರ್ಭಾವಸ್ಥೆಯಲ್ಲಿ ಮಧುಮೇಹದ ಸಮಸ್ಯೆ ಉಂಟಾಗಬಹುದು . ಇದು ಗರ್ಭಾವಸ್ಥೆಯಲ್ಲಿ ಮಹಿಳೆಯ ರಕ್ತದಲ್ಲಿನ ಸಕ್ಕರೆ ಮಟ್ಟವು ಮೊದಲ ಬಾರಿಗೆ ಸಾಮಾನ್ಯಕ್ಕಿಂತ ಹೆಚ್ಚಾಗುವ ಸ್ಥಿತಿಯಾಗಿದೆ. ಅಂತಹ ಪರಿಸ್ಥಿತಿಯಲ್ಲಿ, ಪ್ರತಿಯೊಬ್ಬ ಮಹಿಳೆಗೆ ಇನ್ಸುಲಿನ್ ಅಗತ್ಯವಿದೆಯೇ ಅಥವಾ ಆಹಾರ, ವ್ಯಾಯಾಮದಿಂದ ಅದನ್ನು ನಿಯಂತ್ರಿಸಬಹುದೇ ಎನ್ನುವುದನ್ನು ಸಾಯಿ ಪಾಲಿಕ್ಲಿನಿಕ್‌ನ ಹಿರಿಯ ಸ್ತ್ರೀ ರೋಗತಜ್ಞೆ ಡಾ. ವಿಭಾ ಬನ್ಸಾಲ್ ಓನ್ಲಿ ಮೈ ಹೆಲ್ತ್‌ಗೆ ತಿಳಿಸಿದ್ದಾರೆ.



**ಇನ್ಸುಲಿನ್ ಉತ್ಪಾದಿಸಲು ಸಾಧ್ಯವಾಗದಿದ್ದಾಗ ಏನಾಗುತ್ತದೆ:** ಗರ್ಭಾವಸ್ಥೆಯಲ್ಲಿ ಮಹಿಳೆಯ ದೇಹವು ಸಾಕಷ್ಟು ಇನ್ಸುಲಿನ್ ಉತ್ಪಾದಿಸಲು ಸಾಧ್ಯವಾಗದಿದ್ದಾಗ, ಇನ್ಸುಲಿನ್‌ಗೆ ದೇಹದ ಪ್ರತಿಕ್ರಿಯೆ ಕಡಿಮೆಯಾದಾಗ, ರಕ್ತದಲ್ಲಿನ ಗ್ಲೂಕೋಸ್ ಮಟ್ಟವು ಹೆಚ್ಚಾಗಲು ಪ್ರಾರಂಭಿಸುತ್ತದೆ. ಇದನ್ನು ಗರ್ಭಾವಸ್ಥೆಯ ಮಧುಮೇಹ ಎಂದು ಕರೆಯಲಾಗುತ್ತದೆ. ಇದು ಸಾಮಾನ್ಯವಾಗಿ ಗರ್ಭಧಾರಣೆಯ ಎರಡನೇ, ಮೂರನೇ ತ್ರೈಮಾಸಿಕದಲ್ಲಿ ಕಂಡುಬರುತ್ತದೆ ಮತ್ತು ಹೆರಿಗೆಯ ನಂತರ ಸ್ವತಃ ಗುಣವಾಗುತ್ತದೆ. ಆದರೆ ಇದನ್ನು ನಿರ್ಲಕ್ಷಿಸುವುದು ತಾಯಿ ಮತ್ತು ಮಗುವಿಗೆ ಅಪಾಯಕಾರಿಯಾಗಬಲ್ಲದು.

**ಗರ್ಭಾವಸ್ಥೆಯ ಮಧುಮೇಹದ ಸಾಮಾನ್ಯ ಲಕ್ಷಣಗಳು:** ಆಗಾಗ್ಗೆ ಬಾಯಾರಿಕೆಯಾಗುವುದು, ಅತಿಯಾದ ಹಸಿವು, ಆಯಾಸ, ದೃಷ್ಟಿ ಮಂದವಾಗುವುದು ಈ ಲಕ್ಷಣಗಳನ್ನು ರಕ್ತದಲ್ಲಿನ ಸಕ್ಕರೆ ಪರೀಕ್ಷೆ ಮೂಲಕ ದೃಢೀಕರಿಸಲಾಗುತ್ತದೆ.

**ಯಾವ ಗರ್ಭಿಣಿಯರಿಗೆ ಇನ್ಸುಲಿನ್ ಅಗತ್ಯವಿದೆ?:** ಆಹಾರ, ವ್ಯಾಯಾಮವು ರಕ್ತದಲ್ಲಿನ ಸಕ್ಕರೆಯನ್ನು ನಿಯಂತ್ರಿಸದಿದ್ದಾಗ ಊಟದ 1 ಗಂಟೆಯ ನಂತರ ಮಹಿಳೆಯ ಉಪವಾಸದ ರಕ್ತದಲ್ಲಿನ ಸಕ್ಕರೆಯು 140 mg/dL ಗಿಂತ ಹೆಚ್ಚಿದ್ದರೆ, ಇನ್ಸುಲಿನ್ ಅನ್ನು ಪ್ರಾರಂಭಿಸಬೇಕಾಗಬಹುದು. ಮಗುವಿನ ಬೆಳವಣಿಗೆ ಸಾಮಾನ್ಯಕ್ಕಿಂತ ಹೆಚ್ಚಾಗಿರುವ ಗರ್ಭಿಣಿಯರಿಗೆ ಇನ್ಸುಲಿನ್ ಅಗತ್ಯವಿರುತ್ತದೆ. ಅಧಿಕ ರಕ್ತದೊತ್ತಡ, ಥೈರಾಯ್ಡ್ ಸಮಸ್ಯೆ, ಮಧುಮೇಹದ ಇತಿಹಾಸವಿದ್ದರೆ. ಅಧಿಕ ರಕ್ತದ ಸಕ್ಕರೆಯಿಂದಾಗಿ, ಮಗು ಗರ್ಭದಲ್ಲಿ ದೊಡ್ಡದಾಗಿ ಬೆಳೆಯಬಹುದು, ಇದು ಸಾಮಾನ್ಯ ಹೆರಿಗೆಯಲ್ಲಿ ಸಮಸ್ಯೆಗಳನ್ನು ಉಂಟುಮಾಡುತ್ತದೆ. ತಾಯಿಗೆ ಈಗಾಗಲೇ ಬೇರೆ ಯಾವುದೇ ಕಾಯಿಲೆ ಇದ್ದರೆ. ಹಿಂದಿನ ಗರ್ಭಾವಸ್ಥೆಯಲ್ಲಿ ಮಹಿಳೆಗೆ ಗರ್ಭಾವಸ್ಥೆಯ ಮಧುಮೇಹವಿದ್ದರೆ. ಅಂತಹ ಮಹಿಳೆಯರಿಗೆ ಗರ್ಭಾವಸ್ಥೆಯಲ್ಲಿ ಮತ್ತೆ ಮಧುಮೇಹ ಬರುವ ಸಾಧ್ಯತೆ ಹೆಚ್ಚು.

**ಪ್ರತಿಯೊಂದು ಗರ್ಭಾವಸ್ಥೆಯ ಮಧುಮೇಹದಲ್ಲೂ ಇನ್ಸುಲಿನ್ ಅಗತ್ಯವಿದೆಯೇ?:** ಗರ್ಭಾವಸ್ಥೆಯಲ್ಲಿ ಮಧುಮೇಹದ ಪ್ರತಿಯೊಂದು ಪ್ರಕರಣದಲ್ಲೂ ಮಹಿಳೆಯರು ಇನ್ಸುಲಿನ್ ತೆಗೆದುಕೊಳ್ಳುವ ಅಗತ್ಯವಿಲ್ಲ ಎನ್ನುತ್ತಾರೆ ವೈದ್ಯರು. ಗರ್ಭಾವಸ್ಥೆಯಲ್ಲಿ ಮಧುಮೇಹದ ಚಿಕಿತ್ಸೆಯನ್ನು ಸಾಮಾನ್ಯವಾಗಿ ಆಹಾರ ಬದಲಾವಣೆಗಳು, ದೈಹಿಕ ಚಟುವಟಿಕೆ, ರಕ್ತದಲ್ಲಿನ ಸಕ್ಕರೆ ಮೇಲ್ವಿಚಾರಣೆಯೊಂದಿಗೆ ಪ್ರಾರಂಭಿಸಲಾಗುತ್ತದೆ. ಆದರೆ ಕೆಲವು ಸಂದರ್ಭಗಳಲ್ಲಿ, ಈ ಕ್ರಮಗಳು ಪರಿಣಾಮಕಾರಿಯಾಗದಿದ್ದಾಗ, ವೈದ್ಯರು ಇನ್ಸುಲಿನ್ ಚಿಕಿತ್ಸೆಯನ್ನು ಶಿಫಾರಸು ಮಾಡುತ್ತಾರೆ.

**ಇನ್ಸುಲಿನ್ ಚಿಕಿತ್ಸೆಯನ್ನು ಹೇಗೆ ನೀಡಲಾಗುತ್ತದೆ?**

**ಇನ್ಸುಲಿನ್ ಅನ್ನು ಇಂಜೆಕ್ಷನ್ ರೂಪದಲ್ಲಿ ನೀಡಲಾಗುತ್ತದೆ. ಏಕೆಂದರೆ ಇದನ್ನು ಮಾತ್ರೆ ರೂಪದಲ್ಲಿ ನೀಡಲಾಗುವುದಿಲ್ಲ. ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಅವಲಂಬಿಸಿ ವೈದ್ಯರು ದಿನಕ್ಕೆ ಒಂದು ಅಥವಾ ಹೆಚ್ಚು ಬಾರಿ ಇನ್ಸುಲಿನ್ ತೆಗೆದುಕೊಳ್ಳುವಂತೆ ಶಿಫಾರಸು ಮಾಡಬಹುದು. ಇದು ಸಂಪೂರ್ಣವಾಗಿ ಸುರಕ್ಷಿತವಾಗಿದೆ ಮತ್ತು ಮಗುವಿಗೆ ಯಾವುದೇ ಹಾನಿ ಮಾಡುವುದಿಲ್ಲ.**

# ರಂಗ್‌ಮಂಚ್ ಪ್ರವೇಶಕ್ಕೆ ಅಣಿಯಾದ ಶ್ರೀಚರಿತಾ ಗಂಗಟ್ಕರ್

• ಉದಯವಾಹಿನಿ, ಬೆಂಗಳೂರು

ನಗರದ ಪ್ರಖ್ಯಾತ ನೃತ್ಯ ಸಂಸ್ಥೆ ಸಾಯಿ ಆರ್ಟ್ಸ್ ಇಂಟರ್ ನ್ಯಾಷನಲ್‌ನ ಗುರು ಶ್ವೇತಾ ವೆಂಕಟೇಶ್ ಶಿಷ್ಯೆ, ಹೆಸರಾಂತ ನೃತ್ಯ ದಂಪತಿ- ಚೇತನಾ- ಚಂದ್ರಪ್ರಭಾ ಅವರ ಪುತ್ರಿ ಶ್ರೀಚರಿತಾ ಗಂಗಟ್ಕರ್ ಕಥಕ್ ರಂಗ್‌ಮಂಚ್ ಪ್ರವೇಶ' ಕ್ಕೆ ವೇದಿಕೆ ಸನ್ನದ್ಧವಾಗಿದೆ. ಜೂ. 18ರ ಸಂಜೆ 6ಕ್ಕೆ ವಯ್ಯಲಿಕಾವಲ್‌ನ ಚೌಡಯ್ಯ ಭವನದಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮಕ್ಕೆ ಅತಿಥಿಗಳಾಗಿ ವಿದುಷಿ ದುರ್ಗಾ ಆರ್ಯ, ವಿದುಷಿ ಶುಭಾ ಧನಂಜಯ, ರಾಮಕಥಾ ಖ್ಯಾತಿಯ ವಿದ್ವಾನ್ ಸತ್ಯನಾರಾಯಣ ರಾಜು, ವಿದುಷಿ ಸುಪರ್ಣಾ ವೆಂಕಟೇಶ ಮತ್ತು ಸಾಯಿ ವೆಂಕಟೇಶ ಸಾಕ್ಷಿಯಾಗಲಿದ್ದಾರೆ. ರಾಜಧಾನಿಯ ಅಗ್ರಮಾನ್ಯ ನೃತ್ಯ ದಂಪತಿಗಳಲ್ಲಿ ಕೂಚುಪುಡಿ- ಭರತನಾಟ್ಯ ಸಮನ್ವಯಮಾಡಿಕೊಂಡು ಔನ್ನತ್ಯ ಸಾಧಿಸಿರುವ ಜೋಡಿ ಚಂದ್ರಪ್ರಭಾ- ಚೇತನ್‌ರ ಹೆಮ್ಮೆಯ ಪುತ್ರಿಯೇ ಶ್ರೀಚರಿತಾ. ಈಕೆ ವಿದ್ಯಾಂಜಲಿ ಅಕಾಡೆಮಿಯಲ್ಲಿ 9ನೇ ತರಗತಿ ವ್ಯಾಸಂಗ ಮಾಡುತ್ತಿದ್ದಾಳೆ. ಎಳವೆಯಲ್ಲೇ ಕಲಾಸಕ್ತಿ ಮೈಗೂಡಿಸಿಕೊಂಡಿದ್ದು, ಭರತನಾಟ್ಯ- ಕಥಕ್‌ನ ಪಾಠಾಂತರಗಳನ್ನು ಸೂಕ್ಷ್ಮವಾಗಿ ಗ್ರಹಿಸಿ ತನ್ನ ಕ್ರಿಯಾಶೀಲತೆ ಹೊಮ್ಮಿಸುತ್ತಿರುವುದು ಗಮನಾರ್ಹವಾಗಿದೆ. ಈಗಾಗಲೇ ತಂದೆ- ತಾಯಿ ಬಳಿಯೇ ಭರತನಾಟ್ಯ ಕಲಿತು 2 ವರ್ಷದ ಹಿಂದೆಯೇ ರಂಗ ಪ್ರವೇಶ ಮಾಡಿರುವ ಈಕೆ, ಕಥಕ್ ಬಗ್ಗೆ ಅಪಾರ ಆಸಕ್ತಿ ತೋರಿದ ಫಲವಾಗಿ ಗುರು ಶ್ವೇತಾರ ಪ್ರೀತಿಯ ಶಿಷ್ಯೆಯಾಗಿದ್ದಾಳೆ. ಕಥಕ್ ರಂಗ್‌ಮಂಚ್ ಪ್ರವೇಶಕ್ಕೆ ಸನ್ನದ್ಧಳಾಗಿರುವುದು ವಿಶೇಷದಲ್ಲಿ ವಿಶೇಷ.



**ಬಹುಮುಖೀ ಕಲಾಸಕ್ತಿ:** ಶ್ರೀಚರಿತಾ ಕರ್ನಾಟಕ ಶಾಸ್ತ್ರೀಯ ಸಂಗೀತ, ಕಥಕ್, ಭರತನಾಟ್ಯದಲ್ಲಿ ಜೂನಿಯರ್ ಪರೀಕ್ಷೆಯನ್ನು ಅತ್ಯುನ್ನತ ಶ್ರೇಣಿಯಲ್ಲಿ ಪೂರ್ಣಗೊಳಿಸಿದ್ದಾಳೆ. ಶಾಲಾ ವ್ಯಾಸಂಗದಲ್ಲೂ ಮೊದಲ ಸ್ಥಾನದಲ್ಲೇ ಇದ್ದು, ಥ್ರೋ ಬಾಲ್, ಹ್ಯಾಂಡ್ ಬಾಲ್, ಪೆನ್ಸಿಲ್ ಸ್ಕೆಚ್ ಡ್ರಾಯಿಂಗ್‌ನಲ್ಲೂ ವಿಶೇಷ ಪ್ರೌಢಿಮೆ ತೋರಿ ಅನೇಕ ಬಹುಮಾನ ಪಡೆದಿರುವುದು ಬಹುಮುಖೀ ಕಲಾಸಕ್ತಿಗೆ ಹಿಡಿದ ಕನ್ನಡಿಯಾಗಿದೆ.

# ಡಯಟ್ ಫಾಲೋ ಮಾಡಿದರೆ ತೂಕ ಇಳಿಸಬಹುದು ಕೊಲೆಸ್ಟ್ರಾಲ್ ಕಮ್ಮಿ ಆಗುತ್ತೆ

ಅವ್ಯವಸ್ಥಿತ ಆಹಾರ ಕ್ರಮಗಳು ಮತ್ತು ಅಸಹಜ ತೂಕ ಇಳಿಸುವ ಭರವಸೆಗಳನ್ನು ನೀಡುವ ಈ ಜಗತ್ತಿನಲ್ಲಿ ಒಬ್ಬ ವ್ಯಕ್ತಿ ತಮ್ಮ ಸರಳ ಮತ್ತು ವೈಜ್ಞಾನಿಕ ಸಲಹೆಗಾಗಿ ಎದ್ದು ಕಾಣುತ್ತಾರೆ – ಡಾ. ಬಿಮಲ್ ಛಾಜರ್. ಇವರು ಒಬ್ಬ ಹೃದ್ರೋಗ ತಜ್ಞ. ಗೌರವ್ ಠಾಕೂರ್ ಅವರೊಂದಿಗಿನ ಇತ್ತೀಚಿನ ಪಾಡ್ ಕ್ಯಾಸ್ಟ್ ನಲ್ಲಿ ಅವರು ಜಾದೂ ಡಯಟ್ ಎಂದು ಕರೆಯುವ ಸರಳ ಮತ್ತು ಸಸ್ಯ ಆಧಾರಿತ ಆಹಾರ ಪದ್ಧತಿಯ ಬಗ್ಗೆ ಮಾತನಾಡಿದರು. ಈ ಆಹಾರಕ್ರಮವನ್ನು ಅನುಸರಿಸಿ ಕೇವಲ ಒಂದು ತಿಂಗಳಲ್ಲಿ 7 ಕಿಲೋಗ್ರಾಂಗಳಷ್ಟು ತೂಕ ಇಳಿಸಿಕೊಳ್ಳಲು ಸಹಾಯ ಮಾಡುತ್ತದೆ ಎಂದು ಹೇಳಲಾಗುತ್ತದೆ ಇದನ್ನು ಮಾಡಲು ಊಟ ಬಿಡುವ ಅವಶ್ಯಕತೆ ಇಲ್ಲ.



ಬದಲಾಗಿ ಸ್ಮಾರ್ಟ್ ವಿಧಾನಗಳನ್ನು ಅನುಸರಿಸುವುದರ ಬಗ್ಗೆ ಅವರು ಹೇಳುತ್ತಾರೆ ಫೈಬರ್ ಭರಿತ ಆಹಾರಗಳು ಮತ್ತು ನೈಸರ್ಗಿಕ ಮಾರ್ಗಗಳನ್ನು ಬಳಸುವುದರಿಂದ ಅವು ಹೇಗೆ ಮ್ಯಾಜಿಕ್ ಮಾಡುತ್ತದೆ ಎನ್ನುವ ಬಗ್ಗೆ ತಿಳಿಸಿಕೊಡುತ್ತಾರೆ. ಈ ಸರಳ ಅಡುಗೆಮನೆಯ ವಸ್ತುಗಳು ವಾಸ್ತವವಾಗಿ ಡಿಟಾಕ್ಸ್, ತೂಕ ನಷ್ಟ, ಕೊಲೆಸ್ಟ್ರಾಲ್ ಕಡಿತ ಮಾಡುವಲ್ಲಿ ಹೇಗೆ ಸಹಾಯ ಮಾಡುತ್ತದೆ ಎಂಬುದರ ಕುರಿತು ನಾವು ತಿಳಿದುಕೊಳ್ಳಬೇಕಾದದ್ದು ಇಲ್ಲಿದೆ.

**ಬ್ಲ್ಯಾಕ್ ಚಹಾಗೆ ನಿಂಬೆಹಣ್ಣಿನ ರಸ, ಜೇನು ತುಪ್ಪ ಸೇರಿಸಿ ಕುಡಿಯಿರಿ:** ಈ ಸಂಯೋಜನೆಯು ಚಯಾಪಚಯ ಕ್ರಿಯೆಯನ್ನು ಪ್ರಾರಂಭಿ ಸುತ್ತದೆ. ಕೊಬ್ಬನ್ನು ಹೊರ ಹಾಕುವುದು ಮಾತ್ರವಲ್ಲದೆ ವಿಷವನ್ನು ಹೊರಹಾಕುತ್ತದೆ. ಬ್ಲ್ಯಾಕ್ ಚಹಾವು ಹಾಲು ಇಲ್ಲದೆ ಫ್ಲೆವನಾಯ್ಡ್‌ಗಳಿಂದ ಸಮೃದ್ಧವಾಗಿದೆ. ಉತ್ಕರ್ಷಣ ನಿರೋಧಕಗಳನ್ನು ಹೊಂದಿದ್ದು ಇದಕ್ಕೆ ಕೆಲವು ಹನಿ ನಿಂಬೆ ರಸವನ್ನು ಹಾಕುವುದರಿಂದ ವಿಟಮಿನ್ ಸಿ ಯ ಅಂಶವನ್ನು ಇದು ಹೆಚ್ಚಿಸುತ್ತದೆ. ಇದರಿಂದಾಗಿ ಜೀರ್ಣಕ್ರಿಯೆ ಹೆಚ್ಚಾಗುತ್ತದೆ. ಜೇನುತುಪ್ಪವು ಸೀಮಿತ ಪ್ರಮಾಣದಲ್ಲಿ ನೈಸರ್ಗಿಕ ಸಕ್ಕರೆಯನ್ನು ನೀಡುತ್ತದೆ ಮತ್ತು ಇದು ಉರಿಯೂತ ನಿರೋಧಕ ಸಂಯುಕ್ತಗಳನ್ನೂ ಹೊಂದಿದೆ. ಖಾಲಿ ಹೊಟ್ಟೆಯಲ್ಲಿ ಈ ಸಂಯೋಜನೆಯ ಚಹಾವನ್ನು ಕುಡಿಯುವುದರಿಂದ ಜೀರ್ಣಾಂಗ ವ್ಯವಸ್ಥೆಯು ಚುರುಕಾಗುವು ದಲ್ಲದೆ, ಭಾರೀ ಉಪಹಾರದ ಆಲಸ್ಯವನ್ನು ತಪ್ಪಿಸುತ್ತದೆ. ಕೊಬ್ಬನ್ನು ಸುಡಲು ಇದು ಸಹಾಯಕ. ಅಲ್ಲದೆ ಬೆಳಗ್ಗೆ ಹಾಲು ಮತ್ತು ಸಂಸ್ಕರಿಸಿದ ಸಕ್ಕರೆಯ ಪಾನೀಯ ಗಳನ್ನು ಬಿಟ್ಟು ಇದನ್ನು ಸೇವಿಸುವುದರಿಂದ ಅಪಾರ ಪ್ರಯೋಜನ ಗಳು ಸಿಗುತ್ತವೆ. ಮತ್ತು ಕಾಲಾನಂತರ ಆರೋಗ್ಯವನ್ನು ಸುಧಾರಿಸಲು ಒಂದು ಉತ್ತಮ ಬದಲಾವಣೆ ಎನ್ನಬಹುದು.


**ಹಣ್ಣಿನ ಉಪಹಾರ:** ಬೆಳಗ್ಗೆ ಉಪಹಾರದಲ್ಲಿ ಹಣ್ಣನ್ನು ಸೇವಿಸುವುದು ಒಂದು ಉತ್ತಮ ಅಭ್ಯಾಸ ಇದು ಹೊಟ್ಟೆಯನ್ನು ತುಂಬಿಸುವುದು ಮಾತ್ರವಲ್ಲದೆ ಕೆಟ್ಟ ಕೊಲೆಸ್ಟ್ರಾಲ್ ಅನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ದಾಳಿಂಬೆ ಕೇವಲ ಸಿಹಿ ಹಣ್ಣಲ್ಲ. ಇದು ಪಾಲಿಫಿನಾಲ್‌ಗಳು, ಪ್ಯೂನಿಕಾಲಾಜಿನ್‌ಗಳು ಮತ್ತು ಫೈಬರ್ ನಿಂದ ತುಂಬಿದ್ದು, ಇವೆಲ್ಲವೂ ಹೃದಯದ ಆರೋಗ್ಯವನ್ನು ಸುಧಾರಿಸಲು ಸಂಬಂಧಿಸಿವೆ. ನಿಯಮಿತ ಸೇವನೆಯು ಕೆಟ್ಟ ಕೊಲೆಸ್ಟ್ರಾಲ್ ಅನ್ನು ಕಡಿಮೆ ಮಾಡಲು, ಅಪಧಮನಿಯ ಬಿಗಿತವನ್ನು ತಡೆಯಲು ಸಹಾಯ ಮಾಡುತ್ತದೆ ಎಂದು ಅಧ್ಯಯನಗಳು ಸೂಚಿಸುತ್ತವೆ.

# ಪುರುಷರಿಗೆ ಗಸಗಸೆ ಬೀಜದ ಸೇವನೆ ತುಂಬಾನೇ ಒಳ್ಳೆಯದು ಯಾಕೆ?



ಗಸಗಸೆ ಬೀಜಗಳನ್ನು ತಿನ್ನುವುದು ಆರೋಗ್ಯಕ್ಕೆ ತುಂಬಾ ಪ್ರಯೋಜನಕಾರಿ ಎಂದು ಪರಿಗಣಿಸಲಾಗುತ್ತದೆ. ಗಸಗಸೆ ಬೀಜಗಳನ್ನು ತಿನ್ನುವುದು ಅನೇಕ ಅಗಾಧವಾದ ಆರೋಗ್ಯ ಪ್ರಯೋಜನಗಳನ್ನು ನೀಡುತ್ತದೆ. ಇದನ್ನು ತಿನ್ನುವುದರಿಂದ ನಿಮ್ಮ ಜೀರ್ಣಾಂಗ ವ್ಯವಸ್ಥೆ ಬಲಪಡಿಸುವುದಲ್ಲದೆ, ರಕ್ತದೊತ್ತಡವನ್ನು ಕಡಿಮೆ ಮಾಡುತ್ತದೆ ಮತ್ತು ದೇಹದಲ್ಲಿ ಶಕ್ತಿಯನ್ನು ಹೆಚ್ಚಿಸುತ್ತದೆ. ಕೆಲವರು ಗಸಗಸೆ ಬೀಜಗಳನ್ನು ತಿನ್ನುವುದು ಪುರುಷರಿಗೂ ಆರೋಗ್ಯಕರ ಎಂದು ನಂಬುತ್ತಾರೆ. ಹೌದು, ಗಸಗಸೆ ಬೀಜಗಳನ್ನು ತಿನ್ನುವುದು ಪುರುಷರಿಗೂ ಹಲವು ವಿಧಗಳಲ್ಲಿ ಆರೋಗ್ಯಕರವಾಗಿರುತ್ತದೆ. ಗಸಗಸೆ ಬೀಜಗಳಲ್ಲಿ ಅಗತ್ಯವಾದ ಕೊಬ್ಬಿನಾಮ್ಲಗಳು ಮತ್ತು ಸತು ಕಂಡುಬರುತ್ತವೆ, ಇದು ನಿಮ್ಮ ಆರೋಗ್ಯವನ್ನು ಉತ್ತಮವಾಗಿರಿಸುತ್ತದೆ. ಗಸಗಸೆ ಬೀಜಗಳು ಪುರುಷರಿಗೆ ನಿಜವಾಗಿಯೂ ಪ್ರಯೋಜನಕಾರಿಯೇ ಎನ್ನುವುದನ್ನು ಆಹಾರ ತಜ್ಞೆ ಪ್ರಾಚಿ ಛಾಬ್ರಾ ವಿವರಿಸಿದ್ದಾರೆ.


**ಫಲವತ್ತತೆಯನ್ನು ಹೆಚ್ಚಿಸುವಲ್ಲಿ ಪ್ರಯೋಜನಕಾರಿ:** ಬಹುತೇಕ ಪುರುಷರು ಕೆಲವೊಂದು ಕಾರಣಗಳಿಂದ ಬಂಜೆತನದ ಸಮಸ್ಯೆಯನ್ನು ಹೊಂದಿರುತ್ತಾರೆ. ಅಂತಹ ಪರಿಸ್ಥಿತಿಯಲ್ಲಿ, ನೀವು ನಿಮ್ಮ ನಿಯಮಿತ ಆಹಾರದಲ್ಲಿ ಗಸಗಸೆ ಬೀಜಗಳನ್ನು ಸೇರಿಸಿಕೊಳ್ಳಬಹುದು. ಗಸಗಸೆ ಬೀಜಗಳಲ್ಲಿ ಸತುವು ಕಂಡುಬರುತ್ತದೆ, ಇದು ಬಂಜೆತನವನ್ನು ಸುಧಾರಿಸುವಲ್ಲಿ ಸಹಾಯಕವಾಗಿದೆ. ಗಸಗಸೆ ಬೀಜದ ಎಣ್ಣೆ ಫಲವತ್ತತೆಯನ್ನು ಸುಧಾರಿಸುವಲ್ಲಿ ಸಹಾಯಕ ತಂತ್ರವಾಗಿದೆ. ಈ ಎಣ್ಣೆಯನ್ನು ಬಳಸುವುದರಿಂದ ಫಲವತ್ತತೆಯನ್ನು ಸುಧಾರಿಸಬಹುದು.



**ವೀರ್ಯಾಣುಗಳ ಸಂಖ್ಯೆ ಸುಧಾರಿಸಬಹುದು:** ಗಸಗಸೆ ಬೀಜಗಳಲ್ಲಿ ಕಂಡುಬರುವ ಅಂಶಗಳು ಕೆಲವು ಸಂದರ್ಭಗಳಲ್ಲಿ ವೀರ್ಯಾಣುಗಳ ಸಂಖ್ಯೆಯನ್ನು ಹೆಚ್ಚಿಸುವಲ್ಲಿ ಪ್ರಯೋಜನಕಾರಿಯಾಗಿದೆ. ಗಸಗಸೆ ಬೀಜಗಳನ್ನು ತಿನ್ನುವುದು ವೀರ್ಯಾಣುಗಳ ಸಂಖ್ಯೆಯನ್ನು ಸುಧಾರಿಸುತ್ತದೆ ಎಂಬುದಕ್ಕೆ ಯಾವುದೇ ವೈಜ್ಞಾನಿಕ ಪುರಾವೆಗಳಿಲ್ಲ. ಇದರಲ್ಲಿ ಸತು ಮತ್ತು ಲಿಗ್ನಿನ್ ಇದ್ದು, ಇದನ್ನು ವೀರ್ಯಾಣುಗಳ ಸಂಖ್ಯೆಯನ್ನು ಸುಧಾರಿಸಲು ಮತ್ತು ಲೈಂಗಿಕ ಚಟುವಟಿಕೆಗಳನ್ನು ಸುಧಾರಿಸಲು ತಿನ್ನಬಹುದು.

**ನಿದ್ರೆಗೆ ಸಂಬಂಧಿಸಿದ ಸಮಸ್ಯೆಗಳನ್ನು ನಿವಾರಿಸುತ್ತದೆ:** ಗಸಗಸೆ ಬೀಜಗಳು ನಿದ್ರೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಇದನ್ನು ಸೇವಿಸುವುದರಿಂದ ಮೆದುಳಿಗೆ ವಿಶ್ರಾಂತಿ ನೀಡುತ್ತದೆ ಮತ್ತು ಮನಸ್ಸನ್ನು ಶಾಂತವಾಗಿರಿಸುತ್ತದೆ. ಇದು ನಿಮ್ಮ ಆಯಾಸವನ್ನು ಕಡಿಮೆ ಮಾಡುವುದಲ್ಲದೆ ನಿಮಗೆ ಉತ್ತಮ ನಿದ್ರೆ ನೀಡುತ್ತದೆ. ಇದು ನಿಮ್ಮ ಕಾಮಾಸಕ್ತಿ ಅಥವಾ ಲೈಂಗಿಕ ಚಟುವಟಿಕೆಗಳನ್ನು ಸುಧಾರಿಸಲು ಸಹಾಯ ಮಾಡುತ್ತದೆ. ಇದನ್ನು ತಿನ್ನುವುದು ಅಥವಾ ಗಸಗಸೆ ಬೀಜದ ಪಾನೀಯವನ್ನು ತಯಾರಿಸಿ ಕುಡಿಯುವುದು ನಿಮಗೆ ಉತ್ತಮ ನಿದ್ರೆಯನ್ನು ನೀಡುತ್ತದೆ.

**ಮಾನಸಿಕ ಆರೋಗ್ಯವನ್ನು ಉತ್ತಮವಾಗಿರಿಸುತ್ತದೆ:** ಗಸಗಸೆ ಬೀಜಗಳು ಮಾನಸಿಕ ಆರೋಗ್ಯವನ್ನು ಉತ್ತಮವಾಗಿಡಲು ಸಹಾಯಕವಾಗಿದೆ. ಇದನ್ನು ತಿನ್ನುವುದು ಒತ್ತಡ ಮತ್ತು ಆತಂಕದ ಸಮಸ್ಯೆಯನ್ನು ಕಡಿಮೆ ಮಾಡುತ್ತದೆ ಮತ್ತು ಮೆದುಳನ್ನು ನಿರಾಳವಾಗಿಸುತ್ತದೆ. ಗಸಗಸೆ ಬೀಜಗಳನ್ನು ತಿನ್ನುವುದು ಅರಿವಿನ ಕಾರ್ಯಗಳನ್ನು ಸುಧಾರಿಸುತ್ತದೆ, ಇದು ಮೆದುಳನ್ನು ಉತ್ತಮವಾಗಿ ಕಾರ್ಯನಿರ್ವಹಿಸುವಂತೆ ಮಾಡುತ್ತದೆ ಮತ್ತು ಮೆದುಳು ಸರಾಗವಾಗಿ ಕಾರ್ಯನಿರ್ವಹಿಸುತ್ತದೆ.



**ಗಸಗಸೆ ಬೀಜಗಳನ್ನು ಹೇಗೆ ತಿನ್ನುವುದು?:** ಗಸಗಸೆ ಬೀಜಗಳನ್ನು ಹಲವು ವಿಧಗಳಲ್ಲಿ ಆಹಾರದಲ್ಲಿ ಸೇರಿಸಬಹುದು. ಗಸಗಸೆ ಬೀಜಗಳನ್ನು ಬಿಸಿ ಅಥವಾ ಉಗುರು ಬೆಚ್ಚಗಿನ ನೀರಿನಲ್ಲಿ ಬೆರೆಸಿಯೂ ತಿನ್ನಬಹುದು. ನೀವು ಗಸಗಸೆ ಬೀಜಗಳನ್ನು ನೇರವಾಗಿ ತಿನ್ನಬಹುದು ಅಥವಾ ಹುರಿದೂ ತಿನ್ನಬಹುದು.

ನೀವು ಈ ಬೀಜಗಳನ್ನು ಹಾಲಿಗೆ ಸೇರಿಸುವ ಮೂಲಕವೂ ಸೇವಿಸಬಹುದು. ಗಸಗಸೆ ಬೀಜಗಳನ್ನು ನೀರಿನಲ್ಲಿ ನೆನೆಸಿ ಅಥವಾ ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ತಿನ್ನುವುದರಿಂದ ಪ್ರಯೋಜನಕಾರಿಯಾಗಿದೆ.

# ಜೇನುನೊಣ ಗಂಟಲಿಗೆ ಕುಟುಕಿದ್ರೆ ಹೃದಯಾಘಾತವಾಗುತ್ತಾ?

ಕರೀಷ್ಮಾ ಕಪೂರ್ ಮಾಜಿ ಪತಿ ಉದ್ಯಮಿ ಸಂಜಯ್ ಕಪೂರ್ ಪೋಲೋ ಆಡುವಾಗ ಹೃದಯಾಘಾತದಿಂದ ನಿಧನ ಹೊಂದಿದರು ಎನ್ನುವುದು ಗೊತ್ತೇ ಇದೆ. ಆದರೆ ಅವರು ಪೋಲೋ ಆಡುವಾಗ ಅವರ ಬಾಯಿಯೊಳಗೆ ಏನೋ ಹೊಕ್ಕಂತಾಗಿತ್ತು ಎಂದು ಸಂಜಯ್ ಹೇಳಿಕೊಂಡಿದ್ದರು. ಜೇನುನೊಣವನ್ನು ನುಂಗಿದ ನಂತರ ಅವರು ಅನಾಫಿಲ್ಯಾಕ್ಟಿಕ್ ಆಘಾತಕ್ಕೆ ಒಳಗಾಗಿರಬಹುದು ಎಂದು ಆರಂಭಿಕ ದೃಢೀಕರಿಸದ ವರದಿಗಳು ಊಹಿಸಿವೆ. ಪೋಲೋ ಆಡುವಾಗ, ಜೇನುನೊಣವೊಂದು ಸಂಜಯ್ ಅವರ ಬಾಯಿಗೆ ಹಾರಿ ಬಂದು ಅವರನ್ನು ಕಚ್ಚಿತು, ಇದು ಹೃದಯಾಘಾತಕ್ಕೆ ಕಾರಣವಾಗಿರಬಹುದು ಎನ್ನಲಾಗುತ್ತಿದೆ.



**ಜೇನುನೊಣ ಕುಟುಕಿದ್ರೆ ಏನಾಗುತ್ತದೆ:** ಮಾನವ ದೇಹವು ಸೂಕ್ಷ್ಮ ಪ್ರದೇಶಗಳಲ್ಲಿ ಜೇನುನೊಣ ಕುಟುಕಿಗೆ ಊತ, ಉರಿಯೂತ ಅಥವಾ ಅನಾಫಿಲ್ಯಾಕ್ಸಿಸ್ ಎಂದು ಕರೆಯಲ್ಪಡುವ ವ್ಯವಸ್ಥಿತ ಅಲರ್ಜಿಯ ಪ್ರತಿಕ್ರಿಯೆಯೊಂದಿಗೆ ಪ್ರತಿಕ್ರಿಯಿಸಬಹುದು. ಜೇನುನೊಣ ಕುಟುಕು ಮಾತ್ರ ನೇರವಾಗಿ ಹೃದಯಾಘಾತಕ್ಕೆ ಕಾರಣವಾಗದಿದ್ದರೂ, ದೇಹದ ತೀವ್ರ ಪ್ರತಿಕ್ರಿಯೆ, ವಿಶೇಷವಾಗಿ ತೀವ್ರವಾದ ವಾಯುಮಾರ್ಗದ ರಾಜಿ ಅಥವಾ ರಕ್ತ ದೊತ್ತಡದಲ್ಲಿ ತ್ವರಿತ ಕುಸಿತ ಉಂಟಾದರೆ, ಹೃದಯರಕ್ತನಾಳದ ವ್ಯವಸ್ಥೆಯನ್ನು ಗಮನಾರ್ಹವಾಗಿ ಒತ್ತಡಕ್ಕೆ ಒಳಪಡಿಸಬಹುದು.

**ಜೇನುನೊಣದ ಕುಟುಕು ಹೃದಯಾಘಾತಕ್ಕೆ ಕಾರಣವಾಗಬಹುದೇ?** NDTV ಜೊತೆ ಮಾತನಾಡಿದ ಆಕಾಶ್ ಹೆಲ್ತ್‌ಕೇರ್‌ನ ಹೃದ್ರೋಗ ವಿಭಾಗದ ನಿರ್ದೇಶಕ ಡಾ. ಆಶಿಶ್ ಅಗರ್ವಾಲ್, ಸಾಮಾನ್ಯವಾಗಿ, ಜೇನುನೊಣವು ನಾಲಿಗೆಗೆ ಕುಟುಕಿದರೆ, ಅದು ಸೌಮ್ಯ ಅಲರ್ಜಿಯ ಪ್ರತಿಕ್ರಿಯೆಯನ್ನು ಉಂಟುಮಾಡುತ್ತದೆ, ಆದರೆ ಕೆಲವು ರೋಗಿಗಳಲ್ಲಿ ಅದು ಹೃದಯಾಘಾತಕ್ಕೆ ಕಾರಣವಾಗಬಹುದು ಎಂದು ಹೇಳಿದ್ದಾರೆ. ನಾಲಿಗೆಗೆ ಕುಟುಕಿದರೆ, ಜೇನುನೊಣದ ವಿಷವು ತಕ್ಷಣವೇ ರಕ್ತದಲ್ಲಿ ಕರಗುತ್ತದೆ, ಆ ರಕ್ತವು ಅಲರ್ಜಿಯ ಪ್ರತಿಕ್ರಿಯೆ ಎಂದು ಕರೆಯಲ್ಪಡುವ ಪ್ರಕ್ರಿಯೆಯನ್ನು ಉಂಟು ಮಾಡಬಹುದು. ಸಾಮಾನ್ಯವಾಗಿ, ರೋಗಿಯು ಸೌಮ್ಯವಾದ ಅಲರ್ಜಿಯ ಪ್ರತಿಕ್ರಿಯೆಯನ್ನು ಹೊಂದಿರಬಹುದು, ಕೇವಲ ಸೌಮ್ಯವಾದ ತುರಿಕೆಯಂತೆ ಅಷ್ಟೆ ಎಂದು ಅವರು ಹೇಳಿದರು.



**ಅನಾಫಿಲ್ಯಾಕ್ಸಿಸ್ ಹೃದಯಸ್ತಂಭನಕ್ಕೆ ಕಾರಣವಾಬಲ್ಲದು:** ಆದರೆ ಅಲರ್ಜಿಗೆ ಒಳಗಾದ ಕೆಲವು ವ್ಯಕ್ತಿಗಳಲ್ಲಿ ಅದು ತೀವ್ರ ರೀತಿಯ ಅಲರ್ಜಿಯನ್ನು ಉಂಟು ಮಾಡಬಹುದು. ಇದನ್ನು ಅನಾಫಿಲ್ಯಾಕ್ಸಿಸ್ ಎಂದು ಕರೆಯಲಾಗುತ್ತದೆ. ಮತ್ತು ಇದು ಹೃದಯ ಸ್ತಂಭನಕ್ಕೆ ಕಾರಣವಾಗಬಹುದು ಎಂದು ಹೇಳಿದರು.



**ಜೇನುನೊಣವು ನಿಮ್ಮನ್ನು ಕುಟುಕಿದಾಗ ಏನಾಗುತ್ತದೆ?:** ಜೇನುನೊಣವು ಮೊದಲು ನಿಮ್ಮನ್ನು ಕುಟುಕಿದಾಗ, ಅದರ ಕುಟುಕು ನಿಮ್ಮ ಚರ್ಮದಲ್ಲಿ ಹುದುಗಿರುತ್ತದೆ, ನಿರಂತರವಾಗಿ ವಿಷವನ್ನು ಬಿಡುಗಡೆ ಮಾಡುತ್ತಲೇ ಇರುತ್ತದೆ. ನೀವು ತೀಕ್ಷ್ಣವಾದ ಸ್ಥಳೀಯ ನೋವನ್ನು ಅನುಭವಿಸುವಿರಿ, ಇದು ಸಾಮಾನ್ಯವಾಗಿ ಊತ, ಕೆಂಪು ಬಣ್ಣದಿಂದ ಕೂಡಿರುತ್ತದೆ. ಜೇನುನೊಣದ ಕುಟುಕಿನಿಂದ ಬಿಡುಗಡೆಯಾಗುವ ಹಿಸ್ಟಮೈನ್ ತುರಿಕೆ, ಉರಿಯೂತಕ್ಕೆ ಕಾರಣವಾಗುತ್ತದೆ. ಬಹು ಜೇನುನೊಣಗಳ ಕುಟುಕುಗಳು ಹೆಮಟುರಿಯಾ ಅಂದರೆ ಮೂತ್ರದಲ್ಲಿ ರಕ್ತ, ತೀವ್ರ ಮೂತ್ರಪಿಂಡದ ಗಾಯ, ಗ್ಲೋಮೆರುಲೋನೆಫ್ರೈಟಿಸ್‌ಗೆ ಕಾರಣವಾಗಬಹುದು. ಕೆಲವೊಮ್ಮೆ, ರೋಗಿಯು ತೀವ್ರವಾದ ಅಲರ್ಜಿಯಪ್ರತಿಕ್ರಿಯೆಯನ್ನು ಅನುಭವಿಸಿದರೆ, ವಾಯುಮಾರ್ಗದ ಊತ, ಉಸಿರುಗಟ್ಟುವಿಕೆ ಸಂವೇದನೆ, ಹೈಪೊಟೆನ್ಷನ್, ಆಂತರಿಕ ಅಂಗಗಳ ಒಳಗೊಳ್ಳುವಿಕೆಗೆ ಕಾರಣವಾಗಬಹುದು.



## ಗರ್ಭಿಣಿಯರಿಗೆ ಅವಧಿ ಮುಗಿದ ಆಹಾರ ಪದಾರ್ಥ ನೀಡಿದ ಆರೋಪ: ಇಬ್ಬರಿಗೆ ನೋಟಿಸ್

• **ಉದಯವಾಹಿನಿ ಮಹಾಲಿಂಗಪುರ**

ಗರ್ಭಿಣಿಯರಿಗೆ ಅವಧಿ ಮುಗಿದ ಆಹಾರ ಪದಾರ್ಥ ನೀಡಿದ ಆರೋಪದ ಮೇಲೆ ಪಟ್ಟಣದ ಬಸವ ನಗರದ ಅಂಗನವಾಡಿ ಕೇಂದ್ರದ ಕಾರ್ಯಕರ್ತೆ ಹಾಗೂ ಸಹಾಯಕಿಗೆ ನೋಟಿಸ್ ನೀಡಲಾಗುವುದು' ಎಂದು ತಾಲ್ಲೂಕು ಶಿಶು ಅಭಿವೃದ್ಧಿ ಇಲಾಖೆ ಅಧಿಕಾರಿ ಕೆ.ಜಿ. ಕೋರೆಗೋಳ ತಿಳಿಸಿದ್ದಾರೆ.

ಅವಧಿ ಮುಗಿದ ಆಹಾರ ಪದಾರ್ಥ ವಿತರಣೆ ಆರೋಪದ ಹಿನ್ನೆಲೆಯಲ್ಲಿ ಸೋಮವಾರ ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿದ ಅವರು, ಕೇಂದ್ರದ ಕಾರ್ಯಕರ್ತೆ ಬಿಮ್ಮಿಲ್ಲಾ ಪೆಂಡಾರಿ ಹಾಗೂ ಸಹಾಯಕಿ ಸಕ್ಕುಬಾಯಿ ರಾಠೋಡ ಅವರ ವಿಚಾರಣೆ ನಡೆಸಿದರು.

ಅವಧಿ ಮುಗಿದ ಆಹಾರ ಪದಾರ್ಥದ ಎರಡು ಪೊಟ್ಟಣಗಳನ್ನು ಒಬ್ಬಳೇ ಗರ್ಭಿಣಿಗೆ ಸಹಾಯಕಿ ನೀಡಿದ್ದಾಳೆ. ಸಂಬಂಧಿಸಿದ ಗರ್ಭಿಣಿಯನ್ನು ಕರೆಸಿ ಆಹಾರ ಪದಾರ್ಥ ಬೇರೆ ನೀಡಲಾಗಿದೆ. ತಪ್ಪು ಮಾಡಿದ್ದಕ್ಕೆ ಸರ್ಕಾರಕ್ಕೆ ಸಹಾಯಕಿಯಿಂದ ಹಣದ ರಿಕವರಿ ಮಾಡಲಾಗುವುದು' ಎಂದು ಕೋರೆಗೋಳ ಹೇಳಿದರು.

## ರಾಜಕಾರಣಿಗಳು ಜನರ ಭರವಸೆ ನೀಡಿ ಮೋಸ ಮಾಡಬಾರದು: ಶಾಸಕ

• **ಉದಯವಾಹಿನಿ ಪುತ್ತೂರು**

ತಾಲ್ಲೂಕಿನ ಆರ್ಯಾಪು ಗ್ರಾಮದ ಕೊಲ್ಯ ಎಂಬಲ್ಲಿ ಹಲವು ಮನೆಗಳು ಗುಡ್ಡ ಕುಸಿತದ ಪರಿಣಾಮ ಅಪಾಯದ ಸ್ಥಿತಿಯಲ್ಲಿದ್ದು, ತಡೆಗೋಡೆ ನಿರ್ಮಾಣ ಮಾಡುವುದಾಗಿ ಹಿಂದಿನವರು ಶಿಲಾನ್ಯಾಸ ಮಾಡಿ ಹೋಗಿದ್ದಾರೆಯೇ ಹೊರತು ಬಿಡಿಗಾಸೂ ನೀಡಿಲ್ಲ. ನಂಬಿಸಿ ಜನರಿಗೆ ಮೋಸ ಮಾಡುವುದು ದೇವರು ಮೆಚ್ಚುವ ಕೆಲಸವಲ್ಲ. ರಾಜಕಾರಣಿಗಳು ಜನರಿಗೆ ಸುಳ್ಳು ಭರವಸೆ ನೀಡಿ ಮೋಸ ಮಾಡಬಾರದು ಎಂದು ಶಾಸಕ ಅಶೋಕ್‌ಕುಮಾರ್ ರೈ ಹೇಳಿದರು.

ಸಆರ್ಯಾಪು ಗ್ರಾಮದ ಸಂಟ್ಯಾರಿನಿಂದ ಕಲ್ಲಕಟ್ಟ ರಾಜನ್ ಗುಳಿಗದೈವ ದೈವಸ್ಥಾನ ಸಂಪರ್ಕ ಕಲ್ಪಿಸುವ ನೂತನ ಕಾಂಕ್ರೀಟ್ ರಸ್ತೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಓಟಿಗಾಗಿ ಜನರ ಭಾವನೆಗಳ ಜತೆ ಚೆಲ್ಲಾಟವಾಡಬಾರದು. ನಾನು ಯಾರಿಗೂ ಸುಳ್ಳು ಭರವಸೆ ಕೊಟ್ಟಿಲ್ಲ. ಕೊಡುವುದೂ ಇಲ್ಲ ಎಂದು ಹೇಳಿದರು.

• ದಶಕ ಕಳೆದರೂ ಹಂಚಿಕೆಯಾಗದ ಮನೆಗಳು: ಸ್ಥಳಾಂತರಗೊಂಡ ಗ್ರಾಮಗಳ ಸಮಸ್ಯೆ ಕೇಳೋರಾರು?

# ಆಸರೆ ನೀಡದ ಆಶ್ರಯ ಮನೆಗಳು: ತಪ್ಪದ ಗೋಳು

• **ಉದಯವಾಹಿನಿ ನರಗುಂದ**

ತಾಲ್ಲೂಕಿನಲ್ಲಿ ಅತಿವೃಷ್ಟಿ ಉಂಟಾದಾಗ ಹಾಗೂ ಬೆಣ್ಣೆಹಳ್ಳದ ಪ್ರವಾಹ ತೀವ್ರಗೊಂಡಾಗ ತಾಲ್ಲೂಕಿನ ಏಳಕ್ಕೂ ಹೆಚ್ಚು ಗ್ರಾಮಗಳು ತೊಂದರೆಗೆ ಒಳಗಾಗುತ್ತವೆ. ಈ ಪೈಕಿ ಕುರ್ಲಗೇರಿ ಹಾಗೂ ಸುರಕೋಡ ಗ್ರಾಮಗಳು ಪ್ರಮುಖವಾಗಿವೆ.

### ಹಾವು, ಚೇಳುಗಳ ವಾಸ

ಒಂದು ದಶಕದಿಂದ ಬೆಣ್ಣೆಹಳ್ಳ ಹಾಗೂ ಮಲಪ್ರಭಾ ತನ್ನ ರೌದ್ರನರ್ತನ ತೋರುತ್ತಲೇ ಇವೆ. 2009ರಲ್ಲಿ ಸುರಿದ ಭಾರಿ ಮಳೆಯಿಂದ ಉಕ್ಕಿ ಹರಿದ ಬೆಣ್ಣೆಹಳ್ಳದ ಪ್ರವಾಹಕ್ಕೆ ಕುರ್ಲಗೇರಿ, ಸುರಕೋಡ ಗ್ರಾಮಗಳು ಹಾಗೂ ಮಲಪ್ರಭಾ ಪ್ರವಾಹಕ್ಕೆ ಬೂದಿಹಾಳ, ಲಕಮಾಪುರ ಗ್ರಾಮಗಳು ತೀವ್ರ ತೊಂದರೆಗೆ ಒಳಗಾಗಿದ್ದವು. ಇದನ್ನು ಅರಿತ ಅಂದಿನ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ತಾಲ್ಲೂಕಿನ ಸುರಕೋಡ, ಕುರ್ಲಗೇರಿ, ಬೂದಿಹಾಳ ಗ್ರಾಮಗಳನ್ನು ಸ್ಥಳಾಂತರ ಮಾಡುವ ನಿರ್ಣಯಕ್ಕೆ ಬಂದು, ನವಗ್ರಾಮ ನಿರ್ಣಯಕ್ಕೆ ಮುಂದಾಯಿತು. ಮುಂದೆ 2012ರಲ್ಲಿ ಸರ್ಕಾರವೇ ಭೂಮಿ ಖರೀದಿಸಿ, ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಮೂರು ಗ್ರಾಮಗಳಲ್ಲಿ ಕುಟುಂಬಗಳಿಗೆ ಅನುಗುಣವಾಗಿ ಮನೆಗಳನ್ನು ನಿರ್ಮಿಸಿತು.

ಆದರೆ, ಬೂದಿಹಾಳ ಗ್ರಾಮ ಮಾತ್ರ ಸಂಪೂರ್ಣ ಸ್ಥಳಾಂತರವಾಗಿದ್ದು ಬಿಟ್ಟರೆ ಕುರ್ಲಗೇರಿ, ಸುರಕೋಡ ಗ್ರಾಮಗಳ ಜನರು ಈವರೆಗೆ ಮೂಲ ಊರಿನಲ್ಲಿಯೇ ಉಳಿದಿದ್ದಾರೆ. ಇದರಿಂದಾಗಿ ದಶಕ ಕಳೆದರೂ ಬೆಣ್ಣೆಹಳ್ಳದ ಪ್ರವಾಹದಿಂದ ತೊಂದರೆಗೆ ಒಳಗಾಗುವುದು ತಪ್ಪಿಲ್ಲ.


**ಹಂಚಿಕೆಯಾಗದ ಕುರ್ಲಗೇರಿ ನವಗ್ರಾಮದ ಮನೆಗಳು:** ಬನಹಟ್ಟಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಕುರ್ಲಗೇರಿ ಗ್ರಾಮ ಪ್ರತಿ ವರ್ಷ ಬೆಣ್ಣೆಹಳ್ಳದಿಂದ ತೊಂದರೆಗೆ ಒಳಗಾಗುತ್ತದೆ. ಕನಿಷ್ಠ ಐದು ಮನೆಗಳಾದರೂ ಪ್ರವಾಹಕ್ಕೆ ತುತ್ತಾಗುತ್ತವೆ. ಪ್ರಾಥಮಿಕ ಶಾಲೆಯ ಕಾಂಪೌಂಡ್, ಕೆಲವೊಮ್ಮೆ ಶಾಲಾ ಆವರಣ ಪ್ರವಾಹದ ನೀರಿಗೆ ತುತ್ತಾಗುತ್ತದೆ. ಹಾಗಾಗಿ, ಸರ್ಕಾರ ಕುರ್ಲಗೇರಿ ಗ್ರಾಮಸ್ಥರಿಗಾಗಿ ನವಗ್ರಾಮ ನಿರ್ಮಿಸಿ, ಅಲ್ಲಿ 458 ಮನೆಗಳನ್ನು ಕಟ್ಟಿಕೊಟ್ಟಿತು. ಆದರೆ, ಅವು ಸಮರ್ಪಕವಾಗಿ ಹಂಚಿಕೆಯಾಗದ ಪರಿಣಾಮ ಅಲ್ಲಿ ಯಾರೂ ವಾಸವೇ ಇಲ್ಲ.

ಈಚೆಗಷ್ಟೇ ಮನೆ ಇಲ್ಲದ 100ಕ್ಕೂ ಹೆಚ್ಚು ಕುಟುಂಬಗಳು ತಮಗೆ ಹಂಚಿಕೆಯಾಗದ ಮನೆಗಳಲ್ಲಿ ವಾಸ ಮಾಡುತ್ತಿವೆ. ಆದರೆ ಪುನರ್ ಹಂಚಿಕೆಯಾದಾಗ ಅವು ಅವರಿಗೆ ಸಿಗುವ ಖಾತ್ರಿಯೂ ಇಲ್ಲ. ನವಗ್ರಾಮ ಇಂದು ಜಾಲಿಕಂಟಿಗಳ ತಾಣವಾಗಿದೆ.

ಮನೆಗಳ ಚಾವಣಿ ಕಿತ್ತು ಹೋಗಿವೆ. ಶಾಲಾ ಕಟ್ಟಡ ಕಟ್ಟಡವಾಗಿ ಉಳಿದಿಲ್ಲ. ಇಂಥಹದ್ದರ ನಡುವೆ ಈಚೆಗೆ ಗ್ರಾಮಕ್ಕೆ ಭೇಟಿ ನೀಡಿದ್ದ ಜಿಲ್ಲಾಧಿಕಾರಿ ಹಳೆ ಊರಿನ ಪ್ರಾಥಮಿಕ ಶಾಲೆಯನ್ನು ಸ್ಥಳಾಂತರ ಮಾಡಲೇಬೇಕು ಎಂದು ತಾಕೀತು ಮಾಡಿದ್ದಾರೆ. ಹಾಳಾದ ಕಟ್ಟಡಕ್ಕೆ ಶಾಲೆ ಸ್ಥಳಾಂತರ ಹೇಗೆ ಎಂಬ ಪ್ರಶ್ನೆ ಜನರನ್ನು ಕಾಡುತ್ತಿದೆ.

**ಹಾವು, ಚೇಳುಗಳ ವಾಸ:** ಸಮೃದ್ಧವಾಗಿ ಬೆಳೆದು ನಿಂತಿರುವ ಜಾಲಿ ಕಂಟಿಗಳ ಮಧ್ಯೆ ಮನೆಗಳು ಸಿಲುಕಿ ಶಿಥಿಲಗೊಂಡಿವೆ. ಕಿಟಕಿ, ಬಾಗಿಲುಗಳ ಜತೆಗೆ ವಿದ್ಯುತ್ ಸಂಪರ್ಕ ನೀಡಿದ ತಂತಿಗಳು, ಬೋರ್ಡ್‌ಗಳು ಕಳ್ಳರ ಪಾಲಾಗುತ್ತಿವೆ.

ಜತೆಗೆ ಈ ಮನೆಗಳು ಹಾವು, ಚೇಳುಗಳ ವಾಸಸ್ಥಾನಗಳಾಗಿದ್ದು ಇರುವ ಕೆಲ ಕುಟುಂಬಗಳು ಭಯದಲ್ಲಿ ವಾಸಿಸುತ್ತಿವೆ. ಮನೆಗಳು ಹಂಚಿಕೆಯಾಗುವ ಮೊದಲೇ ಜಾಲಿಗಿಡಗಳ ಮುಳ್ಳಿನ ಕಾಡಿನಂತಾಗಿರುವ ಕುರ್ಲಗೇರಿ ನವಗ್ರಾಮದಲ್ಲಿ ಕುರ್ಲಗೇರಿ ಗ್ರಾಮಸ್ಥರು ವಾಸಿಸುವುದು ಕನಸಿನ ಮಾತಾಗಿದೆ.




### ಗೋಳು ಕೇಳುವವರಾರು?

**ಹಿಂದೆ ಮನೆಗಳನ್ನು ಹಂಚಿಕೆ ಮಾಡಲಾಗಿತ್ತು. ಆದರೆ ಕೆಲವು ಪ್ರಭಾವಿಗಳು ಹಾಗೂ ಹಠವಾದಿಗಳು ನಮಗೆ ಇದೇ ಮನೆ, ಇದೇ ಪ್ರದೇಶದಲ್ಲಿ ಬೇಕೆಂದು ಪಟ್ಟು ಹಿಡಿದ ಪರಿಣಾಮ ದಶಕ ಕಳೆದರೂ ಮನೆಗಳು ಹಂಚಿಕೆಯಾಗಿಲ್ಲ. ಇದರಿಂದ ಕೋಟ್ಯಂತರ ರೂ. ಹಣ ವ್ಯರ್ಥವಾದಂತಾಗಿದೆ. ಬೆಣ್ಣೆಹಳ್ಳದಿಂದ ಊರು ಪಾರು ಮಾಡಬೇಕೆಂದರೆ ಈ ನವಗ್ರಾಮದ ಮನೆಗಳು ರಿಪೇರಿಯಾಗಬೇಕು. ಜಾಲಿಗಿಡಗಳ ಅರಣ್ಯ ತೆರವುಗೊಳಿಸಬೇಕು. ಇವೆಲ್ಲದಕ್ಕೆ ಮತ್ತೇ ಕೋಟ್ಯಂತರ ರೂಪಾಯಿ ಖರ್ಚು ಮಾಡಬೇಕಿದೆ. ನವ ಗ್ರಾಮ ನಿರ್ಮಾಣಗೊಂಡಿದ್ದರಿಂದ ಹೊಸ ಆಶ್ರಯ ಯೋಜನೆ, ಅಭಿವೃದ್ಧಿ ಕಾಮಗಾರಿ ಹಳೆ ಊರಲ್ಲಿ ಮಾಡಲು ಅವಕಾಶ ಇರದೇ ಇರುವುದರಿಂದ ಗ್ರಾಮಸ್ಥರು ತೀವ್ರ ನಿರಾಸೆಗೆ ಒಳಗಾಗಿದ್ದಾರೆ.**

## ಮಿನಿ ನ್ಯೂಸ್

### ನಿಗದಿತ ಅವಧಿಯೊಳಗೆ ಕಾಮಗಾರಿ ಪೂರ್ಣಗೊಳಿಸಿ : ಈಶ್ವರ ಖಂಡ್ರೆ

• **ಉದಯವಾಹಿನಿ ಭಾಲ್ಕಿ**

ಪಟ್ಟಣದಲ್ಲಿ 16.5 ಕೋಟಿ ರೂ ಅನುದಾನದಲ್ಲಿ ಸುಸಜ್ಜಿತವಾಗಿ ನಿರ್ಮಾಣವಾಗುತ್ತಿರುವ ಸಾರ್ವಜನಿಕ ಆಸ್ಪತ್ರೆಯ ಕಟ್ಟಡ ಕಾಮಗಾರಿ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ವೀಕ್ಷಿಸಿದರು. ಅಧಿಕಾರಿಗಳ ತಂಡದೊಂದಿಗೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಎಡಭಾಗದಲ್ಲಿ ಪ್ರಗತಿಯಲ್ಲಿರುವ ಆಸ್ಪತ್ರೆ ಕಟ್ಟಡ ಕಾಮಗಾರಿಯನ್ನು ಪರಿಶೀಲಿಸಿದರು. ನಂತರ ಮಾತನಾಡಿದ ಅವರು ತಾಲ್ಲೂಕಿನ ಜನತೆಗೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸುವ ಉದ್ದೇಶದಿಂದ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಯೋಜನೆಯಡಿ 16.5 ಕೋಟಿ ರೂ ಅನುದಾನ ಒದಗಿಸಿ ಹೈಟೆಕ ಮಾದರಿಯಲ್ಲಿ 150 ಹಾಸಿಗೆಗಳ ಆಸ್ಪತ್ರೆ ಕಟ್ಟಡ ನಿರ್ಮಾಣ ಮಾಡಲಾಗುತ್ತಿದೆ. ಅನುದಾನದ ಕೊರತೆಯಿಲ್ಲ ಕಾಮಗಾರಿ ಪ್ರಗತಿಯಲ್ಲಿದೆ. ಕಾಮಗಾರಿಯಲ್ಲಿ ಯಾವುದೇ ರಾಜಿಯಿಲ್ಲ. ಗುಣಮಟ್ಟದ ಕಾಮಗಾರಿ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ದಲಿತ ಸಂಘಟನೆಗಳ ಮುಖಂಡ ವಿಲಾಸ ಮೋರೆ, ಲೋಕೋಪಯೋಗಿ ಇಲಾಖೆಯ ಎಇಇ ಅಲ್ತಾಪ್, ಎಂಜನಿಯರ್ ಲೋಹಿತ ಉತ್ಕಾರ್ ಸೇರಿದಂತೆ ಹಲವರು ಇದ್ದರು.

## ಮಾಧ್ಯಮ ಸಮಾಜದ ಧ್ವನಿಯಾಗಲಿ: ಬಿ.ಕೆ ಸರಳಾ ದಿದಿ

• **ಉದಯವಾಹಿನಿ ಕಲಬುರಗಿ**

ಮಾಧ್ಯಮಕ್ಕೆ ಗೌರವ ಮತ್ತು ಗುರುತರ ಜವಾಬ್ದಾರಿ ಇದೆ. ಪ್ರಭಾವಶಾಲಿ ಪತ್ರಿಕಾ ಹಾಗೂ ವಿದ್ಯುನ್ಮಾನ ಮಾಧ್ಯಮಗಳು ಸಮಾಜ ಕಟ್ಟುವ ಕೆಲಸ ಮಾಡಬೇಕು ಎಂದು ಹೈದರಾಬಾದ್‌ನ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಮೀಡಿಯಾ ವಿಂಗ್‌ನ ಉಪಾಧ್ಯಕ್ಷೆ ಬಿ.ಕೆ ಸರಳಾ ದಿದಿ ಹೇಳಿದರು.

ಭಾನುವಾರ ನಗರದ ಹೊರವಲಯದ ಗೀತಾ ನಗರದಲ್ಲಿನ ಪ್ರಜಾಪಿತಾ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಅಮೃತ ಸರೋವರ ರಿಟ್ರೀಟ್ ಸೆಂಟರ್‌ನಲ್ಲಿ ಕಲ್ಯಾಣ ಕರ್ನಾಟಕ ಭಾಗದ ಮಾಧ್ಯಮ ಪ್ರತಿನಿಧಿಗಳಿಗೆ ಆಯೋಜಿಸಿದ್ದ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಶಾಂತಿ, ಏಕತೆ, ಮತ್ತು ವಿಶ್ವಾಸ ಉತ್ತೇಜಿಸುವಲ್ಲಿ ಮಾಧ್ಯಮಗಳ ಪಾತ್ರ ಕುರಿತು ಮಾತನಾಡಿದರು.

ಮಾಧ್ಯಮಗಳು ಎಲ್ಲರ ಕಣ್ಣು ತೆರೆಸುವ ಕೆಲಸ ಮಾಡುತ್ತಿವೆ. ನೈಜ ವರದಿ ಮಾಡಲು ಸಂವಿಧಾನವು ಅವರಿಗೆ ಪೂರ್ಣ ಸ್ವಾತಂತ್ರ್ಯ ನೀಡಿದೆ ಎಂದರು. ಧ್ವನಿ ಇಲ್ಲದವರಿಗೆ ಧ್ವನಿಯಾಗಿ, ಸಮಾಜದಲ್ಲಿ ಬದಲಾವಣೆ ತರುವಂತಹ ಪತ್ರಕರ್ತರು ದೇವರ ಜವಾಬ್ದಾರಿಯುತ ಮಕ್ಕಳು, ಮಾನವರು ಸರಿಯಾದ ಮಾರ್ಗದಲ್ಲಿ ಸಾಗಿ ಉತ್ತಮ ಜೀವನ ನಡೆಸಬೇಕು ಎಂಬುದನ್ನು ದೇವರ ಇಚ್ಛೆ ಜವಾಬ್ದಾರಿಯುತ ಸ್ಥಾನದಲ್ಲಿ ಇರುವ ಪತ್ರಕರ್ತರು ಜನರಿಗೆ ಸರಿಯಾದ ಮಾರ್ಗ ತೋರಿಸುವ ಹಾಗೂ ಧನಾತ್ಮಕ ಅಲ್ಲದೆ ಸಕಾರಾತ್ಮಕ ಸುದ್ದಿಗಳನ್ನು ಬಿತ್ತರಿಸಬೇಕು ಎಂದರು.

ಮೌಂಟ್ ಅಬುನ ಮೀಡಿಯಾ ರಾಷ್ಟ್ರೀಯ ಸಂಯೋಜಕ ರಾಜಯೋಗಿನಿ ಬಿ.ಕೆ ಶಾಂತನು ಭಾಯಿ ಮಾತನಾಡಿ, ದೇಶದ ಮಾಧ್ಯಮ ಕ್ಷೇತ್ರದಲ್ಲಿರುವ ಪಾಶ್ಚಿಮಾತ್ಯ ಪತ್ರಿಕೋದ್ಯಮ ಸಂಸ್ಕೃತಿ ಹೋಗಿ ಭಾರತೀಯ ಮೌಲ್ಯ ಆಧಾರಿತ ಸಂಸ್ಕೃತಿ ಬರಬೇಕಿದೆ ಎಂದರು. ಬ್ರಹ್ಮಾಕುಮಾರಿ ಈಶ್ವರಿಯ ವಿಶ್ವವಿದ್ಯಾಲಯ ಅಮೃತ್ ಸರೋವರ ರಿಟ್ರೀಟ್ ಸೆಂಟರ್‌ನ ಬಿ.ಕೆ ಪ್ರೇಮ್ ಭಾಯಿ ಮಾತನಾಡಿ, ಯುಟ್ಯೂಬ್‌ನಲ್ಲಿ ಫೇಕ್ ನ್ಯೂಸ್ ಜಾಸ್ತಿ ಬರುತ್ತಿವೆ. ಇದರಿಂದ ಜನ ತುಂಬಾ ನಂಬಿ ಮೋಸ ಹೋಗುತ್ತಿದ್ದಾರೆ. ಹೀಗಾಗಿ ನಿಖರವಾದ ಸತ್ಯಾಸತ್ಯತೆ ನ್ಯೂಸ್ ಜನರಿಗೆ ತಲುಪಿಸುವ ಕಾರ್ಯ ಆಗಬೇಕು ಎಂದರು.


ಉದಯವಾಹಿನಿ ಚಿತ್ರ

**ಇಂದಿನ ಸಮಾಚಾರ ಪತ್ರಿಕೆಗಳು ಸದಾಚಾರ ಪತ್ರಿಕೆಗಳಾಗಿ, ದೂರದರ್ಶನವು ದಿವ್ಯ ದರ್ಶನವಾಗಿ ಪರಿವರ್ತಿಸುವ ಕಾರ್ಯ ಪತ್ರಕರ್ತರು ಮಾಡಬೇಕಿದೆ. ಶಾಂತಚಿತ್ತದಿಂದ ಸಮಾಜದ ಜನರಿಗೆ ವರದಿ ತಲುಪಿಸುವದರ ಜೊತೆ ಜೊತೆಗೆ ನಮ್ಮ ಭಾರತೀಯ ಸಂಸ್ಕೃತಿ, ಪರಂಪರೆ ಕುರಿತು ಮೆಲುಕು ಹಾಕುವ ಕೆಲಸ ನಿಮ್ಮಿಂದ ಆಗಬೇಕಿದೆ. ನಿಷ್ಠೆಯಿಂದ ಹಾಗೂ ಪ್ರಾಮಾಣಿಕತೆಯಿಂದ ಸತ್ಯ ಸುದ್ದಿಗಳನ್ನು ಬಿತ್ತರಿಸುವ ನಿಮ್ಮ ಸೇವೆ ಶ್ಲಾಘನೀಯ.**
**-ಬಿ.ಕೆ ವಿಜಯಾ ದಿದಿ**

## ರಾಜ್ಯ ಸರ್ಕಾರ ಒಳಮೀಸಲಾತಿ ಜಾರಿಗೆ, ವಿಳಂಬನೀತಿ ಖಂಡನೀಯ

• **ಉದಯವಾಹಿನಿ, ಚಿಂಚೋಳಿ**

ಜೂನ್ ತಿಂಗಳಲ್ಲಿ ರಾಜ್ಯ ಸರ್ಕಾರ ಒಳಮೀಸಲಾತಿ ಜಾರಿಗೆ ಮಾಡುತ್ತೇವೆಂದು ಹೇಳಿ ಸಮೀಕ್ಷೆ ನಡೆಸಿದ ಬಳಿಕ ಈಗ ಮತ್ತೆ ಎಲ್ಲಾ ಜಾತಿಗಳ ಜಾತಿಗಣತಿವೆಂದು ಕುಂಟು ನೆಪವೊಡ್ಡಿ ಒಳಮೀಸಲಾತಿ ಜಾರಿಗೆ ಮಾಡದೆ ವಿಳಂಬ ನೀತಿ ಅನುಸರಿಸುತ್ತಿರುವುದು ಅತ್ಯಂತ ಖಂಡನೀಯ ಎಂದು ಪರಿಶೀಷ್ಟ ಜಾತಿಗಳ ಒಳಮೀಸಲಾತಿ ಜಾರಿ ಹೋರಾಟ ಸಮಿತಿಯ ರಾಜ್ಯ ಸಂಚಾಲಕ ಗೋಪಾಲರಾವ ಕಟ್ಟಿಮನಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಗುಡುಗಿದರು.



ಒಂದು ಕಡೆ ಕಾಂಗ್ರೆಸ್ ಹೈಕಮಾಂಡ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಯವರು ಯಾದಗಿರಿಯಲ್ಲಿ ಮಾತನಾಡಿ ಕಲ್ಯಾಣ ಕರ್ನಾಟಕದ ಎಲ್ಲಾ ಶಿಕ್ಷಕರ ಖಾಲಿ ಹುದ್ದೆಗಳು ಸರ್ಕಾರಕ್ಕೆ ತೊಂದರೆ ಆಗುತ್ತಿದರೆ ಶೇಕಡಾ 18ಪ್ರತಿಶತಃ ಬಿಟ್ಟು ಭರ್ತಿಗೊಳಿಸಿವೆಂದು ಹೇಳುತ್ತಾರೆ ಮತ್ತೊಂದೆಡೆ ಸಿಎಂ ಸಿದ್ದರಾಮಯ್ಯನವರು ರಾಜ್ಯದ ಎಲ್ಲಾ ಜಾತಿಗಳ ಜಾತಿಗಣತಿ ಮತ್ತೆ ಮಾಡುತ್ತೇವೆಂದು ಹೇಳುತ್ತಾರೆ ಇವೆಲ್ಲವೂ ನಾಟಕೀಯ ಬೆಳವಣಿಗೆ ನೋಡಿದರೆ ಒಳಮೀಸಲಾತಿ ನೀಡಲು ಕಾಂಗ್ರೆಸ್ ಸರ್ಕಾರ ಹಿಂದೇಟು ಹಾಕುತ್ತಿರುವುದು ಮೇಲ್ನೋಟಕ್ಕೆ ಕಾಣುತ್ತಿದೆ.

ಒಳಮೀಸಲಾತಿ ಜಾರಿ ವಿಳಂಬದಿಂದ ಯಾವುದೇ ಹೊಸ ನೇಮಕಾತಿಗಳಿಲ್ಲದೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗ, ಅಲ್ಪಸಂಖ್ಯಾತ ಜೋತೆಗೆ ಸಾಮಾನ್ಯ ವರ್ಗದಿಂದ ಬರುವ ಲಕ್ಷಾಂತರ ವಿದ್ಯಾರ್ಥಿ ನಿರುದ್ಯೋಗಿ ಯುವಜನರ ವಯಸ್ಸು ಮೀರಿ ವಿದ್ಯಾರ್ಥಿಗಳು ಮಾನಸಿಕವಾಗಿ ಖಿನ್ನತೆಗೆ ಒಳಗಾಗುತ್ತಿದ್ದಾರೆ.

ಆಯಾ ರಾಜ್ಯಕ್ಕೆ ಒಳಮೀಸಲಾತಿ ಜಾರಿಗೆ ಮಾಡಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿದೆ ಎಂದು ಸುಪ್ರೀಂಕೋರ್ಟ್ ಆದೇಶ ಹೊರಡಿಸಿದರೂ ಕಾಂಗ್ರೆಸ್ ರಾಜ್ಯ ಸರ್ಕಾರವು ಯಾಕೆ ಒಳಮೀಸಲಾತಿ ಜಾರಿಗೆ ಮಾಡಲು ಹಿಂದೆಟ್ಟು ಹಾಕುತ್ತಿದೆ ತೆಲಂಗಾಣ, ಆಂದ್ರಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಒಳಮೀಸಲಾತಿ ಜಾರಿಗೆ ಮಾಡಲಾಗಿದೆ ಅದರಂತೆ ಕರ್ನಾಟಕ ರಾಜ್ಯದಲ್ಲಿಯೂ ಕೂಡ ಒಳಮೀಸಲಾತಿ ಜಾರಿಗೆ ಮಾಡಿ ಮಾದಿಗ ಸಮಾಜಕ್ಕೆ ನ್ಯಾಯ ದೊರಕಿಸಿಕೊಡಬೇಕು. ಇಲ್ಲದಿದ್ದರೆ ಬರುವ ದಿನಗಳಲ್ಲಿ ಮಾದಿಗ ಸಮಾಜವು ರಾಜ್ಯಾದ್ಯಂತ ಬೃಹತ್ ಪ್ರತಿಭಟನೆ ಮಾಡುವ ಮೂಲಕ ರಾಜ್ಯ ಸರ್ಕಾರಕ್ಕೆ ಚುರುಕು ಮುಟ್ಟಿಸಲಾಗುವುದು ಎಂದರು.

ವಿಜಯಕುಮಾರ ಕೊಡಂಪಳ್ಳಿ, ಮಲ್ಲು ಕೊಡಂಬಲ್, ನರಸಪ್ಪ ಕಿವಣೋರಕರ್, ಸುನೀಲ ಸಲಗಾರ್, ಆಕಾಶ ಕೊಳ್ಳೂರ ಅನೇಕರಿದ್ದರು.

**ರಾಜ್ಯದಲ್ಲಿ ಹಲವಾರು ಹುದ್ದೆಗಳು ಖಾಲಿಯಿದ್ದು ಪೋಲೀಸ್ ಇಲಾಖೆ, ಕಂದಾಯ ಇಲಾಖೆ, ಗ್ರಾಮೀಣಾಭಿವೃದ್ಧಿ ಇಲಾಖೆ, ಕಾರ್ಮಿಕ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಇಂಧನ ಇಲಾಖೆ, ಆರ್ಥಿಕ ಇಲಾಖೆ, ಲೋಕೋಪಯೋಗಿ ಇಲಾಖೆ, ಸಾರಿಗೆ ಇಲಾಖೆ, ತೋಟಗಾರಿಕಾ ಇಲಾಖೆ, ಶಿಕ್ಷಣ ಇಲಾಖೆ ಜೋತೆಗೆ ಇನ್ನೂ ಹಲವಾರು ಇಲಾಖೆಗಳಲ್ಲಿನ ಅಧಿಸೂಚನೆಗಳು ಸನೆನೆಗುದಿಗೆ ಬಿದ್ದಿದ್ದೂ ಒಳಮೀಸಲಾತಿ ವರದಿ ವಿಳಂಬದಿಂದಾಗಿ ಯಾವುದೇ ನೇಮಕಾತಿಗಳಿಲ್ಲದೇ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ತಾಂಡವಾಡುತ್ತಿದೆ.**
**-ಗೋಪಾಲರಾವ ಕಟ್ಟಿಮನಿ**

## ಕೆಲಸ ಮಾಡಿಕೊಟ್ಟವರನ್ನು ಮರೆಯದಿರಿ: ಶಾಸಕ ಹೆಬ್ಬಾರ

• **ಉದಯವಾಹಿನಿ, ಯಲ್ಲಾಪುರ**

ಮದನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 3.90 ಕೋಟಿ ವೆಚ್ಚದಲ್ಲಿ ಉತ್ತಮ ಸೇತುವೆ, ಕಾಂಕ್ರೀಟ್ ರಸ್ತೆ, ಸೇರಿದಂತೆ ಎಲ್ಲಾ ಅಗತ್ಯ ಸೌಕರ್ಯ ಕಲ್ಪಿಸಲಾಗಿದೆ. ಹೀಗಿರುವಾಗ ಕೇಲವ ಭಾಷಣಕ್ಕೆ ಮರುಳಾಗಿ ಕೆಲಸ ಮಾಡಿ ಕೊಟ್ಟವರನ್ನು ಮರೆಯಬಾರದು ಎಂದು ಶಾಸಕ ಶಿವರಾಮ ಹೆಬ್ಬಾರ ಹೇಳಿದರು. ತಾಲ್ಲೂಕಿನ ಮದನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕರಡೊಳ್ಳಿಯಲ್ಲಿ ನೂತನವಾಗಿ ಆರಂಭಿಸಲಾದ ಕರಡೊಳ್ಳಿ-ಯಲ್ಲಾಪುರ ಬಸ್ಸಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಕರಡೊಳ್ಳಿ ಸುತ್ತಮುತ್ತಲ ಪ್ರದೇಶದಿಂದ 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶಾಲೆಗೆ ಹೋಗುತ್ತಿದ್ದು ಅವರ ಅನುಕೂಲಕ್ಕಾಗಿ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ. ಇದು ಹುಣಶೆಟ್ಟಿಕೊಪ್ಪದ ವಿದ್ಯಾರ್ಥಿಗಳಿಗೂ ಅನುಕೂಲವಾಗಲಿದೆ ಎಂದರು.


ಉದಯವಾಹಿನಿ ಚಿತ್ರ

ಸರ್ಕಾರ ಮಹಿಳೆಯರಿಗೆ ಎಲ್ಲಾ ರೀತಿಯ ಉಚಿತ ಭಾಗ್ಯ ನೀಡಿ ಅವರ ಭವಿಷ್ಯಕ್ಕೆ ಅನುಕೂಲ ಕಲ್ಪಿಸಿರುವುದನ್ನು ಕೂಡ ಜನ ನೆನಪಿಟ್ಟುಕೊಳ್ಳಬೇಕು ಎಂದರು.

ನಂತರ ಬಸ್ ಚಾಲನೆ ನೀಡಿ, ಕರಡೊಳ್ಳಿಯಿಂದ ಯಲ್ಲಾಪುರದವರೆಗೂ ಬಸ್ಸಿನಲ್ಲೇ ಪ್ರಯಾಣ ಬೆಳೆಸಿದರು. ಪ್ರಮುಖರಾದ ವಿಜಯಮಿರಾಶಿ, ವಿನಾಯಕ ತಿನೇಕರ, ಸಾಂದು ಪಟಕಾರೆ, ಡಿಪೋ ವ್ಯವಸ್ಥಾಪಕ ಸಂತೋಷ ವೆರ್ಣೇಕರ ಇದ್ದರು.

## ಕಲುಷಿತ ನೀರು ಸರಬರಾಜು: ವಾಂತಿ ಭೇದಿಗೆ 20 ಜನ ಅಸ್ವಸ್ಥ

• **ಉದಯವಾಹಿನಿ ಹೂವಿನಹಡಗಲಿ**

ತಾಲ್ಲೂಕಿನ ಮಾನ್ಯರಮಸಲವಾಡ ಗ್ರಾಮದಲ್ಲಿ ಕಲುಷಿತ ನೀರು ಸೇವಿಸಿ 20ಕ್ಕೂ ಹೆಚ್ಚು ಜನರು ಅಸ್ವಸ್ಥರಾಗಿದ್ದಾರೆ. ಗ್ರಾಮದ ನಿರ್ದಿಷ್ಟ ಪ್ರದೇಶದಲ್ಲಿ ಭಾನುವಾರ ಮತ್ತು ಸೋಮವಾರ ವಾಂತಿಭೇದಿ ಪ್ರಕರಣಗಳು ಪತ್ತೆಯಾಗಿವೆ. ವಡ್ಡರಗೇರಿಯ 13 ಜನ, ಕುರುಬರಗೇರಿಯ 7 ಜನರು ವಾಂತಿ ಭೇದಿಯಿಂದ ಅಸ್ವಸ್ಥರಾಗಿ ಪಟ್ಟಣದ ಖಾಸಗಿ ನರ್ಸಿಂಗ್ ಹೋಂ, ಹರಪನಹಳ್ಳಿ, ದಾವಣಗೆರೆಯ ಖಾಸಗಿ ಆಸ್ಪತ್ರೆ ಹಾಗೂ ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ದಾಖಲಾಗಿದ್ದಾರೆ.

ಗ್ರಾಮದಲ್ಲಿ ಕುಡಿಯುವ ನೀರು ಪೂರೈಕೆಯ 5 ಕೊಳವೆ ಬಾವಿಗಳಿದ್ದು, ಇದರಲ್ಲಿ ಒಂದು ಕೊಳವೆಬಾವಿ ನೆಲಮಟ್ಟದಲ್ಲಿದೆ. ವಾಲ್ವ್ ದೋಷದಿಂದ ಮಳೆಯ ನೀರು, ಚರಂಡಿ ತ್ಯಾಜ್ಯ ನೇರವಾಗಿ ಕೊಳವೆ ಬಾವಿ ಸೇರುತ್ತಿದೆ. ಇದೇ ನೀರು ಗ್ರಾಮಕ್ಕೆ ಪೂರೈಕೆಯಾಗಿದೆ. ವಡ್ಡರಗೇರಿ, ಕುರುಬರಗೇರಿಯ ಪೈಪ್ ಲೈನ್‌ನಲ್ಲಿ ಕಲುಷಿತ ನೀರು ಮಿಶ್ರಣವಾಗಿರುವುದನ್ನೂ ಅಧಿಕಾರಿಗಳು ಪತ್ತೆಹಚ್ಚಿ, ನೀರು ಸರಬರಾಜು ಸ್ಥಗಿತಗೊಳಿಸಿದ್ದಾರೆ. 'ಗ್ರಾಮದಲ್ಲಿ ಉಲ್ಬಣಿಸಿರುವ ವಾಂತಿಭೇದಿಗೆ ಕಲುಷಿತ ನೀರು ಪೂರೈಕೆ ಕಾರಣ. ಕುಡಿಯುವ ನೀರು, ನೈರ್ಮಲ್ಯ ಕಾಪಾಡುವಲ್ಲಿ ಗ್ರಾಮ ಪಂಚಾಯಿತಿಯವರು ನಿರ್ಲಕ್ಷ್ಯ ವಹಿಸಿದ್ದಾರೆ' ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ. 'ಕಲುಷಿತ ನೀರು ಮಿಶ್ರಣವಾಗಿರುವ ಬೋರ್ ವೆಲ್ ಸಂಪರ್ಕ ಸ್ಥಗಿತಗೊಳಿಸಿದ್ದೇವೆ. ಶುದ್ಧ ಕುಡಿಯುವ ನೀರಿನ ಘಟಕದ ನೀರನ್ನೇ ಸೇವಿಸುವಂತೆ ಗ್ರಾಮದಲ್ಲಿ ಅರಿವು ಮೂಡಿಸುತ್ತಿದ್ದೇವೆ. ಗ್ರಾಮದಲ್ಲಿ ನೈರ್ಮಲ್ಯ ಕಾಪಾಡುವ ಕೆಲಸ ಮಾಡುತ್ತಿದ್ದೇವೆ' ಎಂದು ಪಿಡಿಒ ಮಹ್ಮದ್ ರಫಿ ಹೇಳಿದರು.

''ನೀರಿನ ಮಾದರಿ ಸಂಗ್ರಹಿಸಿ ಪ್ರಯೋಗಾಲಯಕ್ಕೆ ಪರೀಕ್ಷೆಗೆ ಕಳಿಸಿದ್ದೇವೆ. 48 ಗಂಟೆಗಳ ಬಳಿಕ ವರದಿ ಕೈ ಸೇರಲಿದ್ದು, ನಂತರವೇ ನಿಖರ ಕಾರಣ ತಿಳಿಯಲಿದೆ' ಎಂದು ಗ್ರಾಮೀಣ ಕುಡಿಯುವ ನೀರು ನೈರ್ಮಲ್ಯ ಇಲಾಖೆಯ ಎಇಇ ಅಂಬೇಡ್ಕರ್ ಸನಗುಂದ ತಿಳಿಸಿದರು.


ಉದಯವಾಹಿನಿ ಚಿತ್ರ

## ಮನೆಯ ಹೆಂಚು ತೆಗೆದು ಕಳ್ಳತನ

• **ಉದಯವಾಹಿನಿ ಭದ್ರಾವತಿ**

ತಾಲ್ಲೂಕಿನ ಸುಣ್ಣದಹಳ್ಳಿ ಗ್ರಾಮದಲ್ಲಿ ಮನೆಯೊಂದರ ಹೆಂಚು ತೆಗೆದು ಒಳಗೆ ಪ್ರವೇಶಿಸಿದ ಕಳ್ಳರು ನಗದು, ಚಿನ್ನಾಭರಣ ಕಳವು ಮಾಡಿದ್ದಾರೆ. ಗ್ರಾಮದ ನಾಗರಾಜ ಅವರ ಮನೆಯಲ್ಲಿ ಕಳ್ಳತನ ನಡೆದಿದೆ. ಮನೆಯವರು ಜೂನ್ 13ರಂದು ಬೆಳಿಗ್ಗೆ ಮನೆಗೆ ಬೀಗ ಹಾಕಿಕೊಂಡು ತುಮಕೂರಿಗೆ ಹೋಗಿದ್ದರು. ಸಂಜೆ ವೇಳೆಗೆ ಹಿಂದಿರುಗಿ ಬಂದು ನೋಡಿದಾಗ ಕಳ್ಳತನ ಮಾಡಿರುವುದು ತಿಳಿದು ಬಂದಿದೆ. ಬೀರುವಿನಲ್ಲಿದ್ದ 65,000 ಮೌಲ್ಯದ ಚಿನ್ನಾಭರಣ ಹಾಗೂ 3 ಲಕ್ಷ ನಗದು ಕಳ್ಳತನ ಮಾಡಲಾಗಿದ್ದು, ಈ ಸಂಬಂಧ ಪೇಪರ್‌ಟೌನ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

## ಕಾಡಾನೆ ದಾಳಿ: ಬೆಳೆ ಹಾನಿ

• **ಉದಯವಾಹಿನಿ ಮೂಡಿಗೆರೆ**

ತಾಲ್ಲೂಕಿನ ತರುವೆ ಗ್ರಾ. ಪಂ. ವ್ಯಾಪ್ತಿಯ ದೇವನಗೂಲ್ ಗ್ರಾಮಕ್ಕೆ ನಸುಕಿನಲ್ಲಿ ದಾಳಿ ನಡೆಸಿರುವ ಕಾಡಾನೆಯು ಬೆಳೆ ಹಾನಿ ಮಾಡಿದೆ. ಗ್ರಾಮದ ಆಚಾರ್ ಪಾಲ್ ಪ್ರದೇಶದಲ್ಲಿ ಇಡೀ ರಾತ್ರಿ ಓಡಾಡಿರುವ ಕಾಡಾನೆಯು, ಮನೆಗಳಿಗೆ ಹೊಂದಿಕೊಂಡಂತಿರುವ ಕಾಫಿ ತೋಟಗಳಿಗೆ ನುಗ್ಗಿ, ಬಾಳೆ, ಕಾಫಿ, ಕಾಳುಮೆಣಸು ಬೆಳೆಗಳನ್ನು ಹಾನಿಗೊಳಿಸಿದೆ. ಮನೆಯಂಗಳಕ್ಕೆ ಕಾಡಾನೆ ಬಂದಿರುವುದರಿಂದ ಗ್ರಾಮಸ್ಥರಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ. ಬೆಳಿಗ್ಗೆ ಸ್ಥಳಕ್ಕೆ ಭೇಟಿ ನೀಡಿದ ಅರಣ್ಯಾಧಿಕಾರಿಗಳು ಕಾಡಾನೆಯನ್ನು ಅರಣ್ಯಕ್ಕೆ ಓಡಿಸುವ ಯತ್ನ ನಡೆಸಿದ್ದು, ಬೆಳೆಹಾನಿಯನ್ನು ಪರಿಶೀಲಿಸಿದರು. ತ್ರಿಪುರ, ಬಣಕಲ್ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಒಂಟಿ ಕಾಡಾನೆ ಹಾಗೂ ಎರಡು ಕಾಡಾನೆಗಳ ಗುಂಪು ನಿತ್ಯ ಸಂಚರಿಸುತ್ತಿದ್ದು, ಬೆಳೆ ಹಾನಿ ಮಾಡುತ್ತಿವೆ. ಇನ್ನೇನು ಗದ್ದೆ ನಾಟಿ ಪ್ರಾರಂಭವಾಗಲಿದ್ದು, ಇನ್ನಷ್ಟು ಬೆಳೆ ಹಾನಿಯಾಗುವ ಆತಂಕ ಕಾಡುತ್ತಿದೆ. ರಾತ್ರಿಯಾಗುತ್ತಿದ್ದಂತೆ ಮನೆ ಬಾಗಿಲಿಗೆ ಬಂದು ಕಾಡಾನೆಗಳು ಗೀಳಿಡುತ್ತಿರುವುದರಿಂದ ಭಯದ ವಾತಾವರಣ ನಿರ್ಮಾಣವಾಗಿದ್ದು, ಕೂಡಲೇ ಕಾಡಾನೆಗಳನ್ನು ಹಿಡಿದು ಸ್ಥಳಾಂತರಿಸಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

## ಮಳೆ ಹಾನಿ: ಕೇಂದ್ರ ಸ್ಥಾನ ತೊರೆಯದಂತೆ ಅಧಿಕಾರಿಗಳಿಗೆ ಸಚಿವ ಲಾಡ್ ಸೂಚನೆ

• **ಉದಯವಾಹಿನಿ ಧಾರವಾಡ**

ಜಿಲ್ಲೆಯಲ್ಲಿ ಮಳೆಯಾಗುತ್ತಿದೆ. ಅಧಿಕಾರಿಗಳು ಕೇಂದ್ರ ಸ್ಥಳದಲ್ಲಿದ್ದು ಜನರಿಗೆ ಸ್ಪಂದಿಸಬೇಕು. ನಿರ್ಲಕ್ಷ್ಯ ವಹಿಸಿದರೆ, ಜೀವ ಹಾನಿಯಾದರೆ ಆಯಾ ಅಧಿಕಾರಿಯನ್ನು ಹೊಣೆ ಮಾಡಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು. ಮಳೆ ಹಾನಿ, ಕೈಗೊಳ್ಳಬೇಕಾದ ಕ್ರಮಗಳ ಕುರಿತು ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸೋಮವಾರ ನಡೆದ ಜಿಲ್ಲಾಮಟ್ಟದ ಸಭೆಯಲ್ಲಿ ಮಾತನಾಡಿದರು.

ಗ್ರಾಮ ಪಂಚಾಯಿತಿ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಸಮಸ್ಯೆಗಳಿದ್ದರೆ, ಸ್ಥಳ ಪರಿಶೀಲನೆ ನಡೆಸಬೇಕು. ಸಮಸ್ಯೆ ಪರಿಹರಿಸಬೇಕು. ಮಳೆಗಾಲ ಮುಗಿಯುವವರೆಗೂ ಕೇಂದ್ರ ಸ್ಥಾನ ತೊರೆಯಬಾರದು. 24x7 ಕಾರ್ಯನಿರ್ವಹಿಸಬೇಕು ಎಂದು ಸೂಚನೆ ನೀಡಿದರು. ಜಿಲ್ಲೆಯಲ್ಲಿ ಶೇ 67 ಮುಂಗಾರು ಬಿತ್ತನೆಯಾಗಿದೆ. ನವಲಗುಂದದಲ್ಲಿ ಶೇ 75 ಬಿತ್ತನೆಯಾಗಿದ್ದು, ಬೆಣ್ಣೆ ಹಳ್ಳದ ಪಕ್ಕದ ಹೊಲಗಳಲ್ಲಿ ಪ್ರವಾಹದಿಂದ ಬೆಳೆ ಹಾನಿಯಾಗಿದೆ.

ಬಿತ್ತನೆ ಬೀಜ ಹಾನಿ ಪರಿಶೀಲಿಸಿ ಹಾಗೂ ರೈತ ಮುಖಂಡರೊಂದಿಗೆ ಚರ್ಚಿಸಿ ಮತ್ತೆ ಸಹಾಯಧನದಲ್ಲಿ ಬಿತ್ತನೆ ಬೀಜ ವಿತರಣೆಗೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಬೇಕು ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಮಂಜುನಾಥ ಅಂತರವಳ್ಳಿ ಅವರಿಗೆ ತಿಳಿಸಿದರು. ಧಾರವಾಡ 32, ಹುಬ್ಬಳ್ಳಿ, 11, ಕಲಘಟಗಿ 18, ಕುಂದಗೋಳ 29 ನವಲಗುಂದ 23 ಸಹಿತ ಜಿಲ್ಲೆಯಲ್ಲಿ 113 ರಸ್ತೆಗಳು ಮಳೆಯಿಂದ ಹಾಳಾಗಿವೆ. ಕೆಲವೊಂದು ಹಳ್ಳಿಗಳ ಮಾರ್ಗವೂ ಸ್ಥಗಿತವಾಗಿದೆ. ಬಸ್ಸುಗಳ ಸಂಚಾರ ನಿಂತಿರುವುದರಿಂದ ಅದನ್ನು ತುರ್ತಾಗಿ ಸರಿಪಡಿಸಬೇಕು ಎಂದು ಲೋಕೋಪಯೋಗಿ ಅಧಿಕಾರಿಗಳಿಗೆ ತಿಳಿಸಿದರು.


ಉದಯವಾಹಿನಿ ಚಿತ್ರ

**ನವಲಗುಂದ ತಾಲ್ಲೂಕಿನಲ್ಲಿ ಹೆಚ್ಚು ಮಳೆಯಾಗಿದ್ದು, ಬೇರೆ ಜಿಲ್ಲೆಗಳಿಂದ, ತಾಲ್ಲೂಕುಗಳಿಂದ ನೀರು ಹರಿದು ಬರುತ್ತಿರುವುದರಿಂದ ಪ್ರವಾಹವು ಉಂಟಾಗುತ್ತಿದೆ. ಇದರಿಂದ ರಸ್ತೆಗಳು, ಸೇತುವೆಗಳು, ಮನೆಗಳು, ಬೆಳೆ ಹಾನಿ ಆಗುತ್ತಿರುವುದರಿಂದ ಅದನ್ನು ಸರಿಪಡಿಸುವ ವ್ಯವಸ್ಥೆಯನ್ನು ಅಧಿಕಾರಿಗಳು ಮಾಡಬೇಕು ಎಂದು ಸೂಚನೆ ನೀಡಿದರು**
**-ಎನ್.ಎಚ್.ಕೋನರೆಡ್ಡಿ, ಶಾಸಕ**

• ಟಿಪ್ಪು ಸುಲ್ತಾನ್ ಮತಾಂತರ ಮಾಡುವ ಸಂದರ್ಭದಲ್ಲಿ ಹೊಳ್ಕರ್ ಪರಿವಾರದ ತುಕಾಜಿರಾವ ಹೋಳ್ಕರ್ ಹೋರಾಟ

# ಸನಾತನ ಧರ್ಮಕ್ಕೆ ಅಹಿಲ್ಯಾದೇವಿ ಕೊಡುಗೆ ಅಪಾರ: ಭೂಷಣಸಿಂಹ

• **ಉದಯವಾಹಿನಿ, ಬೀದರ**

ಸನಾತನ ಧರ್ಮದ ಏಳ್ಗೆಗೆ ಮಾತೋಶ್ರೀ ಪುಣ್ಯಶ್ಲೋಕ ಅಹಿಲ್ಯಾದೇವಿ ಹೊಳ್ಕರ್ ಕೊಡುಗೆ ಅಪಾರವಾಗಿದೆ ಎಂದು ಅಹಿಲ್ಯಾಬಾಯಿ ಹೊಳ್ಕರ್ ಅವರ 13ನೇ ವಂಶಸ್ಥರಾದ ಕೋಲಾಪುರದ ಶ್ರೀಮಂತ ಭೂಷಣಸಿಂಹ ರಾಜೆ ಹೊಳ್ಕರ್ ತಿಳಿಸಿದರು. ನಗರದ ಚನ್ನಬಸವ ಪಟ್ಟದ್ದೇವರು ರಂಗಮಂದಿರದಲ್ಲಿ ರಾಜಮಾತಾ ಅಹಿಲ್ಯಾದೇವಿ ಹೊಳ್ಕರ್ ಜಯಂತಿ ಸಮಿತಿ ಹಾಗೂ ಹಟಕಾರ, ಧನಗಾರ ಮತ್ತು ಗೊಂಡ ಸಮಾಜದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ ಪುಣ್ಯಶ್ಲೋಕ ಅಹಿಲ್ಯಾದೇವಿ ಹೊಳ್ಕರ್ ಅವರ 300ನೇ ಜಯಂತಿ ಉತ್ಸವವನ್ನು ಉದ್ಘಾಟಿಸಿ ಮಾತನಾಡಿದರು.

ಮೊಘಲರ ಆಳ್ವಿಕೆ ಸಂದರ್ಭದಲ್ಲಿ ದೇವಸ್ಥಾನಗಳನ್ನು ಕೆಡವುತ್ತಿದ್ದರು. ಅಂತಹ ಸಂದರ್ಭದಲ್ಲಿ ಕಾಶಿ ವಿಶ್ವನಾಥ ದೇವಾಲಯದಿಂದ ಹಿಡಿದು ದೇಶದಾದ್ಯಂತ ದೇವಾಲಯಗಳ ಜೀರ್ಣೋದ್ಧಾರ ಕಾರ್ಯ ಕೈಗೆತ್ತಿಕೊಂಡು ರಾಷ್ಟ್ರಕಟ್ಟುವ ಕಾರ್ಯ ಅಹಿಲ್ಯಾದೇವಿ ಮಾಡಿದ್ದಾರೆ. ಒಂದು ಕಾಲದಲ್ಲಿ ಧರ್ಮಾಂಧ ಟಿಪ್ಪು ಸುಲ್ತಾನ್ ಮತಾಂತರ ಮಾಡುವ ಸಂದರ್ಭದಲ್ಲಿ ಹೊಳ್ಕರ್ ಪರಿವಾರದ ತುಕಾಜಿರಾವ ಹೋಳ್ಕರ್ ಹೋರಾಟ ಮಾಡಿದ್ದಾರೆ. ಛತ್ರಪತಿ ಶಿವಾಜಿ ಮರಣದ ನಂತರ ಸನಾತನ ಸಂಸ್ಕೃತಿಗಾಗಿ ಮಾಡುವ ಹೋರಾಟ ಮೊಟಕುಗೊಂಡಿತ್ತು. ಆ ಹೋರಾಟದ ಪರಂಪರೆ ಕೈಯಲ್ಲಿ ಖಡ್ಗ ಹಿಡಿದು ವೀರತನದಿಂದ ಮುಂದುವರೆಸಿದ ಕೀರ್ತಿ ಅಹಿಲ್ಯಾದೇವಿ ಅವರಿಗೆ ಸಲ್ಲುತ್ತದೆ ಎಂದು ಪ್ರತಿಪಾದಿಸಿದರು. ಧನಗಾರ, ಹಟಕಾರ ಮತ್ತು ಗೊಂಡ ಪರಿವಾರ ಒಂದೆ. ಯಾವುದೇ ಭೇದಭಾವ ಮಾಡದೆ ಪರಸ್ಪರ ಸಂಬಂಧ ಬೆಳೆಸಿಕೊಳ್ಳಿರಿ. ಐಕ್ಯತೆಯಿಂದ ಸಂಘಟನಾತ್ಮಕ ಹೋರಾಟ ಮಾಡಿದಾಗ ಮಾತ್ರ ರಾಷ್ಟ್ರ ಮತ್ತು ಧರ್ಮ ಉಳಿಸಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಸಿದ್ಧರಾಮಯ್ಯ ಜಾತಿ ಜನಗಣತಿ ವರದಿ ಕೂಡಲೇ ಬಹಿರಂಗ ಮಾಡಬೇಕು. ದೆಹಲಿಗೆ ಹೋಗಿ ಬಂದ ಮೇಲೆ ಬಹಿರಂಗ ಪಡಿಸಲು ಮೀನಮೇಷ ಎಣಿಸುತ್ತಿರುವ ಸಿಎಂ ಸಿದ್ಧರಾಮಯ್ಯ ಜಾರಿ ಮಾಡುತ್ತೇನೆಂದು ಹೇಳಿ ಮಾಡಲಿಲ್ಲ ಎನ್ನುವ ಮೋಸ ಮಾಡಿದ ಮುಖ್ಯಮಂತ್ರಿ ಎನ್ನುವ ಹಣೆಪಟ್ಟಿ ಕಟ್ಟಿಕೊಳ್ಳಬೇಡಿ. ಜಾರಿ ಮಾಡುವೆ ಇಲ್ಲ ರಾಜೀನಾಮೆ ನೀಡುವೆ'' ಎಂದು ಈಗಲೇ ಶಪಥ ಮಾಡಿ ಒತ್ತಾಯಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಉತ್ಸವ ಸಮಿತಿ ಗೌರವಾಧ್ಯಕ್ಷ ಪಂಡಿತ್ ಚಿದ್ರಿ, ಜಾತಿ ಜನಗಣತಿ ಸಂದರ್ಭದಲ್ಲಿ ಕಂಪ್ಯೂಟರ್‌ನಲ್ಲಿ ಅನ್ಯ ಸಮುದಾಯದ 'ಹಟ್ಗಾರ' ಎಂದು ಬರುತ್ತಿದೆ. ಇದರಿಂದ ನಮ್ಮ ಹಟಕಾರ ಸಮಾಜದವರಿಗೆ ಅನ್ಯಾಯವಾಗುತ್ತಿದೆ. ಸರ್ಕಾರ ದಯವಿಟ್ಟು ಇದನ್ನು ಸರಿಪಡಿಸಬೇಕು.

ಶಾಸಕ ಪ್ರಭು ಚವ್ಹಾಣ ಅವರು ಔರಾದನಲ್ಲಿ ಅಹಿಲ್ಯಾದೇವಿ ಹೊಳ್ಕರ್ ಸಮುದಾಯ ಭವನಕ್ಕೆ ಒಂದು ಎಕರೆ ನೀಡಿದಂತೆ ಧನಗಾರ ಭವನಕ್ಕೂ ಒಂದು ಎಕರೆ ನೀಡಬೇಕೆಂದು ತಿಳಿಸಿದರು. ಜೊತೆಗೆ ಅಹಿಲ್ಯಾದೇವಿ ಜೀವನ ಚರಿತ್ರೆ ಪುಠ್ಯಪುಸ್ತಕದಲ್ಲಿ ಅಳವಡಿಸಲು ಸರ್ಕಾರಕ್ಕೆ ಒತ್ತಾಯಿಸಿದರು.


ಉದಯವಾಹಿನಿ ಚಿತ್ರ

**ಅಹಿಲ್ಯಾದೇವಿ ಹೊಳ್ಕರ್ ಜಯಂತಿ**

**ರಾಜಮಾತೆ ಅಹಿಲ್ಯಾದೇವಿ ಜಯಂತಿಯನ್ನು ಸರ್ಕಾರದ ವತಿಯಿಂದ ಆಚರಿಸುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು. ನನ್ನ ಕ್ಷೇತ್ರ ಔರಾದನಲ್ಲಿ ಅಹಿಲ್ಯಾದೇವಿ ಹೊಳ್ಕರ್ ಸಮುದಾಯ ಭವನಕ್ಕಾಗಿ ಒಂದು ಎಕರೆ ಸ್ಥಳ ನೀಡಿದ್ದೇನೆ. ಮುಂದಿನ ದಿನಗಳಲ್ಲಿ 2 ಕೋಟಿ ವೆಚ್ಚದಲ್ಲಿ ಭವನ ನಿರ್ಮಾಣವಾಗಲಿದೆ. ಜೊತೆಗೆ ಮುಂದಿನ ವರ್ಷ ಔರಾದನಲ್ಲಿ ಹಟಕಾರ ಮತ್ತು ಧನಗಾರ ಗೊಂಡ ಸಮಾಜದ ಜನರನ್ನು ಸೇರಿಸಿ ಬೃಹತ್ ಅದ್ದೂರಿ ಜಯಂತಿ ಆಚರಿಸೋಣ ಎಂದರು. ಸಮಾಜದ ಬಂಧುಗಳು ಶಿಕ್ಷಣ ಪಡೆದು ಜಾಗೃತರಾಗಬೇಕು. ಈಗಾಗಲೇ ಜಾಗೃತರಾಗಲು ತುಂಬಾ ವಿಳಂಬವಾಗಿದೆ. ಇನ್ನು ಮುಂದಿಟ್ಟ ಹೆಜ್ಜೆ ಹಿಂದಿಡಬೇಡಿ. ಸರ್ಕಾರಿ ಯೋಜನೆಗಳನ್ನು ಪಡೆದುಕೊಳ್ಳಲು ಪ್ರಯತ್ನ ಮಾಡಿ ಎಂದು ಸಲಹೆ ನೀಡಿದರು.**
**-ಪ್ರಭು ಚವ್ಹಾಣ, ಮಾಜಿ ಮಂತ್ರಿ ಹಾಗೂ ಹಾಲಿ ಶಾಸಕ**

**ರಾಜ್ಯ ಮತ್ತು ರಾಷ್ಟ್ರದ ಶಾಲಾ-ಕಾಲೇಜುಗಳ ಪಠ್ಯಪುಸ್ತಕದಲ್ಲಿ ರಾಜಮಾತೆ ಅಹಿಲ್ಯಾದೇವಿ ಹೊಳ್ಕರ್ ಅವರ ಜೀವನ ಚರಿತ್ರೆ ಅಳವಡಿಸಿ, ತಾಯಿಯ ಹೋರಾಟದ ಜೀವನ ಮುಂದಿನ ಪೀಳಿಗೆಗೆ ತಿಳಿಸುವ ಅಗತ್ಯವಿದೆ. ಪಠ್ಯಪುಸ್ತಕದಲ್ಲಿ ಔರಂಗಜೇಬ, ಟಿಪ್ಪುಸುಲ್ತಾನ, ಅಲೆಕ್ಸಾಂಡರನ ಜೀವನ ಚರಿತ್ರೆ ಇದೆ. ಆದರೆ ದೇಶಕ್ಕಾಗಿ ಧರ್ಮಕ್ಕಾಗಿ ಹೋರಾಡಿದ ಅಹಿಲ್ಯಾದೇವಿ ಚರಿತ್ರೆ ಅಳವಡಿಸಿಲ್ಲ. ಇದೆಂಥಾ ಅನ್ಯಾಯ? ಎಂದು ಪ್ರಶ್ನಿಸಿದರಲ್ಲದೆ ಧನಗಾರ ಮತ್ತು ಹಟಕಾರ ಎರಡೂ ಒಂದೇ ಎನ್ನುವ ಎನ್. ಶಂಕ್ರೆಪ್ಪ ವರದಿ ಜಾರಿಗಾಗಿ ನಾವೆಲ್ಲರೂ ಸೇರಿ ಸರ್ಕಾರದ ಮೇಲೆ ಒತ್ತಡ ಹೇರೋಣ. ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಿಗೆ ಮನವರಿಕೆ ಮಾಡೋಣ.**
**-ಕೆ.ಎಸ್.ಈಶ್ವರಪ್ಪ, ಮಾಜಿ ಉಪಮುಖ್ಯಮಂತ್ರಿ**

## ಕೊಲೆ ಅಪರಾಧಿಗೆ ಜೀವಾವಧಿ ಶಿಕ್ಷೆ

• **ಉದಯವಾಹಿನಿ ಗಂಗಾವತಿ**

ತಾಲ್ಲೂಕಿನ ಆನೆಗೊಂದಿಯ ಮಹಿಳೆಯೊಬ್ಬರನ್ನು ಕೊಲೆಗೈದಿದ್ದ ಅಪರಾಧಿಗೆ ಗಂಗಾವತಿಯ ಹೆಚ್ಚುವರಿ ಜಿಲ್ಲಾ ಹಾಗೂ ಸೆಷನ್ಸ್ ನ್ಯಾಯಾಲಯ ಜೀವಾವಧಿ ಶಿಕ್ಷೆ ನೀಡಿ ಆದೇಶ ಪ್ರಕಟಿಸಿದೆ.

2018ರ ಜೂನ್‌ನಲ್ಲಿ ಆನೆಗೊಂದಿಯ ಡಿ.ಪಿ. ಕುಮಾರಸ್ವಾಮಿ ಎಂಬಾತ ಅದೇ ಗ್ರಾಮದ ಲಕ್ಷ್ಮೀ ಎಂಬುವವರ ಮನೆಗೆ ನುಗ್ಗಿ ಚಿನ್ನದ ತಾಳಿಸರ ಕೊಡುವಂತೆ ಒತ್ತಾಯಿಸಿದ್ದ. ಮಹಿಳೆ ಸರ ಕೊಡದಿದ್ದಾಗ ಆಕೆಯನ್ನು ಕೊಲ್ಲುವ ಉದ್ದೇಶದಿಂದ ಹಲ್ಲೆ ನಡೆಸಿದ್ದರಿಂದ ತೀವ್ರತರ ಗಾಯಗಳಾಗಿ ಮೃತಪಟ್ಟಿದ್ದರು. ಈ ಕುರಿತು ಗಂಗಾವತಿಯ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಸದಾನಂದ ನಾಗಪ್ಪ ನಾಯ್ಕ ಅವರು ಆರೋಪಿ ತಪ್ಪಿತಸ್ಥನೆಂದು ತೀರ್ಪು ನೀಡಿ ಜೀವಾವಧಿ ಹಾಗೂ 1 ಲಕ್ಷಗಳ ದಂಡವನ್ನು ತೀರ್ಪಿನ ದಿನಾಂಕದಿಂದ ಮೂರು ತಿಂಗಳ ಒಳಗೆ ಮೃತಳ ತಾಯಿಗೆ ನೀಡುವಂತೆ ತಿಳಿಸಿದ್ದಾರೆ. ದಂಡ ಪಾವತಿಸದಿದ್ದಲ್ಲಿ 1 ವರ್ಷ ಸಾದಾ ಕಾರಾಗೃಹ, ಹಾಗೂ ಕಲಂ 392ರ ಅಪರಾಧಕ್ಕೆ 7 ವರ್ಷ ಕಾರಾಗೃಹ ಹಾಗೂ 10 ಸಾವಿರ ದಂಡವನ್ನು ಮೂರು ತಿಂಗಳಲ್ಲಿ ಭರಿಸಬೇಕು. ದಂಡ ಕಟ್ಟದಿದ್ದಲ್ಲಿ 3 ತಿಂಗಳ ಸಾದಾ ಕಾರಾಗೃಹ ವಾಸ ಅನುಭವಿಸಬೇಕು ಎಂದು ಆದೇಶಿಸಿದ್ದಾರೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 03:00 ರಿಂದ 04:30 |
| ಗುಳಿಕ ಕಾಲ | ಮಧ್ಯಾಹ್ನ | 12:00 ರಿಂದ 01:30 |
| ಯಮಗಂಡ ಕಾಲ | ಬೆಳಿಗ್ಗೆ | 09:00 ರಿಂದ 10:30 |

**ಮೇಷ** ಮನೆಯ ಚಿಂತೆಗಳು ನಿಮಗೆ ಉದ್ವೇಗ ತರಬಹುದು. ನೀವು ಸಾಲ ತೆಗೆದುಕೊಳ್ಳಲು ಹೊರಟಿದ್ದರೆ ಮತ್ತು ಈ ಕೆಲಸದಲ್ಲಿ ದೀರ್ಘಕಾಲ ತೊಡಗಿಸಿಕೊಂಡಿದ್ದರೆ, ಇಂದು ನೀವು ಸಾಲ ಪಡೆಯಬಹುದು.

**ವೃಷಭ** ನೀವು ಯೋಗ ಧ್ಯಾನದೊಂದಿಗೆ ದಿನವನ್ನು ಪ್ರಾರಂಭಿಸಬಹುದು. ಇದನ್ನು ಮಾಡುವುದರಿಂದ ನಿಮಗೆ ಪ್ರಯೋಜನಕಾರಿಯಾಗುತ್ತದೆ ಮತ್ತು ದಿನವಿಡೀ ನಿಮ್ಮಲ್ಲಿ ಶಕ್ತಿ ಉಳಿದಿರುತ್ತದೆ.

**ಮಿಥುನ** ನಿಮ್ಮ ಪ್ರೇಮಿಯೆಡೆಗೆ ಸೇಡು ಹೊಂದುವುದು ಯಾವುದೇ ಫಲ ತರುವುದಿಲ್ಲ ಅದರ ಬದಲಿಗೆ ನೀವು ಶಾಂತರಾಗಿರಬೇಕು ಮತ್ತು ನಿಮ್ಮ ಪ್ರೇಮಿಗೆ ನಿಮ್ಮ ನಿಜವಾದ ಪ್ರೀತಿಯನ್ನು ವಿವರಿಸಬೇಕು.

**ಕರ್ಕಾಟಕ** ದೂರದ ಸ್ಥಳದ ಸಂಬಂಧಿಗಳು ಇಂದು ನಿಮ್ಮನ್ನು ಸಂಪರ್ಕಿಸಬಹುದು. ನೀವು ಸಂತೋಷ ನೀಡುವ ಮೂಲಕ ಮತ್ತು ಹಿಂದಿನ ತಪ್ಪುಗಳನ್ನು ಮನ್ನಿಸುವ ಮೂಲಕ ನಿಮ್ಮ ಜೀವನವನ್ನು ಸಮರ್ಥಗೊಳಿಸಲಿದ್ದೀರಿ.

**ಸಿಂಹ** ನಿಮ್ಮ ಆಕರ್ಷಣೆ ಹಾಗೂ ವ್ಯಕ್ತಿತ್ವ ನೀವು ಹೊಸ ಸ್ನೇಹಿತರನ್ನು ಗಳಿಸಲು ಸಹಾಯ ಮಾಡುತ್ತದೆ. ಇವತ್ತು ಡೇಟ್‌ಗೆ ಹೋದಲ್ಲಿ ವಿವಾದಾತ್ಮಕ ವಿಷಯಗಳನ್ನು ಕೆದಕುವುದನ್ನು ತಪ್ಪಿಸಿ.

**ಕನ್ಯಾ** ನಿಮ್ಮ ಸಕಾರಾತ್ಮಕ ದೃಷ್ಟಿಕೋನ ನಿಮ್ಮ ಸುತ್ತಲಿನವರನ್ನು ಆಕರ್ಷಿಸಬಹುದು. ಹೆಚ್ಚು ಖರೀದಿಸಲು ಧಾವಿಸುವ ಮೊದಲು ನೀವು ಈಗಾಗಲೇ ಹೊಂದಿರುವುದನ್ನು ಬಳಸಿ.

**ತುಲಾ** ನೀವು ಹೇರಳ ಶಕ್ತಿಯನ್ನು ಹೊಂದಿರುತ್ತೀರಿ – ಆದರೆ ಕೆಲಸದ ಒತ್ತಡ ನಿಮ್ಮನ್ನು ಉದ್ವಿಗ್ನಗೊಳಿಸುವಂತೆ ತೋರುತ್ತದೆ. ನೀವು ಸಂಪ್ರದಾಯಬದ್ಧ ಹೂಡಿಕೆಗಳನ್ನು ಮಾಡಿದಲ್ಲಿ ಒಳ್ಳೆಯ ಹಣ ಮಾಡುತ್ತೀರಿ.

**ವೃಶ್ಚಿಕ** ನಿಮ್ಮಲ್ಲಿ ಕೆಲವು ಆಭರಣ ಅಥವಾ ಗೃಹಬಳಕೆಯ ಸಾಧನಗಳನ್ನು ಖರೀದಿಸುವ ಸಾಧ್ಯತೆಗಳಿವೆ. ಪ್ರೇಮಿಗಳು ಕುಟುಂಬದ ಭಾವನೆಗಳ ಬಗ್ಗೆ ತುಂಬ ಕಾಳಜಿ ಹೊಂದಿರುತ್ತಾರೆ.

**ಧನಸ್ಸು** ನಿಮ್ಮ ಚೈತನ್ಯವನ್ನು ಪುನಃ ಸಂಪಾದಿಸಲು ವಿಶ್ರಾಂತಿ ತೆಗೆದುಕೊಳ್ಳಿ. ಆರ್ಥಿಕ ಜೀವನದಲ್ಲಿ ಇಂದು ಸಂತೋಷ ಉಳಿದಿರುತ್ತದೆ. ಇದರೊಂದಿಗೆ ನೀವು ಇಂದು ಸಾಲಗಳಿಂದ ಮುಕ್ತರಾಗಬಹುದು.

**ಮಕರ** ಇಂದು ನೀವು ಮನೆಯಲ್ಲಿ ಸೂಕ್ಷ್ಮ ಸಮಸ್ಯೆಯನ್ನು ಬಗೆಹರಿಸಲು ನಿಮ್ಮ ಬುದ್ಧಿವಂತಿಕೆಯನ್ನು ಬಳಸಬೇಕಾಗುತ್ತದೆ. ನೀವು ನಿಮ್ಮ ಪ್ರೀತಿಪಾತ್ರರು ಒಬ್ಬರೊನ್ನಬ್ಬರು ಚೆನ್ನಾಗಿ ಅರ್ಥಮಾಡಿಕೊಳ್ಳಲು ಸಮಯ ವ್ಯಯಿಸಬೇಕು.

**ಕುಂಭ** ನಿಮ್ಮಲ್ಲಿ ಶಕ್ತಿಯ ಕೊರತೆಯಿರದೇ ಆತ್ಮವಿಶ್ವಾಸದ ಕೊರತೆಯಿರುವುದರಿಂದ ನಿಮ್ಮ ನಿಜವಾದ ಸಾಮರ್ಥ್ಯವನ್ನು ಅರಿತುಕೊಳ್ಳಿ. ಇಂದು ನೀವು ಯಾವುದೇ ಅಜ್ಞಾತ ಮೂಲಗಳಿಂದ ಹಣವನ್ನು ಪಡೆಯಬಹುದು.

**ಮೀನ** ನಿಮಗೆ ಗೊತ್ತಿದ್ದ ಯಾರಾದರೂ ಹಣಕಾಸಿಗೆ ಸಂಬಂಧಿಸಿದ ವಿಷಯಗಳಿಗೆ ಅತಿಯಾಗಿ ಪ್ರತಿಕ್ರಿಯಿಸಬಹುದು, ಇದು ಮನೆಯಲ್ಲಿ ಆತಂಕದ ಕ್ಷಣಗಳು ತರುತ್ತದೆ.

---

● ಮಳೆಗಾಲ ಶುರುವಾಗುತ್ತಿದ್ದಂತೆ ಕೋಡಿ ಒಡೆಯುವ ಆತಂಕ ★ ಅಕ್ಕ-ಪಕ್ಕದವರಿಂದ ಅಕ್ರಮ ಸ್ವಾದೀನ

# ಕೆರೆ ಜಾಗ ಒತ್ತುವರಿ: ನೀರು ನುಗ್ಗುವ ಭೀತಿ, ಗಂಡಾಂತರಕ್ಕೆ ದಾರಿ

• ಉದಯವಾಹಿನಿ ಹಾವೇರಿ

ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿರುವ ಪ್ರದೇಶ. ಹೂಳು ತುಂಬಿಕೊಂಡು ಹೆಚ್ಚುತ್ತಿರುವ ನೀರು. ಮಳೆ ಹೆಚ್ಚಾದರೆ ಕೋಡಿ ಒಡೆದು ಎಲ್ಲೆಂದರಲ್ಲಿ ನೀರು ನುಗ್ಗುವ ಭೀತಿ. ನುಂಗಣ್ಣರ ವಿರುದ್ಧ ಕ್ರಮ ಜರುಗಿಸದಿದ್ದರೆ, ಕೆರೆಗಳೇ ಮಾಯವಾಗುವ ಪರಿಸ್ಥಿತಿ.

ಜಿಲ್ಲೆಯಲ್ಲಿರುವ ಬಹುತೇಕ ಕೆರೆಗಳ ಸದ್ಯದ ವಾಸ್ತವ ಸ್ಥಿತಿಯಿದು ಜನರು-ಜಾನುವಾರು-ಪ್ರಾಣಿ-ಪಕ್ಷಿಗಳ ಕುಡಿಯುವ ನೀರಿಗೆ ಕೆರೆಗಳೇ ಆಸರೆ. ಅಂತರ್ಜಲ ಮಟ್ಟ ಏರಿಕೆಯಲ್ಲೂ ಕೆರೆಗಳ ಪಾತ್ರ ಪ್ರಮುಖವಾಗಿದೆ. ಇಂಥ ಕೆರೆಗಳು ಇತ್ತೀಚಿನ ದಿನಗಳಲ್ಲಿ ಒತ್ತುವರಿಯಾಗಿ, ನುಂಗಣ್ಣರ ಪಾಲಾಗುತ್ತಿರುವುದು ದೊಡ್ಡ ಗಂಡಾಂತರಕ್ಕೆ ದಾರಿ ಮಾಡಿಕೊಡುತ್ತಿದೆ.

ರೈತಾಪಿ ನಾಡಾಗಿರುವ ಹಾವೇರಿ ಜಿಲ್ಲೆಯಲ್ಲಿ ಬಹುತೇಕರು ರೈತರು. ಗ್ರಾಮ, ಜಮೀನು ಹಾಗೂ ಅರಣ್ಯ ಪ್ರದೇಶಗಳಲ್ಲಿ ಕೆರೆಗಳಿವೆ. ಜಮೀನು ಬಳಿಯ ಕೆರೆಗಳು, ಕೃಷಿಗೆ ಆಧಾರವಾಗಿವೆ. ಗ್ರಾಮಗಳ ಬಳಿಯ ಕೆರೆಗಳು, ಗ್ರಾಮಸ್ಥರ ಕುಡಿಯುವ ನೀರು ಹಾಗೂ ದಿನನಿತ್ಯದ ಕೆಲಸಕ್ಕೆ ಸಹಾಯಕವಾಗಿವೆ. ಅರಣ್ಯ ಪ್ರದೇಶದಲ್ಲಿರುವ ಕೆರೆಗಳು, ಪ್ರಾಣಿ-ಪಕ್ಷಿಗಳ ಬಾಯಾರಿಕೆ ನೀಗಿಸುತ್ತಿವೆ. ಕೆರೆಗಳ ಮೂಲಕ ಹೆಚ್ಚಿನ ಪ್ರಮಾಣದಲ್ಲಿ ಕೃಷಿ ಚಟುವಟಿಕೆ ನಡೆಯುತ್ತಿದೆ. ಕೆರೆ ನೀರು ನಂಬಿಯೇ ಹಲವು ರೈತರು, ಕೃಷಿ ಮಾಡುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಕೆರೆಗಳು ಒತ್ತುವರಿಯಾಗುತ್ತಿರುವುದರಿಂದ, ಕೃಷಿ ಚಟುವಟಿಕೆ ಮೇಲೂ ಪರಿಣಾಮ ಬೀರುತ್ತಿದೆ. ಜಿಲ್ಲಾಡಳಿತದ ಮಾಹಿತಿ ಪ್ರಕಾರ ಜಿಲ್ಲೆಯಲ್ಲಿ 2,058 ಕೆರೆಗಳಿವೆ. ಈ ಪೈಕಿ 225ಕ್ಕೂ ಹೆಚ್ಚು ಕೆರೆಗಳು ಒತ್ತುವರಿಯಾಗಿರುವುದು ಸಮೀಕ್ಷೆಯಿಂದ ಗೊತ್ತಾಗಿದೆ.





ಉದಯವಾಹಿನಿ ಚಿತ್ರ

**ಕೆರೆಗಳೇ ಮಾಯವಾಗುವ ಪರಿಸ್ಥಿತಿ**

ಆದರೆ, ಒತ್ತುವರಿ ತೆರವಿಗೆ ಯಾವುದೇ ಕಾರ್ಯಾಚರಣೆ ಆರಂಭವಾಗಿಲ್ಲ. ಹೆಚ್ಚಿನ ಕಡೆಗಳಲ್ಲಿ ಪ್ರಭಾವಿಗಳೇ ಕೆರೆ ಒತ್ತುವರಿ ಮಾಡಿಕೊಂಡಿದ್ದು, ಅವರ ವಿರುದ್ಧ ಕ್ರಮ ಕೈಗೊಳ್ಳಲು ಜಿಲ್ಲಾಡಳಿತದ ಅಧಿಕಾರಿಗಳು ಹಿಂದೇಟು ಹಾಕುತ್ತಿರುವುದಾಗಿ ಜನರು ದೂರುತ್ತಿದ್ದಾರೆ.

ಒತ್ತುವರಿಯಾದ ಕೆರೆಗಳ ಪೈಕಿ 131 ಕೆರೆಗಳ ಒತ್ತುವರಿಯನ್ನು ತೆರವು ಮಾಡಿರುವುದಾಗಿ ಜಿಲ್ಲಾಡಳಿತ ಹೇಳುತ್ತಿದೆ. ಆದರೆ, ಅದು ಸಹ ಪೂರ್ಣ ಪ್ರಮಾಣದಲ್ಲಿ ಆಗಿಲ್ಲವೆಂದು ಜನರು ಆರೋಪಿಸುತ್ತಿದ್ದಾರೆ. ಜಿಲ್ಲೆಯ 2058 ಕೆರೆಗಳ ಸ್ಥಳಗಳಲ್ಲಿ ಭೂ ಮಾಪನಾ ಇಲಾಖೆಯ ಸಹಾಯದಿಂದ ಸರ್ವೇ ಮಾಡಿಸಲಾಗುತ್ತಿದೆ. ಸದ್ಯಕ್ಕೆ 250ಕ್ಕೂ ಹೆಚ್ಚು ಕೆರೆಗಳು ಒತ್ತುವರಿಯಾಗಿರುವುದು ಪತ್ತೆಯಾಗಿದೆ.

ಮುಂಬರುವ ದಿನಗಳಲ್ಲಿ ಮತ್ತಷ್ಟು ಕೆರೆಗಳ ಒತ್ತುವರಿ ಪತ್ತೆಯಾಗಬಹುದು ಎಂದು ಜಿಲ್ಲಾಡಳಿತದ ಅಧಿಕಾರಿಯೊಬ್ಬರು ತಿಳಿಸಿದರು. ದಾಖಲೆಗಷ್ಟೇ ತೆರವು ಸೀಮಿತ, ಕೆರೆಗಳ ಒತ್ತುವರಿ ತೆರವು ಮಾಡಿರುವುದಾಗಿ ಅಧಿಕಾರಿಗಳು ದಾಖಲೆಯಲ್ಲಿ ಮಾತ್ರ ಹೇಳುತ್ತಿದ್ದಾರೆ.

ಕೆರೆ ಪ್ರದೇಶಕ್ಕೆ ಬಂದು ನೋಡಿದರೆ, ಒತ್ತುವರಿ ಯಥಾಸ್ಥಿತಿ ಮುಂದುವರಿದಿದೆ ಎಂದು ಹಾನಗಲ್ ತಾಲ್ಲೂಕಿನ ಬೆಳಗಾಲಪೇಟೆ ರೈತ ಚನ್ನಬಸಪ್ಪ ಹೇಳಿದರು. ಬೆಳಗಾಲಪೇಟೆ, ನಿಸ್ಸಿಮ ಆಲದಕಟ್ಟಿ ಸೇರಿದಂತೆ ಹಲವು ಗ್ರಾಮಗಳ ಕೆರೆಗಳು ಒತ್ತುವರಿಯಾಗಿವೆ. ಈ ಬಗ್ಗೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ಸಹ ನೀಡಿದ್ದೇವೆ. ಯಾರೊಬ್ಬರೂ ಒತ್ತುವರಿ ತೆರವು ಮಾಡಲು ಕ್ರಮ ಕೈಗೊಳ್ಳುತ್ತಿಲ್ಲ. ಇವರ ನಿರ್ಲಕ್ಷ್ಯದಿಂದ ಕೆರೆಗಳು ಅವಸಾನದತ್ತ ಸಾಗುತ್ತಿವೆ. ಪರಿಸ್ಥಿತಿ ಹೀಗೆ ಮುಂದುವರಿದರೆ, ನೀರು ಸಂಗ್ರಹವಾಗಲು ಜಾಗ ಇರುವುದಿಲ್ಲ. ಅಂತರ್ಜಲ ಮಟ್ಟವೂ ಕುಸಿಯಲಿದೆ' ಎಂದು ಆತಂಕ ವ್ಯಕ್ತಪಡಿಸಿದರು.

**ಅಪಾಯ ಕಟ್ಟಿಟ್ಟ ಬುತ್ತಿ**

ಜಮೀನುಗಳು ಜಲಾವೃತ ಜಿಲ್ಲೆಯ ಹಲವು ಗ್ರಾಮಗಳಲ್ಲಿ ಕೆರೆ ಪ್ರದೇಶವನ್ನು ಒತ್ತುವರಿ ಮಾಡಿಕೊಂಡು ಅದೇ ಸ್ಥಳವನ್ನು ಸಮತಟ್ಟು ಮಾಡಲಾಗಿದೆ. ಇದರಿಂದಾಗಿ ಕೆರೆಯ ಅಕ್ಕ- ಪಕ್ಕದಲ್ಲಿರುವ ಜಮೀನಿಗೆ ನೀರು ನುಗ್ಗಿ ಜಲಾವೃತವಾಗುತ್ತಿರುವ ಘಟನೆಗಳು ನಡೆಯುತ್ತಿದೆ. ಒತ್ತುವರಿಯಾದ ಕೆರೆಗಳ ಪ್ರದೇಶಗಳಲ್ಲಿ ಸರ್ಕಾರದ ವಿವಿಧ ಇಲಾಖೆಯವರು ಅವೈಜ್ಞಾನಿಕ ಕಾಮಗಾರಿಗಳನ್ನೂ ಕೈಗೊಳ್ಳುತ್ತಿದ್ದಾರೆ. ಇದರಿಂದಲೇ ಕೆರೆಯ ಸುತ್ತಮುತ್ತಲಿನ ರೈತರು ಹಾಗೂ ಜನರು ಸಮಸ್ಯೆ ಎದುರಿಸುತ್ತಿದ್ದಾರೆ. 'ಕೆರೆಯ ಒತ್ತುವರಿ ಜಾಗವನ್ನು ತೆರವು ಮಾಡಿ ಅದೇ ಜಾಗವನ್ನು ಹೂಳು ತೆಗೆದು ನೀರು ಸಂಗ್ರಹವಾಗಲು ಅನುಕೂಲ ಮಾಡಬೇಕು. ಈ ಕೆಲಸವನ್ನು ತ್ವರಿತವಾಗಿ ಮಾಡದಿದ್ದರೆ ಅಪಾಯ ಕಟ್ಟಿಟ್ಟ ಬುತ್ತಿ' ಎಂದು ರೈತರು ಆತಂಕ ವ್ಯಕ್ತಪಡಿಸುತ್ತಿದ್ದಾರೆ.

**ಅಧಿಕಾರಿಗಳ ಮೇಲೆ ಒತ್ತಡ**

ತೆರವು ನಿಲ್ಲಿಸಲು ಅಧಿಕಾರಿಗಳ ಮೇಲೆ ಒತ್ತಡ' ಕೆರೆಗಳ ಒತ್ತುವರಿ ಪಟ್ಟಿ ಸಿದ್ಧಪಡಿಸಿರುವ ಜಿಲ್ಲಾಡಳಿತದ ಅಧಿಕಾರಿಗಳು ತೆರವು ಕಾರ್ಯಾಚರಣೆ ನಡೆಸಲು ಸಿದ್ಧತೆ ನಡೆಸುತ್ತಿದ್ದಾರೆ. ಆದರೆ ಒತ್ತುವರಿ ಮಾಡಿಕೊಂಡಿರುವ ಕೆಲವರು ಜನಪ್ರತಿನಿಧಿಗಳ ಮೂಲಕ ಅಧಿಕಾರಿಗಳ ಮೇಲೆ ಒತ್ತಡ ಹಾಕುತ್ತಿರುವ ಆರೋಪಗಳೂ ವ್ಯಕ್ತವಾಗುತ್ತಿವೆ. ಕೆರೆ ಪ್ರದೇಶಕ್ಕೆ ಹೊಂದಿಕೊಂಡು ಜಮೀನು ಸಾಗುವಳಿ ಮಾಡುತ್ತಿರುವ ಜನರೇ ವರ್ಷದಿಂದ ವರ್ಷಕ್ಕೆ ಕ್ರಮೇಣ ಕೆರೆಯ ಜಾಗವನ್ನು ಕಬಳಿಸುತ್ತಿದ್ದಾರೆ. ಈ ಬಗ್ಗೆ ಸ್ಥಳೀಯರು ಪ್ರಶ್ನಿಸಿದರೆ ಜೀವ ಬೆದರಿಕೆಯೊಡ್ಡುವ ಘಟನೆಗಳೂ ನಡೆಯುತ್ತಿವೆ. ಅಧಿಕಾರಿಗಳು ಯಾವುದೇ ಒತ್ತಡಕ್ಕೆ ಮಣಿಯದೇ ತೆರವು ಕಾರ್ಯಾಚರಣೆ ಆರಂಭಿಸಬೇಕು. ಕೆರೆಗಳನ್ನು ರಕ್ಷಿಸಿದರೆ ಮಾತ್ರ ಜನರನ್ನು ರಕ್ಷಿಸಿದಂತಾಗುತ್ತದೆ' ಎಂದು ರೈತರು ಹೇಳುತ್ತಿದ್ದಾರೆ.

---

## ಪ್ರದೀಪಕುಮಾರ ಗೋಡಿಗೆ 'ಸೇವಾ ಸಾಧಕ' ಪ್ರಶಸ್ತಿ ಪ್ರದಾನ

• ಉದಯವಾಹಿನಿ ಕೊಪ್ಪಳ

ಪ್ರೆಸ್ ಕ್ಲಬ್ ಕೌನ್ಸಿಲ್ (ರಿ) ಬೆಂಗಳೂರು ಇದರ ಸಂಘಟನೆ ಉದ್ಘಾಟನೆ ಮತ್ತು ಅಮೃತ ಘಳಿಗೆ ಕವನ ಸಂಕಲನ ಬಿಡುಗಡೆ ಕಾರ್ಯಕ್ರಮವು ಬೆಂಗಳೂರಿನ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮಗಳ ಉದ್ಘಾಟನೆಯನ್ನು ರಾಜ್ಯ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಶ್ರಾಂತ ನ್ಯಾಯಧೀಶರಾದ ಅರಳಿ ನಾಗರಾಜ, ನೆಲಮಂಗಲ ಶಾಸಕ ಎನ್. ಶ್ರೀನಿವಾಸ ಜಂಟಿಯಾಗಿ ಕಾರ್ಯಕ್ರಮವನ್ನು ಉದ್ಘಾಸಿದರು. ಲಕ್ಷ್ಮೀ ಶ್ರೀನಿವಾಸ ಗೂರೂಜಿ ಸಾನಿಧ್ಯ ವಹಿಸಿದ್ದರು.

ರಾ.ಕ.ಸಾ.ಪ ಅಧ್ಯಕ್ಷ ನಾಡೋಜ ಡಾ. ಮಹೇಶ್ ಜೋಶಿ ಹಾಗೂ ರಾ.ಪ್ರೆಸ್ ಕ್ಲಬ್ ಕೌನ್ಸಿಲ್ ಅಧ್ಯಕ್ಷ ಆರ್. ರಾಘವೇಂದ್ರಾಚಾರ್ ಅಧ್ಯಕ್ಷತೆಯನ್ನು ವಹಿಸಿದ್ದರು. ಸಂಘಟಕರಾದ ಡಾ.ಎಸ್. ಬಾಲಾಜಿ ಹಾಗೂ



ಉದಯವಾಹಿನಿ ಚಿತ್ರ

ಕನ್ನಡ ಚಲನಚಿತ್ರ ನಟ ಅಹಿಂಸಾ ಚೇತನ್ ಅವರು ಅಮೃತ ಘಳಿಗೆ ವಿನೂತನವಾದ ಕವನ ಸಂಕಲವನ್ನು ಬಿಡುಗಡೆಗೊಳಿಸಿದರು. ತದನಂತರ ನಡೆದ ರಾಜ್ಯದ ಸಾಧಕರನ್ನು ಗುರುತಿಸುವ ಕಾರ್ಯಕ್ರಮದಲ್ಲಿ ಕೊಪ್ಪಳದ ಯುವ ಪತ್ರಕರ್ತ ಹಾಗೂ ಗೋಡಿ ಟೆಕ್ನಾಲಜಿ ಸಂಸ್ಥಾಪಕ ಪ್ರದೀಪಕುಮಾರ ಗೋಡಿ ಅವರನ್ನು ವಿಶೇಷ ಸಾಧಕರೆಂದು ಪರಿಗಣಿಸಿ, ಪ್ರಶಸ್ತಿ ಪ್ರದಾನ ಮಾಡಿ ಸನ್ಮಾನಿಸಲಾಯಿತು. ಪ್ರದೀಪಕುಮಾರ ಗೋಡಿ ಅವರ ಸೇವಾನಿಷ್ಠೆಯ ಸೇವಾ ಸಾಧಕ ಎಂದು ತಿಳಿದು ನಾಡಿನ ವಿವಿಧ ಸಂಘಟನೆ ಮತ್ತು ಅವರ ಸ್ನೇಹ ವಲಯ ಅಭಿನಂದನೆ ವ್ಯಕ್ತಪಡಿಸಿದೆ.

---

## ಸಂಗಾಪುರ:ಖಸಾಯಿಖಾನೆಗೆ ಸ್ಥಳ ಗುರುತಿಸಿದ ಕಂದಾಯ ಇಲಾಖೆ
## ಗೋ ವಧೆ ಬೇಡ, ಖಸಾಯಿ ಖಾನೆ ನಿರ್ಮಾಣಕ್ಕೆ ಪುವ್ವಲದೊರೆ ವಿರೋಧ

• ಉದಯವಾಹಿನಿ ಕಾರಟಗಿ

ಗಂಗಾವತಿ ತಾಲ್ಲೂಕಿನ ಸಂಗಾಪುರ ಗ್ರಾಮದ ವ್ಯಾಪ್ತಿಯಲ್ಲಿ ಖಸಾಯಿಖಾನೆ ಮಾಡುವ ಉದ್ದೇಶದಿಂದ ಕಂದಾಯ ಅಧಿಕಾರಿಗಳು ಸ್ಥಳ ಗುರುತು ಮಾಡಿರುವುದು ಈಗ ವಿವಾದಕ್ಕೆ ಎಡೆ ಮಾಡಿದೆ, ಈ ಭಾಗದಲ್ಲಿ ಯಾವುದೇ ಕಾರಣಕ್ಕೂ ಖಾಸಯಿಖಾನೆ ಮಾಡದಂತೆ ಅಖಿಲ ಕರ್ನಾಟಕ ಹರಿಹರ ಹಕ್ಕ-ಬುಕ್ಕ ನಾಯಕ ಮಹಾ ವೇದಿಕೆ ಮತ್ತು ಗಂಡುಗಲಿ ಕುಮಾರರಾಮನ ವಂಶಸ್ಥ ಎಚ್ ರಾಜೇಶ್ ನಾಯಕ ಪುವ್ವಲದೊರೆ. ವಿರೋಧಿಸಿದ್ದು, ಅಧಿಕಾರಿಗಳ ನಡೆಯನ್ನು ಖಂಡಿಸಿ ಗೋವುಗಳ ವಧೆ ಇಲ್ಲಿ ಮಾಡಬಾರದು ಎಂದು ಆಗ್ರಹಿಸಿದ್ದಾರೆ. ತಾಲ್ಲೂಕಿನ ಸಂಗಾಪುರ ಗ್ರಾಮದಲ್ಲಿ (ಸ್ಮಾರ್ಟ್ ಹೌಸ್) ಗೋವುಗಳ ಖಸಾಯಿಖಾನೆಗೆ ಸರ್ಕಾರಿ ಭೂಮಿಯನ್ನು ಸರ್ವೇ ನಂಬರ್ 16 ಕಾಯ್ದಿರಿಸಲು ಸಂಗಾಪುರ ಗ್ರಾಮ ಲೆಕ್ಕಾಧಿಕಾರಿ



ಉದಯವಾಹಿನಿ ಚಿತ್ರ

ಮತ್ತು ಕಂದಾಯ ನಿರೀಕ್ಷಕರು ಸ್ಥಳ ಗುರುತಿಸಿ ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸುತ್ತಿದ್ದಾರೆ ಎಂಬ ಮಾಹಿತಿ ನಮಗೆ ಬಂದಿದೆ. ಈ ಭಾಗದಲ್ಲಿ ಐತಿಹಾಸಿಕ ಪ್ರೇಕ್ಷಣೀಯ ಸ್ಥಳಗಳು ಇದ್ದು ಅಂಜನಾದ್ರಿ, ಬೆಟ್ಟ, ಪಂಪಾ ಸರೋವರ, ಲಕ್ಷ್ಮಿ ದೇವಸ್ಥಾನ, ಆನೆಗೊಂದಿ ಕುಮ್ಮಟದುರ್ಗದ ರಾಜ ವೀರಕಂಪಿಲರಾಯನ ಕಾಲದಲ್ಲಿ ನಿರ್ಮಾಣವಾದ ಆದಿಶಕ್ತಿ (ದುರ್ಗಾ ದೇವಿ) ದೇವಸ್ಥಾನ, ಹಂಪಿ, ಹಲವು ದೇವಸ್ಥಾನಗಳು ಇದ್ದು ಇದನ್ನು ಗಮನಕ್ಕೆ ತೆಗೆದುಕೊಳ್ಳದೆ ಖಸಾಯಿಖನೆ ಮಾಡಲು ಸ್ಥಳ ಗುರುತು ಮಾಡಲು ಮುಂದಾಗಿರುವುದು ಖಂಡನೀಯವಾಗಿದೆ. ತಕ್ಷಣ ಅಧಿಕಾರಿಗಳು ಖಸಾಯಿಖಾಗೆ ಈ ಭಾಗದಲ್ಲಿ ಯಾವುದೇ ಸ್ಥಳ ಗುರುತಿಸಿದರೆ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ ರಾಜೇಶ್ ನಾಯಕ ಪುವ್ವಲದೊರೆ ಎಚ್ಚರಿಸಿದ್ದಾರೆ.

> ಸಂಗಾಪುರ ಗ್ರಾಮದಲ್ಲಿ ಗೋವುಗಳನ್ನು ಕಡಿಯಲು ಖಸಾಯಿಖಾನೆ ನಿರ್ಮಾಣ ಮಾಡದಂತೆ ನಾವು ವಿರೋಧಿಸುತ್ತೇವೆ. ಹಿಂದುಗಳು ಪೂಜಿಸುವ ದನ-ಕರುಗಳನ್ನು ತುಂಡರಿ ಮಾಂಸ ಮಾರಾಟ ಮಾಡಲು ಸರ್ಕಾರಿ ಭೂಮಿಯನ್ನು ಕಾಯ್ದಿರಿಸಲು ಪಂಚನಾಮೆ ಮಾಡಿ ವರದಿ ನೀಡುತ್ತಿರುವುದು ಸರಿಯಲ್ಲ.
> -ಎಚ್ ರಾಜೇಶ್ ನಾಯಕ ಪುವ್ವಲದೊರೆ

---

## ಉಡುಪಿ ಜಿಲ್ಲೆಯಾದ್ಯಂತ ಬಿರುಸಿನ ಮಳೆ: ಹಲವೆಡೆ ನೆರೆ

• ಉದಯವಾಹಿನಿ, ಉಡುಪಿ

ಜಿಲ್ಲೆಯಾದ್ಯಂತ ಭಾರಿ ಮಳೆ ಸುರಿದಿದ್ದು, ಹಲವೆಡೆ ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿದೆ. ಕುಂದಾಪುರ, ಬೈಂದೂರು, ಹೆಬ್ರಿ, ಕಾರ್ಕಳ, ವ್ಯಾಪ್ತಿಯಲ್ಲಿ ಗಾಳಿ ಸಹಿತ ಮಳೆಯಾಗಿದೆ. ಬೈಂದೂರು ತಾಲ್ಲೂಕಿನ ಶಿರೂರು, ಯಡ್ತರೆ, ವಿರೂಪಾಕ್ಷಿ, ಕಳವಾಡಿ, ಮಯ್ಯಾಡಿ, ತಗ್ಗರ್ಸೆ, ಬಿಜೂರು, ಉಪ್ಪುಂದ, ಚಿಕ್ಕಳ್ಳಿ, ಸಾಲ್ಬುಡ ಮೊದಲಾದೆಡೆ ಕೃಷಿ ಭೂಮಿ ಹಾಗೂ ಸಂಪರ್ಕ ರಸ್ತೆಗಳು ಜಲಾವೃತವಾಗಿವೆ. ಮೀನುಗಾರರು ಹಾಗೂ ಜಿಲ್ಲಾಡಳಿತದ ವತಿಯಿಂದ ಈ ಪ್ರದೇಶ ಜನರನ್ನು ಸುರಕ್ಷಿತ ಸ್ಥಳಗಳಿಗೆ ದೋಣಿಗಳ ಮೂಲಕಸ್ಥಳಾಂತರಿಸಲಾಗಿದೆ. ಯಡ್ತರೆ ಬಂಟರ ಭವನದಲ್ಲಿ ಗಂಜಿ ಕೇಂದ್ರವನ್ನು ತೆರೆಯಲಾಗಿದೆ. ತಾಲ್ಲೂಕಿನ ವಿವಿಧೆಡೆ 35 ಕ್ಕಿಂತಲೂ ಅಧಿಕ ವಿದ್ಯುತ್ ಕಂಬಗಳು ಧರಾಶಾಹಿಯಾಗಿದೆ. ಕುಂದಾಪುರ ತಾಲ್ಲೂಕಿನ ಕಮಲಶಿಲೆ ಪ್ರದೇಶದಲ್ಲಿ ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿದೆ. ಮಾರಣಕಟ್ಟೆ ಶ್ರೀ ಬ್ರಹ್ಮಲಿಂಗೇಶ್ವರ ದೇವಸ್ಥಾನದ ಪ್ರಾಂಗಣಕ್ಕೆ ನೆರೆ ನೀರು ನುಗ್ಗಿದೆ. ಕುಬ್ಜಾ ನದಿ ಉಕ್ಕಿ ಹರಿದಿದೆ.

---

## ಭಾರೀ ಮಳೆ: ಮನೆಯೊಳಗೆ ನುಗ್ಗಿದ ನೀರು

• ಉದಯವಾಹಿನಿ ಬಂಟ್ವಾಳ

ಸೂರಿಕುಮೇರು ಸಮೀಪದ ದಾಸಕೋಡಿ ಎಂಬಲ್ಲಿ ವಾಸ್ತವ್ಯ ಇಲ್ಲದ ಮನೆಯೊಳಗೆ ನೀರು ನುಗ್ಗಿದೆ. ಮನೆಯ ಸುತ್ತಲೂ ನೀರು ಆವರಿಸಿ ಮುಕ್ಕಾಲು ಮನೆ ಮುಳುಗಿದ ಸ್ಥಿತಿಯಲ್ಲಿದೆ.

ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಅವಾಂತರದಿಂದ ಮಳೆ ನೀರು ಹರಿದು ಹೋಗಲು ಸರಿಯಾದ ವ್ಯವಸ್ಥೆ ಇಲ್ಲದೆ ಮನೆ ಜಲಾವೃತಗೊಂಡಿದೆ. ಅದೃಷ್ಟವಶಾತ್ ಮನೆಯಲ್ಲಿ ಕೆಲ ವರ್ಷಗಳಿಂದ ವಾಸ್ತವ್ಯ ಇಲ್ಲದ ಕಾರಣ ಯಾವುದೇ ಅಪಾಯವಿಲ್ಲ,ಇದರ ಜೊತೆ ಸಮೀಪದ ಕೃಷಿ ತೋಟ ಕ್ಕೂ ನೀರು ನುಗ್ಗಿದೆ.

ನೀರು ಸರಿಯಾಗಿ ಹರಿದು ಹೋಗುವ. ವ್ಯವಸ್ಥೆ ಇಲ್ಲದ ಕಾರಣದಿಂದ ಸಮೀಪದ ಮನೆಗೂ ನೀರು ನುಗ್ಗುವ ಅಪಾಯವಿದ್ದು ಸ್ಥಳೀಯ ಆಡಳಿತ ಎಚ್ಚರಿಕೆ ವಹಿಸಬೇಕಾಗಿದೆ.

---

## ಜೂಜಾಟ: 6 ಜನರ ಬಂಧನ

• ಉದಯವಾಹಿನಿ ಕಲಬುರಗಿ


ತಾಲ್ಲೂಕಿನ ಅವರಾದ (ಬಿ) ಗ್ರಾಮದಲ್ಲಿರುವ ಹೋಟೆಲ್ ಎದುರುಗಡೆ ಇರುವ ಖುಲ್ಲಾ ಜಾಗದಲ್ಲಿ ಜೂಜಾಟವಾಡಲಾಗುತ್ತಿದೆ ಎಂಬ ಮಾಹಿತಿ ಮೇಲೆ ಸಬ್-ಅರ್ಬನ್ ಪೊಲೀಸ್ ಠಾಣೆಯ ಪಿಐ ಸಂತೋಷ ಎಲ್.ಟಿ., ಸಿಬ್ಬಂದಿಗಳಾದ ಪುಂಡಲೀಕ, ವಿಠ್ಠಲ, ಮಂಜುನಾಥ ಹಾಗೂ ಫಿರೋಜ್ ಅವರು ದಾಳಿ ನಡೆಸಿ 6 ಜನರನ್ನು ಬಂಧಿಸಿದ್ದಾರೆ. ಕಿರಣ್ ಮಾಲಿಪಾಟೀಲ, ಚಿದಂಬರಾಯ ಪೂಜಾರಿ, ಸೂರ್ಯಕಾಂತ ಹಿಂಚಗೇರಿ, ದಶರಥ ಕಾಂಬಳೆ, ಓಂಕಾರ ಹೊಸಮನಿ ಮತ್ತು ಶಿವಕುಮಾರ ಜಮಾದಾರ ಎಂಬುವವರನ್ನು ಬಂಧಿಸಿ 5790 ರೂ.ನಗದು, 52 ಇಸ್ಪೀಟ್ ಎಲೆಗಳನ್ನು ಜಪ್ತಿ ಮಾಡಿದ್ದಾರೆ. ಸಬ್-ಅರ್ಬನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

---

## ರಸ್ತೆ ನಿರ್ಮಿಸಲು ಆಗ್ರಹ

• ಉದಯವಾಹಿನಿ ಕಾಳಗಿ

ಪಟ್ಟಣದ ಹೊರವಲಯ ಕರಿ ಕಟ್ಟಿ ಏರಿಯಾದಲ್ಲಿ ಹಣಾದಿಗಾಗಿ ಹಲವು ಬಾರಿ ಮನವಿ ಕೊಟ್ಟರು ಕ್ಯಾರೆ ಎನ್ನದ ಅಧಿಕಾರಿಗಳು ಈಗ ಉತ್ತಮ ಮಳೆಯಾದ್ರು ಉಳುಮೆ ಮಾಡಲು ರಸ್ತೆ ಇಲ್ಲದೆ ಹೋಗಲು ಆಗುತ್ತಿಲ್ಲಾ ಎಂದು ರೈತರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಒಂದು ಪಕ್ಕದಲ್ಲಿ ಗದ್ದೆ ಇನ್ನೊಂದಡೆ ಹಳ್ಳವಿದೆ ಮಧ್ಯದಲ್ಲಿ ಹಣಾದಿ ಇದ್ದು ಇದನ್ನು ಸರಿ ಪಡಿಸಿ ಕೊಟ್ಟರೆ ಸೂಮಾರು 500 ರಿಂದ 600 ಎಕರೆಗಳಷ್ಟು ಭೂಮಿ ಉಳುಮೆ ಮಾಡಲು ಸಹಾಯವಾಗುತ್ತದೆ ಎಂದು ರೈತರು ಹಲವು ಬಾರಿ ಜಿಲ್ಲಾಧಿಕಾರಿ ಮತ್ತು ತಹಶಿಲ್ದಾರ ರವರಿಗೆ ಮನವಿ ಪತ್ರ ಕೊಟ್ಟುರು ಸ್ಪಂದಿಸುತ್ತಿಲ್ಲ ಇದರಿಂದಾಗಿ ಹಲವಾರು ರೈತರು ತಮ್ಮ ಹೊಲ ಗದ್ದೆಗಳಿಗೆ ಹೊಗೂ ರಸ್ತೆಗೆ ಮುಳ್ಳು ಕಂಠಿ ಬೆಳೆದಿದ್ದು ತಮ್ಮ ಹೊಲಗಳಿಗೆ ಹೋಗಲು ಪರದಾಡಿದ ದೃಶ್ಯ ಕಂಡು ಹಲವು ರೈತರು ಸರಿಯಾದ ಸಮಯಕ್ಕೆ ಅಧಿಕಾರಿಗಳು ಕೆಲಸ ಮಾಡದಿದ್ದರೆ ಸಂಬಂಧಸಿದ ಕಛೇರಿಗೆ ಮುತ್ತಿಗೆ ಹಾಕಲಾಗುವುದು ಎಂದು ರೈತರು ತಿಳಿಸಿದರು.



ಉದಯವಾಹಿನಿ ಚಿತ್ರ

ಈ ಸಂದರ್ಭದಲ್ಲಿ ಬಲರಾಮ ವಲ್ಲ್ಯಾಪುರೆ, ರೇವಣಸಿದ್ದ ಪೂಜಾರಿ ಸೂಗುರ,ಸುನೀಲ್ ರಾಜಾಪೂರ, ರಾಜಕುಮಾರ ರಾಸೂರ ಇದ್ದರು.

---

## ರಾಜ್ಯ ನಾಟಕ ಬರಹಗಾರರ ಸಂಘದ ರಾಜ್ಯಾಧ್ಯಕ್ಷರಾಗಿ ಶಂಕರಜೀ ಹೂವಿನಹಿಪ್ಪರಗಿ ಅವಿರೋಧ ಆಯ್ಕೆ

• ಉದಯವಾಹಿನಿ, ಚಿಂಚೋಳಿ

ಕರ್ನಾಟಕ ರಾಜ್ಯದ ನಾಟಕ ಬರಹಗಾರರ ಕವಿಗಳ ಸಂಘದ ಇಸಂಸ್ಥಾಪಕ ರಾಜ್ಯಾಧ್ಯಕ್ಷರಾಗಿ ಶಂಕರಜೀ ಹೂವಿನ ಹಿಪ್ಪರಗಿ ಅವಿರೋಧ ಆಯ್ಕೆಯಾಗಿದ್ದಾರೆ.

ಗದಗ ಜಿಲ್ಲೆಯಲ್ಲಿ ರಾಜ್ಯ ಬರಹಗಾರರು ಕವಿಗಳು ಹಮ್ಮಿಕೊಂಡ ಸಭೆಯಲ್ಲಿ ಸರ್ವ ಸದಸ್ಯರು ಒಮ್ಮತದ ನಿರ್ಣಯ ಪಡೆದು ಶಂಕರಜೀ ಅವರಿಗೆ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಸಮಿತಿಯ ಸದಸ್ಯರು ಘೋಷಿಸಿದ್ದಾರೆ. ಹಳ್ಳಿಯಿಂದ ಶಿಕ್ಷಣ ಪ್ರಾರಂಭಿಸಿ ತಾಲ್ಲೂಕಾ ಜಿಲ್ಲಾ ಮಟ್ಟದವರೆಗೆ ಶಿಕ್ಷಣ ಪಡೆದು ಕರ್ನಾಟಕದ ಹೆಮ್ಮೆಯ ನಾಟಕಕಾರ,ಕವಿ,ಕಲಾವಿದ, ಸಂಘಟನಾ ಚತುರ ಹಳ್ಳಿಯಲ್ಲಿ ಎಲೆಮರಿ ಕಾಯಿಯಂತಿರುವ ಸಾವಿರಾರು ಹವ್ಯಾಸಿ ಕಲಾವಿದರನ್ನು ಗುರುತಿಸಿ ಅಥವರಿಗೆ ಮುಖ್ಯವಾಹಿನಿಗೆ ತರುವ ಮೂಲಕ ಕಲಾವಿದರಲ್ಲಿ ಅವಕಾಶ ನೀಡಿ ತಾಲ್ಲೂಕು,ಜಿಲ್ಲೆ ರಾಜ್ಯಮಟ್ಟದಲ್ಲಿ ಅವಕಾಶ ನೀಡಿ ಹಲವಾರು ಕವಿ ಕಲಾವಿದರಿಗೆ ಪ್ರತಿ ವರ್ಷ ಪ್ರತಿಭೆಗೊಂದು ರಂಗ ವೇದಿಕೆಯೆಂಬ ವಿನೂತನ ಕಾರ್ಯಕ್ರಮ ಆಯೋಜಿಸಿ ರಂಗಸಿರಿ,ರಂಗಸುವರ್ಣ ಎಂಬ ಪ್ರಶಸ್ತಿ ಜೊತಗೆ ತಲಾ 5ಗ್ರಾಂ.ಚಿನ್ನ ನೀಡಿ ಗೌರವಿಸಿ



ಉದಯವಾಹಿನಿ ಚಿತ್ರ

**ಸರ್ವ ಸದಸ್ಯರು ಒಮ್ಮತದ ನಿರ್ಣಯ**

ರಂಗಭೂಮಿ ಕಲೆ ಉಳಿಸಿ ಬೆಳೆಸುವ ಕಾರ್ಯದಲ್ಲಿ ಶಂಕರಜೀ ಹೂವಿನಹಿಪ್ಪರಗಿ ತಲ್ಲಿನರಾಗಿ ಒಬ್ಬ ನಿಷ್ಠಾವಂತ ನಿಷ್ಕಾಲ್ಮಶ ಕವಿಗಳು 30ಕ್ಕಿಂತ ಹೆಚ್ಚು ನಾಟಕಗಳು ಬರೆದ ಬರಹಗಾರರಿಗೆ ಸರ್ವಾನುಮತದಿಂದ ಆಯ್ಕೆ ಮಾಡಿದ ಕರ್ನಾಟಕ ರಾಜ್ಯದ ಎಲ್ಲಾ ಕವಿಗಳು ಬರಹಗಾರರು ಆಯ್ಕೆ ಮಾಡಿದ್ದು, ನಾಟಕವೆಂಬ ಕಲೆ, ಕಲಾವಿದರಿಗೆ ಗುರುತಿಸುವ ಕೆಲಸ ಮಾಡಿ ನಾಟಕ ಜೀವಂತವಾಗಿ ಇಟ್ಟಿದ್ದು ಶಂಕರಜೀ ಎಂಬುವುದು ಗಮನದಲ್ಲಿಟ್ಟುಕೊಂಡು ಆಯ್ಕೆ ಮಾಡಲಾಗಿದೆ.

ಕರ್ನಾಟಕ ರಾಜ್ಯಾದ್ಯಂತ ಮುಖ್ಯವಾಹಿನಿಗೆ ಬರದೆ ಇರುವ ಹಲವಾರು ಕವಿಗಳನ್ನು ಗುರುತಿಸುವುದ ರೊಂದಿಗೆ ಸಂಘದ ಇನ್ನುಳಿದ ಸದಸ್ಯರ ಸಹಕಾರದೊಂದಿಗೆ ರಾಜ್ಯಾದ್ಯಂತ ಕವಿಗಳ ನೋವು ನಲಿವುಗಳಿಗೆ ದೂರು ದುಮ್ಮಾನಗಳಿಗೆ ಪರಿಹಾರ ದೊರಕಿಸುವ ಕಾರ್ಯಕ್ಕೆ ಮುಂದಾಗಲಿ,ಆರ್ಥಿಕವಾಗಿ ಸಂಕಷ್ಟದಲ್ಲಿರುವ ಕವಿವೃಂದಕ್ಕೆ ಸರ್ವ ಸದಸ್ಯರ ಸಹಕಾರದೊಂದಿಗೆ ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಎನ್ನುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿ ಸಕಲ ಕವಿಗಳ ಕಷ್ಟನಷ್ಟಗಳಿಗೆ ಸ್ಪಂದಿಸಿ ಸಾಮಾನವಾಗಿ ಜೋತೆಯಲ್ಲಿ ತೆಗೆದುಕೊಂಡು ಹೋಗುವ ಮಹತ್ತರವಾದ ಜವಾಬ್ಧಾರಿಯನ್ನು ರಾಜ್ಯದ ಬರಹಗಾರರು ನೀಡಿದ್ದಾರೆ. ಶಾಮರಾವ ಕೊರವಿ,ಜಗನ್ನಾಥ ಕಟ್ಟಿ,ಲಕ್ಷ್ಮಣ ಆವುಂಟಿ, ವೀರಣ್ಣ ಗಂಗಾಣಿ, ಶಿವರಾಜಪಾಟೀಲ ಗೋಣಿಗಿ, ಜಗದೀಶಪಾಟೀಲ, ಚಂದ್ರಶೇಟ್ಟಿ ಲಕಶೆಟ್ಟಿ, ಗೋಪಾಲ ಭಾಜೇಪಳ್ಳಿ,ಶಿವಕುಮಾರ ಹಿರೇಮಠ, ಪ್ರಶಾಂತ ಕಟ್ಟಿ, ಸಂತೋಷ ಖನ್ನಾ, ಶ್ರೀಧರ ವಗ್ಗಿ,ಅನೇಕರಿದ್ದರು.

---

## ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನ

• ಉದಯವಾಹಿನಿ, ಚಿತ್ರದುರ್ಗ

ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ ನಿಯಮಿತದಿಂದ 2025-2026ನೇ ಸಾಲಿಗೆ ವಿವಿಧ ಯೋಜನೆಯಡಿ ಸಾಲ ಸೌಲಭ್ಯಕ್ಕೆ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿದಾರರು ಕರ್ನಾಟಕ ರಾಜ್ಯದ ನಿವಾಸಿಗಳಾಗಿದ್ದು, ಸವಿತಾ ಮತ್ತು ಅದರ ಉಪ ಜಾತಿಗಳಿಗೆ ಸೇರಿರಬೇಕು. ಚಾಲ್ತಿಯಲ್ಲಿರುವ ಆದಾಯ ಮತ್ತು ಜಾತಿ ಪ್ರಮಾಣ ಪತ್ರ ಕಡ್ಡಾಯವಾಗಿರುತ್ತದೆ. ಆಸಕ್ತರು, ಸ್ವಯಂ ಉದ್ಯೋಗ ಸಾಲ, ಗಂಗಾ ಕಲ್ಯಾಣ, ಅರಿವು ಶೈಕ್ಷಣಿಕ ಸಾಲ, ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ವ್ಯಾಸಂಗಕ್ಕೆ ಆರ್ಥಿಕ ನೆರವು, ಸ್ವಯಂ ಉದ್ಯೋಗ ಸಾಲ, ಸ್ವಾವಲಂಭಿ ಸಾರಥಿ ಹಾಗೂ ಸ್ವಾತಂತ್ರ್ಯ ಅಮೃತ ಮಹೋತ್ಸವ ಮುನ್ನಡೆ ಯೋಜನೆಗೆ ಅರ್ಜಿ ಸಲ್ಲಿಸಬಹುದು. ಸ್ವಾತಂತ್ರ ಅಮೃತ ಮಹೋತ್ಸವ ಮುನ್ನಡೆ ಯೋಜನೆ https://www.kaushalkar.com ಜಾಲತಾಣ ಹಾಗೂ ಉಳಿದ ಯೋಜನೆಗಳಿಗೆ ಸೇವಾಸಿಂಧು ತಂತ್ರಾಂಶ ಪೋರ್ಟ್ https://sevasindhu.karnataka.gov. ಗ್ರಾಮ ಒನ್, ಬೆಂಗಳೂರು ಒನ್, ಕರ್ನಾಟಕ ಒನ್ ಸೇವಾ ಕೇಂದ್ರಗಳಲ್ಲಿ ಆನ್‍ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಜೂನ್ 30 ಕೊನೆಯ ದಿನವಾಗಿದೆ.

ಯೋಜನೆಗಳ ಮಾರ್ಗಸೂಚಿ, ಅಗತ್ಯವಿರುವ ಶೈಕ್ಷಣಿಕ ಅರ್ಹತೆ, ವಯೋಮಾನ, ಕುಟುಂಬ ಆದಾಯಮಿತಿ, ಸಹಾಯಧನ ಸೇರಿದಂತೆ ಇತರೆ ಮಾಹಿತಿಗಾಗಿ ನಿಗಮದ ವೆಬ್‍ಸೈಟ್ https://kssd.karnataka.gov.in ಭೇಟಿ ನೀಡಬಹುದು. ದೂರವಾಣಿ ಸಂಖ್ಯೆ 080-22374832, 8050770004, 8050770005 ಗೆ ಕರೆ ಮಾಡಬಹುದು ಎಂದು ಜಿಲ್ಲಾ ವ್ಯವಸ್ಥಾಪಕಿ ಹೆಚ್.ಶಿಲ್ಪಾ ತಿಳಿಸಿದ್ದಾರೆ.

---

## ನಿರುದ್ಯೋಗಿ ಮಹಿಳೆಯರಿಗೆ ಹೊಲಿಗೆ ತರಬೇತಿ ಪಡೆದವರಿಗೆ ಪ್ರಮಾಣ ಪತ್ರ ವಿತರಣೆ

• ಉದಯವಾಹಿನಿ ಶಹಾಪುರ

ರಾಜ್ಯ ಸರಕಾರ ಮಹಿಳೆಯರ ಸ್ವಾ-ವಲಂಬಿ ಬದುಕು ನಡೆಸಲು ಇಂತ ತರಬೇತಿ ಕಾರ್ಯಕ್ರಮಗಳು ತುಂಬಾ ಸಹಕಾರಿಯಾಗಿವೆ, ಇಂತಹ ತರಬೇತಿಯಲ್ಲಿ ಪರಿಪೂರ್ಣವಾಗಿ ಭಾಗವಹಿಸಿದಾಗ ನೈಪುಣ್ಯತೆ ಸಿಗುತ್ತದೆ ಎಂದು ಪೌರಾಯುಕ್ತರಾದ ಜೀವನ ಕಟ್ಟಿಮನಿ ಅವರು ಅಭಿಪ್ರಾಯಪಟ್ಟರು. ನಗರ ಸಭೆ ಶಹಾಪುರ ಹಾಗು ಭಾರತಾಂಬೆ ಶಿಕ್ಷಣ ಮತ್ತು ಗ್ರಾಮೀಣಭಿವೃದ್ಧಿ ಸಂಸ್ಥೆ (ರಿ) ರವರ ಸಂಯುಕ್ತಾಶ್ರಯದಲ್ಲಿ 2024-25ನೇ ಸಾಲಿನ ಎಸ್. ಎಫ್. ಸಿ. ಮುಕ್ತ ನಿಧಿ ಅನುದಾನಡದಿಯಲ್ಲಿ ನಿರುದ್ಯೋಗಿ ಮಹಿಳೆಯರಿಗೆ ಹೊಲಿಗೆ ತರಬೇತಿ ಪಡೆದವರಿಗೆ ಪ್ರಮಾಣ ಪತ್ರ ವಿತರಿಸುವ ಕಾರ್ಯಕ್ರಮದಲ್ಲಿ ನಿರುಣಿಸಿ ಉದ್ಘಾಟಿಸಿ ಅವರು ಮಾತನಾಡಿದರು.

**ಮಹಿಳೆಯರ ಸ್ವಾ-ವಲಂಬಿ ಬದುಕು ನಡೆಸಲು ಇಂತಹ ತರಬೇತಿ ಕಾರ್ಯಕ್ರಮಗಳು ತುಂಬಾ ಸಹಕಾರಿ: ಪೌರಾಯುಕ್ತ ಜೀವನ ಕಟ್ಟಿಮನಿ**



ಉದಯವಾಹಿನಿ ಚಿತ್ರ

ಮುಖ್ಯ ಅಥಿತಿಗಳಾಗಿ ಸಭಾಗವಹಿಸಿದ ನಗರ ಸಭೆಯ ಅಭಿಯಾನ ವ್ಯವಸ್ಥಾಪಕರಾದ ಶ್ರೀ ಗುರು ತಳವಾರ ಮಾತನಾಡಿ ತರಬೇತಿ ಕಲಿತು ಸಮಯ ವ್ಯರ್ಥ ಮಾಡದೆ ಸ್ವಯಂ ಉದ್ಯೋಗ ಮಾಡಲು ಸಲಹೆ ನೀಡಿದರು. ಈ ಕಾರ್ಯಕ್ರಮದಲ್ಲಿ ನಗರ ಸಭೆಯ ಅಧಿಕಾರಿಯಾದ ಶರಣಬಸವ ಶೆಟ್ಟಿಕೇರಾ, ಮಾಸ್ಟರ್ ಟ್ರೈನರ್ ಆದ ಉಮಾ ಹಿರೇಮಠ, ಸುಮಿತ್ರಾ ಮತ್ತು ತರಬೇತಿದಾರರು ಭಾಗವಹಿಸಿದ್ದರು .

---

● ಶತಮಾನದ ಭೀಮಾ ಸೇತುವೆಗಿಲ್ಲ ಸಂರಕ್ಷಣೆ ಭಾಗ್ಯ, ಜಿಲ್ಲಾಡಳಿತ ವಿರುದ್ಧ ಉಮೇಶ ಕೆ. ಮುದ್ನಾಳ ಆಕ್ರೋಶ

# ನಿಜಾಮರ ಕಾಲದಲ್ಲಿ ನಿರ್ಮಿಸಿದ ಸೇತುವೆ ಕುಸಿಯುವ ಭೀತಿ: ಭಯದಲ್ಲಿ ಜನತೆ

• ಉದಯವಾಹಿನಿ ಯಾದಗಿರಿ

ಹೊರ ವಲಯದಲ್ಲಿರುವ ಭೀಮಾ ಸೇತುವೆ ಎಡ ಮತ್ತು ಬಲಭಾಗದಲ್ಲಿ ಗಿಡಗಂಟಿಗಳು ಬೆಳೆದಿದ್ದರೂ ಜಿಲ್ಲಾಡಳಿತ ವಿರುದ್ಧ ವಾಹನ ಸವಾರರು ವ್ಯಾಪಕ ಆಕ್ರೋಶ ವ್ಯಕ್ತವಾಗುತ್ತಿದೆ ಎಂದು ಅಖಿಲ ಭಾರತೀಯ ಕೋಲಿ ಸಮಾಜ ಹಾಗೂ ಸಾಮಾಜಿಕ ಹೋರಾಟಗಾರ ಉಮೇಶ ಮುದ್ನಾಳ ರವರ ಆಕ್ರೋಶ ವ್ಯಕ್ತಪಡಿಸಿದರು.

ಭೀಮಾನದಿ ಸೇತುವ ಉಭಯ ಜಿಲ್ಲೆಯ ಜನತೆಗೆ ವಂಚಿಸುತ್ತಿದೆ. ಇದನ್ನು ಪೂರ್ಣ ಪ್ರಮಾಣದಲ್ಲಿ ಕಡಿಯುವಂತಹ ಕೆಲಸ ಮಾಡುತ್ತಿಲ್ಲ. ಬರೀ ರೆಂಬೆ ಕೊಂಬೆ ಚಿಗುರೊಡೆದು ಬೆಳೆಯುತ್ತಿದೆ. ಆದರೆ, ಮರಗಳ ಬೇರುಗಳನ್ನು ನಾಶ ಮಾಡಲು ಕೆಮಿಕಲ್ ಹಾಕಬೇಕಿದೆ. ಇದನ್ನು ಅಧಿಕಾರಿಗಳು ಮಾಡುತ್ತಿಲ್ಲ.

ಇದಕ್ಕೂ ತಮಗೂ ಯಾವುದೇ ರೀತಿಯಿಂದ ಸಂಬಂಧವೇ 'ಇಲ್ಲ ಎಂಬಂತೆ ವರ್ತಿಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.





ಉದಯವಾಹಿನಿ ಚಿತ್ರ

> **ಗಟ್ಟಿಮುಟ್ಟಾದ ಸೇತುವೆ:** ಈ ಸೇತುವೆ ಬ್ರಿಟಿಷರ ಕಾಲದಲ್ಲಿ ನಿರ್ಮಾಣವಾಗಿದೆ. ತುಂಬಾ ಗುಣಮಟ್ಟದಿಂದ ಕೂಡಿದೆ. ಇಷ್ಟೊಂದು ಗುಣಮಟ್ಟದ ಸೇತುವೆ ಈಗಿನ ಕಾಲದಲ್ಲಿ ನಿರ್ಮಿಸಲು ಕೂಡ ಆಗುವುದಿಲ್ಲ. ಎಷ್ಟೋ ಸೇತುವೆಗಳು ಕಟ್ಟಿದ ಕೆಲ ವರ್ಷಗಳ ಬಳಿಕ ಬಿದ್ದಿರುವುದು ನೋಡಿದ್ದೇವೆ. ಹೀಗಾಗಿ ಶತಮಾನದ ಹಳೆಯ ಸೇತುವೆ ಉಳಿಸಿ ಕೊಳ್ಳಲು ಜಿಲ್ಲಾಡಳಿತ ಮುಂದಾಗಬೇಕಿದೆ.
> -ಉಮೇಶ ಕೆ. ಮುದ್ನಾಳ, ಸಾಮಾಜಿಕ ಹೋರಾಟಗಾರ



ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಕೇವಲ ಕಾಟಾಚಾರಕ್ಕೆ ಗಿಡಗಂಟಿಗಳ ಕೊಬೆಗಳ ಕತ್ತರಿಸಿದ್ದು ದುರದೃಷ್ಟಕರ ಸಂಗತಿ ಕೇವಲ ಪರ್ಸೆಂಟೇಜ್ ಆಸೆಗಾಗಿ ಕೆಲಸ ಮಾಡುವ ಅಧಿಕಾರಿಗಳಿಂದಾಗಿ ಸುಭದ್ರವಾಗಿರುವ ಸೇತುವೆ ಹಾಳಾಗುತ್ತಿದೆ ಎಂದು ಉಮೇಶ ಮುದ್ನಾಳ ಗಂಭೀರ ಆರೋಪವಾಗಿದೆ.

ಇದು ವಿಜಯಪುರ-ಹೈದರಾಬಾದ್ ಹೆದ್ದಾರಿಯಾಗಿದ್ದು ಇದರ ಮೇಲೆಯೇ ಜನಪ್ರತಿನಿಧಿಗಳು ಅಧಿಕಾರಿಗಳು ಸಂಚಾರ ಮಾಡುತ್ತಾರೆ ಆದರೆ ಬೇಜವಾಬ್ದಾರಿತನ ಎದ್ದು ಕಾಣುತ್ತಿದೆ. ಇನ್ನಾದರೂ ಜನಪ್ರತಿನಿಧಿಗಳು ಎಚ್ಚೆತ್ತುಕೊಳ್ಳುವಂತಹ ಕೆಲಸಮಾಡುವುದು ಅಗತ್ಯವಿದೆ. ಸೇತುವೆ ಮೇಲೆ ದಿನ ನಿತ್ಯ ಸಾವಿರಾರು ಭಾರಹೊತ್ತು ವಾಹನಗಳು ಸಂಚರಿಸುತ್ತವೆ. ಇದಲ್ಲದೇ ಜಿಲ್ಲೆಯ ಹಳೆಯ ಸ್ಮಾರಕವೂ ಆಗಿರುವ ಈ ಸೇತುವೆ ರಕ್ಷಣೆಗೆ ಜಿಲ್ಲಾಡಳಿತ ಕೂಡ ಧಾವಿಸುವುದು ಅಗತ್ಯವಿದೆ. ಏನಾದರೂ ಅವಘಡ ಸಂಭವಿಸುವ ಮುನ್ನವೇ ಇದನ್ನು ಸಂರಕ್ಷಣೆ ಮಾಡಲು ಮುಂದಾಗಬೇಕು.

**ಜಿಲ್ಲಾಡಳಿತ ವಿರುದ್ಧ ಆಕ್ರೋಶ**

**ಸಂಬಂಧಪಟ್ಟ ಅಧಿಕಾರಿಗಳು ಎಚ್ಚೆತ್ತುಕೊಳ್ಳಲಿ:** ಗಿಡಗಂಟಿಗಳ ರಂಬೆ ಕೊಂಬೆಗಳು ಬೆಳೆಯುತ್ತಿರುವ ಪರಿಣಾಮವಾಗಿ ಸೇತುವೆ ಬಿರುಕು ಮೂಡಲು ಕಾರಣವಾಗುತ್ತದೆ. ಅದರ ಬೇರು ಕೂಡ ಆಳಕ್ಕೆ ಇಳಿಯುತ್ತಿದೆ. ಹೀಗಾಗಿಯೇ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಎಚ್ಚೆತ್ತುಕೊಂಡು ಅಗತ್ಯ ಕ್ರಮಕೈಗೊಳ್ಳಬೇಕು ಎಂದರು.

ತುರ್ತಾಗಿ ಶೀಲಗೊಂಡ ಸ್ಥಳಗನ್ನು ಗುರಿತಿಸಿ ತಾತತ್ಕಾಲಿವಾಗಿ ದುರಸ್ಥಿಮಾಡಿ ಮುಂದಾಗುವ ಅವಗಡವನ್ನು ತಪ್ಪಿಸಿಲು ಜಿಲ್ಲಾಡಳಿತ ಮುಂದಾಗ ಬೇಕೆಂದು ಆಗ್ರಹಿಸಿದ್ದಾರೆ.

• ತೈಲ ನಿಕ್ಷೇಪ ಪತ್ತೆಯಾದರೆ ಭಾರತದ ಆರ್ಥಿಕತೆ 3.7 ಟ್ರಿಲಿಯನ್‌ನಿಂದ 20 ಟ್ರಿಲಿಯನ್‌ಗೆ ಏರಲಿದೆ

# ಇರಾನ್-ಇಸ್ರೇಲ್ ಸಂಘರ್ಷದ ನಡುವೆ ಭಾರತಕ್ಕೆ ಜಾಕ್‌ಪಾಟ್

**ಹೊಸದಿಲ್ಲಿ:** ಇರಾನ್ ಹಾಗೂ ಇಸ್ರೇಲ್ ಸಂಘರ್ಷದ ನಡುವೆ ಭಾರತಕ್ಕೆ ಒಂದು ಬಂಪರ್ ಸುದ್ದಿ ಸಿಕ್ಕಿದೆ. ದೇಶದ ವ್ಯಾಪ್ತಿಯಲ್ಲಿ ದೊಡ್ಡ ತೈಲ ನಿಕ್ಷೇಪದ ಹುಡುಕಾಟದಲ್ಲಿದ್ದ ಕೇಂದ್ರ ಸರ್ಕಾರಕ್ಕೆ ಗುಡ್ ನ್ಯೂಸ್ ಸಿಕ್ಕಿದೆ. ಅಂಡಮಾನ್ ಸಮುದ್ರದ ಆಳದಲ್ಲಿ ಒಂದು ಬೃಹತ್ ತೈಲ ನಿಕ್ಷೇಪ ಪತ್ತೆಯಾಗುವ ನಿರೀಕ್ಷೆಯಲ್ಲಿ ಕೇಂದ್ರ ಸರ್ಕಾರ ಇದ್ದು, ಇದು ನಿಜವಾದ್ರೆ ಭಾರತದಲ್ಲಿ ಹೊಸ ಆರ್ಥಿಕ ಕ್ರಾಂತಿಗೆ ನಾಂದಿಯಾಡಲಿದೆ. ಒಂದು

- ಅಂಡಮಾನ್ ಸಮುದ್ರದಲ್ಲಿ ತೈಲ ನಿಕ್ಷೇಪ, ಪೆಟ್ರೋಲ್, ಡೀಸೆಲ್ ಬೆಲೆ ಭಾರೀ ಇಳಿಕೆ
- ಅಂಡಮಾನ್ ಸಮುದ್ರದಲ್ಲಿ ಬೃಹತ್ ತೈಲ ನಿಕ್ಷೇಪ ಪತ್ತೆಯಾಗುವ ನಿರೀಕ್ಷೆಯಲ್ಲಿದೆ ಭಾರತ.
- ಈ ಶೋಧನೆಯನ್ನು ದಕ್ಷಿಣ ಅಮೆರಿಕದ 'ಗಯಾನಾ' ದೇಶದ ಬೃಹತ್ ತೈಲ ನಿಕ್ಷೇಪಕ್ಕೆ ಹೋಲಿಸಲಾಗಿದೆ.
- ತೈಲ ನಿಕ್ಷೇಪ ಪತ್ತೆಯಾದರೆ ಭಾರತದ ಆರ್ಥಿಕತೆ 3.7 ಟ್ರಿಲಿಯನ್‌ನಿಂದ 20 ಟ್ರಿಲಿಯನ್‌ಗೆ ಏರಲಿದೆ ಎಂದು ಸಚಿವರ ಭರವಸೆ.

ಕ್ಷಣ ಯೋಚಿಸಿ.. ಇನ್ಮುಂದೆ ಭಾರತ ಪೆಟ್ರೋಲ್, ಡೀಸೆಲ್‌ಗಾಗಿ ಬೇರೆ ದೇಶಗಳನ್ನು ಅವಲಂಬಿಸದೆ, ಜಾಗತಿಕವಾಗಿ ಏನೇ ಯುದ್ಧ, ಸಂಘರ್ಷ ನಡೆದ್ರೂ ನಮ್ಮ ದೇಶದಲ್ಲಿ ಇಂಧನ ಬೆಲೆ ಸ್ಥಿರವಾಗಿದ್ದರೆ.. ಬಹಳ ಕಡಿಮೆ ರೇಟ್‌ನಲ್ಲಿ ಪೆಟ್ರೋಲ್, ಡೀಸೆಲ್ ಸಿಕ್ಕರೆ ನಮ್ಮ ದೇಶದ ಆರ್ಥಿಕತೆ ಹಾಗೂ ಜನರ ಉಳಿತಾಯ ಎಲ್ಲಿಗೋಗುತ್ತೆ ಅಂತಾ ಇದು ಕೇವಲ ಕನಸಲ್ಲ, ಶೀಘ್ರದಲ್ಲೇ ನನಸಾಗಬಹುದಾದ ಒಂದು ದೊಡ್ಡ ಸಾಧ್ಯತೆಯಾಗಿದೆ. ಅದಕ್ಕಾಗಿ ಕೇಂದ್ರ ಸರ್ಕಾರ ತೈಲ ನಿಕ್ಷೇಪವನ್ನು ಹುಡುಕುತ್ತಿದ್ದು, ಸದ್ಯಕ್ಕೆ ದೊಡ್ಡ ಮಟ್ಟದ ತೈಲ ನಿಕ್ಷೇಪ ಸಿಗುವ ನಿರೀಕ್ಷೆ ಸೃಷ್ಟಿಯಾಗಿದೆ.

ಹೌದು, ಪೆಟ್ರೋಲ್ ಮತ್ತು ಡಿಸೇಲ್‌ಗೆ ಭಾರತ ಸಂಪೂರ್ಣವಾಗಿ ಬೇರೆ ದೇಶಗಳನ್ನು ಅವಲಂಭಿಸಿದೆ. ಜಾಗತಿಕ ಮಟ್ಟದಲ್ಲಿ ಏನಾದ್ರೂ ಸಂಘರ್ಷಗಳು ನಡೆದರೆ, ಏನಾದ್ರೂ ಯುದ್ಧದ ಸನ್ನಿವೇಶ ಸೃಷ್ಟಿಯಾದರೆ ಭಾರತದಲ್ಲೂ ಕೂಡ ಕಚ್ಚಾ ತೈಲಕ್ಕೆ ಕೊರತೆ ಉಂಟಾಗಲಿದೆ.

ಜೊತೆಗೆ ಬೆಲೆ ಕೂಡ ಭಾರೀ ಪ್ರಮಾಣದಲ್ಲಿ ಏರಿಕೆಯಾಗಲಿದೆ. ಈ ಹೊತ್ತಲ್ಲಿ ಭಾರತಕ್ಕೆ ದೊಡ್ಡ ಗುಡ್ ನ್ಯೂಸ್ ಸಿಕ್ಕಿದೆ. ಅಂಡಮಾನ್ ಸಮುದ್ರದಲ್ಲಿ ಬೃಹತ್ ತೈಲ ನಿಕ್ಷೇಪವನ್ನು ಕಂಡುಹಿಡಿಯುವ ಹೊಸ್ತಿಲಲ್ಲಿದೆ. ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್‌ದೀಪ್ ಸಿಂಗ್ ಪುರಿ ಈ ಬಗ್ಗೆ ಹೇಳಿಕೆಯನ್ನು ನೀಡಿದ್ದು, ಭಾರತಕ್ಕೆ ಭರವಸೆಯನ್ನು ಮೂಡಿಸಿದೆ. ಅದು ಕೂಡ ಸಚಿವರು ಸಂಭಾವ್ಯ ನಿಕ್ಷೇಪವನ್ನು ದಕ್ಷಿಣ ಅಮೆರಿಕದ ಪುಟ್ಟ ದೇಶ ಗಯಾನಾದಲ್ಲಿ ಸಿಕ್ಕಿರುವ ಬೃಹತ್ ತೈಲ ನಿಕ್ಷೇಪಕ್ಕೆ ಹೋಲಿಸಿರುವುದು ಕುತೂಹಲ ಸೃಷ್ಟಿಸಿದೆ. ಹರ್‌ದೀಪ್ ಸಿಂಗ್ ಪುರಿ ಹೇಳಿದಂತೆ ತೈಲ ನಿಕ್ಷೇಪ ಸಿಕ್ಕರೆ ಭಾರತದ ಮಟ್ಟಿಗೆ ದೊಡ್ಡ ಗೇಮ್ ಚೇಂಜರ್ ಆಗಲಿರುವುದಂತೂ ಸತ್ಯ.

ಭಾಗಶಃ ಇಂಧನ ಹೊರಗಿನಿಂದಲೇ ಆಮದು

ಇದಕ್ಕೂ ಮುನ್ನ ನಾವು ಭಾರತದ ಇಂಧನ ಕ್ಷೇತ್ರದ ವಾಸ್ತವವನ್ನು ಅರ್ಥಮಾಡಿಕೊಳ್ಳೋಣ. ಭಾರತ ಜಗತ್ತಿನ ಅತಿದೊಡ್ಡ ಇಂಧನ ಗ್ರಾಹಕರಲ್ಲಿ ಒಂದಾಗಿದೆ.

ಆದರೆ, ನಮ್ಮ ಅಗತ್ಯದ ಸುಮಾರು ಶೇ.85 ರಿಂದ ಶೇ.90ರಷ್ಟು ಕಚ್ಚಾ ತೈಲವನ್ನು ನಾವು ವಿದೇಶಗಳಿಂದ ಆಮದು ಮಾಡಿಕೊಳ್ಳುತ್ತೇವೆ. ಅಂದರೆ, ನಮ್ಮ ವಾಹನಗಳು ಓಡಲು, ನಮ್ಮ ಕಾರ್ಖಾನೆಗಳು ನಡೆಯಲು ನಾವು ಹೆಚ್ಚಾಗಿ ಸೌದಿ ಅರೇಬಿಯಾ, ಇರಾಕ್, ರಷ್ಯಾದಂತಹ ದೇಶಗಳನ್ನು ಅವಲಂಬಿಸಿದ್ದೇವೆ. ಕಳೆದ ಆರ್ಥಿಕ ವರ್ಷದಲ್ಲಿ ಅಂದ್ರೇ 2023-24ರಲ್ಲಿ ಭಾರತ ಬರೋಬ್ಬರಿ 232 ಮಿಲಿಯನ್ ಮೆಟ್ರಿಕ್ ಟನ್ ಕಚ್ಚಾ ತೈಲವನ್ನು ಆಮದು ಮಾಡಿಕೊಂಡಿದೆ.

ಇದಕ್ಕಾಗಿ ನಾವು ಖರ್ಚು ಮಾಡಿರುವ ಹಣ ಸುಮಾರು 132 ಬಿಲಿಯನ್ ಡಾಲರ್. ಭಾರತದ ರೂಪಾಯಿಗೆ ಕನ್ವರ್ಟ್ ಮಾಡಿದರೆ ಇದು 11 ಲಕ್ಷ ಕೋಟಿ ರೂಪಾಯಿ ಆಗುತ್ತದೆ. ಅಂದ್ರೇ ಪ್ರತಿ ವರ್ಷ ಇಷ್ಟೊಂದು ಹಣ ನಮ್ಮ ದೇಶದಿಂದ ಹೊರಗೆ ಹೋಗುತ್ತಿದೆ.

ಅದರಲ್ಲೂ ಪ್ರಮುಖ ಸಮಸ್ಯೆ ಏನೆಂದರೆ ಜಾಗತಿಕ ಮಾರುಕಟ್ಟೆಯಲ್ಲಿ ತೈಲ ಬೆಲೆ ಏರಿಳಿತವಾದರೆ, ಅದರ ನೇರ ಪರಿಣಾಮ ನಮ್ಮ ಮೇಲೆ ಬೀರುತ್ತದೆ.


ವಿದೇಶಗಳಲ್ಲಿ ರಾಜಕೀಯ ಅಸ್ಥಿರತೆ ಉಂಟಾದರೆ ಅಥವಾ ತೈಲ ಉತ್ಪಾದಕ ದೇಶಗಳು ಉತ್ಪಾದನೆ ಕಡಿಮೆ ಮಾಡಿದರೆ, ತಕ್ಷಣವೇ ನಮ್ಮ ದೇಶದಲ್ಲಿ ಪೆಟ್ರೋಲ್-ಡೀಸೆಲ್ ಬೆಲೆ ಗಗನಕ್ಕೇರುತ್ತದೆ.

ಇದು ಕೇವಲ ನಮ್ಮ ವಾಹನ ಸವಾರರ ಜೇಬಿಗೆ ಕತ್ತರಿ ಹಾಕುವುದಿಲ್ಲ, ಸಾರಿಗೆ ವೆಚ್ಚ ಹೆಚ್ಚಾಗಿ ಎಲ್ಲಾ ಅಗತ್ಯ ವಸ್ತುಗಳ ಬೆಲೆಯೂ ಏರುತ್ತದೆ. ಇದನ್ನೇ ನಾವು ಹಣದುಬ್ಬರ ಅಂತೀವಿ.

ಈ ಎಲ್ಲಾ ಸವಾಲುಗಳ ನಡುವೆ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್‌ದೀಪ್ ಸಿಂಗ್ ಪುರಿ ಅವರು ಒಂದು ಭರವಸೆಯ ಮಾತನಾಡಿದ್ದಾರೆ. ಅಂಡಮಾನ್ ಸಮುದ್ರದಲ್ಲಿ ತೈಲ ನಿಕ್ಷೇಪ ಸಿಗುವ ನಿರೀಕ್ಷೆ ಇದೆ. ಅದರಲ್ಲೂ ಸಂಭಾವ್ಯ ನಿಕ್ಷೇಪವನ್ನು ದಕ್ಷಿಣ ಅಮೆರಿಕಾದ ಪುಟ್ಟ ದೇಶವಾದ 'ಗಯಾನಾ'ದಲ್ಲಿ ಸಿಕ್ಕಿರುವ ಬೃಹತ್ ತೈಲ ನಿಕ್ಷೇಪಕ್ಕೆ ಹೋಲಿಸಿದ್ದಾರೆ.

### ಭರದಿಂದ ಸಾಗಿದೆ ತೈಲ ನಿಕ್ಷೇಪದ ಶೋಧ ಕಾರ್ಯ

**ಸಂಭಾವ್ಯ ತೈಲ ನಿಕ್ಷೇಪವನ್ನು ಕಂಡುಹಿಡಿಯಲು ಈಗಾಗಲೇ ಕೆಲಸಗಳು ಭರದಿಂದ ಸಾಗಿದೆ. ಸರ್ಕಾರಿ ಸ್ವಾಮ್ಯದ ಕಂಪನಿಗಳಾದ ಒಎನ್‌ಜಿಸಿ ಅಂದ್ರೇ ಆಯಿಲ್ ಅಂಡ್ ನ್ಯಾಚುರಲ್ ಗ್ಯಾಸ್ ಕಾರ್ಪೊರೇಷನ್ ಮತ್ತು ಆಯಿಲ್ ಇಂಡಿಯಾ ಲಿಮಿಟೆಡ್ ಅಂಡಮಾನ್‌ನ ಆಳ ಸಮುದ್ರದಲ್ಲಿ ಈಗಾಗಲೇ ಸಮೀಕ್ಷೆಗಳನ್ನು ನಡೆಸುತ್ತಿವೆ. ಸರ್ಕಾರದ ಓಪನ್ ಏಕರೇಜ್ ಲೈಸೆನ್ಸಿಂಗ್ ಪಾಲಿಸಿ ಅಂದ್ರೇ ಒಎಎಲ್‌ಪಿ ಅಡಿಯಲ್ಲಿ ಲಕ್ಷಾಂತರ ಚದರ ಕಿಲೋಮೀಟರ್ ಪ್ರದೇಶವನ್ನು ಸಂಶೋಧನೆಗೆ ತೆರೆದಿಡಲಾಗಿದೆ. ಸದ್ಯಕ್ಕೆ, ಭಾರತದ ಇಂಧನದ ಬೇಡಿಕೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇದೆ. 2030ರ ವೇಳೆಗೆ ನಮ್ಮ ತೈಲದ ಬೇಡಿಕೆ ಈಗಿಗಿಂತ ಶೇ.40ರಷ್ಟು ಹೆಚ್ಚಾಗುವ ಅಂದಾಜಿದೆ. ಇಂತಹ ನಿರ್ಣಾಯಕ ಸಮಯದಲ್ಲಿ, ಅಂಡಮಾನ್‌ನ ಈ ಸಂಭಾವ್ಯ ಶೋಧನೆಯು ಭಾರತದ ಪಾಲಿಗೆ ಒಂದು ವರದಾನವೇ ಸರಿ ಎಂದು ಹೇಳಲಾಗುತ್ತಿದೆ.**




### ಅಂಡಮಾನ್‌ನಲ್ಲಿ ತೈಲ ನಿಕ್ಷೇಪ

**ಅಂಡಮಾನ್‌ನಲ್ಲಿ ಸಂಭಾವ್ಯ ತೈಲ ನಿಕ್ಷೇಪ ಸಿಕ್ಕರೆ ಭಾರತಕ್ಕೆ ಆಗುವ ಪ್ರಮುಖ ಲಾಭಗಳೇನು ಎಂಬುದನ್ನು ಗಮನಿಸಿದರೆ, ಮೊದಲ ಮತ್ತು ಅತಿದೊಡ್ಡ ಲಾಭವೆಂದರೆ ಆಮದು ಪ್ರಮಾಣ ಕಡಿಮೆಯಾಗಿ, ಬೇರೆ ದೇಶಗಳ ಮೇಲೆ ಅವಲಂಬನೆ ಕಡಿಮೆಯಾಗುತ್ತದೆ. ಇದು ಭಾರತಕ್ಕೆ 'ಇಂಧನ ಭದ್ರತೆ'ಯನ್ನು ನೀಡುತ್ತದೆ. ಜಾಗತಿಕ ಒತ್ತಡಗಳಿಗೆ ಮಣಿಯುವ ಅಗತ್ಯ ಭಾರತಕ್ಕೆ ಬೀಳಲ್ಲ. ಇದರ ಜೊತೆ ಪ್ರತಿ ವರ್ಷ ಲಕ್ಷಾಂತರ ಕೋಟಿ ರೂಪಾಯಿ ವಿದೇಶಕ್ಕೆ ಹರಿದು ಹೋಗುವುದು ತಪ್ಪುತ್ತದೆ. ಇದು ನಮ್ಮ ವ್ಯಾಪಾರ ಕೊರತೆಯನ್ನು ಕಡಿಮೆ ಮಾಡಿ, ಭಾರತೀಯ ರೂಪಾಯಿಯ ಮೌಲ್ಯವನ್ನು ಬಲಪಡಿಸುತ್ತದೆ. ದೇಶದ ಆರ್ಥಿಕತೆ ವೇಗವಾಗಿ ಬೆಳೆಯಲು ಇದು ಇಂಧನದಂತೆ ಕೆಲಸ ಮಾಡುತ್ತದೆ.**

## ರೈಲಿನ ಕಸದ ಬುಟ್ಟಿಗೆ ಬೀಡಿ ಎಸೆದ ವ್ಯಕ್ತಿ
## ಪುಣೆ-ದೌಂಡ್ ರೈಲಿನಲ್ಲಿ ಬೆಂಕಿ



### ಮಧ್ಯಪ್ರದೇಶದ 55 ವರ್ಷದ ವ್ಯಕ್ತಿಯ ಬಂಧನ

**ಪುಣೆ:** ವ್ಯಕ್ತಿಯೋರ್ವ ಧೂಮಪಾನ ಮಾಡಿದ ನಂತರ ಬೀಡೀಯನ್ನು ರೈಲಿನ ಕಸದ ಬುಟ್ಟಿಗೆ ಎಸೆದ ಪರಿಣಾಮ ಪುಣೆ- ದೌಂಡ್ ನಡುವೆ ಸಂಚರಿಸುತ್ತಿದ್ದ ರೈಲಿನಲ್ಲಿ ಬೆಂಕಿ ಕಾಣಿಸಿಕೊಂಡಿದೆ.

ಘಟನೆಗೆ ಸಂಬಂಧಿಸಿದಂತೆ ಮಧ್ಯಪ್ರದೇಶದ 55 ವರ್ಷದ ವ್ಯಕ್ತಿಯನ್ನು ಬಂಧಿಸಲಾಗಿದೆ. ಸೋಮವಾರ ಬೆಳಿಗ್ಗೆ ಪುಣೆಯಿಂದ ದೌಂಡ್‌ಗೆ ಹೋಗುತ್ತಿದ್ದ ಡೀಸೆಲ್ ಎಲೆಕ್ಟ್ರಿಕ್ ಮಲ್ಟಿಪಲ್ ಯುನಿಟ್ (ಡೆಮು) ರೈಲಿನಲ್ಲಿ ಸಣ್ಣ ಬೆಂಕಿ ಕಾಣಿಸಿಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬೆಂಕಿಯನ್ನು ತ್ವರಿತವಾಗಿ ನಂದಿಸಲಾಯಿತು ಮತ್ತು ಘಟನೆಯಲ್ಲಿ ಯಾರಿಗೂ ಗಾಯಗಳಾಗಿಲ್ಲ ಎಂದು ಅವರು ತಿಳಿಸಿದ್ದಾರೆ. ದೌಂಡ್ ರೈಲ್ವೆ ಪೊಲೀಸ್ ಠಾಣೆಯ ಅಧಿಕಾರಿಯೊಬ್ಬರು ತಿಳಿಸಿರುವ ಪ್ರಕಾರ, ಬೆಳಿಗ್ಗೆ 8 ಗಂಟೆಗೆ ಚಲಿಸುವ ದೌಂಡ್-ಪುಣೆ ಷಟಲ್ ರೈಲಿನ ಶೌಚಾಲಯದಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಪ್ರಯಾಣಿಕರಲ್ಲಿ ಭೀತಿ ಉಂಟು ಮಾಡಿದೆ. ಕಸದ ಬುಟ್ಟಿಯಲ್ಲಿ ಕಾಗದಗಳು ಮತ್ತು ಇತರ ಕಸವಿತ್ತು, ಅದು ಬೆಂಕಿಯನ್ನು ಹೊತ್ತಿಕೊಂಡಿತು.

ಇದರ ಪರಿಣಾಮವಾಗಿ ಶೌಚಾಲಯದಿಂದ ಹೊಗೆ ಬರಲು ಕಾರಣವಾಯಿತು ಮತ್ತು ಪ್ರಯಾಣಿಕರಲ್ಲಿ ಭಯಭೀತಿ ಉಂಟಾಯಿತು ಎಂದು ಅಧಿಕಾರಿ ಹೇಳಿದರು. ಆ ಕೋಚ್‌ನಲ್ಲಿ ಕೆಲವೇ ಪ್ರಯಾಣಿಕರಿದ್ದರು. ಬೆಂಕಿಯನ್ನು ಬೇಗನೆ ನಂದಿಸಲಾಯಿತು, ಮತ್ತು ಅದೃಷ್ಟವಶಾತ್, ಘಟನೆಯಲ್ಲಿ ಯಾರಿಗೂ ಗಾಯಗಳಾಗಿಲ್ಲ ಎಂದು ಅಧಿಕಾರಿ ಹೇಳಿದ್ದಾರೆ.

## ಮಸೀದಿಯಲ್ಲಿ ಸ್ವಿಮ್ಮಿಂಗ್ ಪೂಲ್, ಬಾತ್‌ಟಬ್: ಬೆಚ್ಚಿಬಿದ್ದ ಅಧಿಕಾರಿಗಳು

**ಅಹಮದಾಬಾದ್ :** ಗುಜರಾತ್‌ನ ಜಾಮ್‌ನಗರದಲ್ಲಿ ನಗರ ಸ್ಥಳೀಯ ಸಂಸ್ಥೆಯಿಂದ ಬೃಹತ್ ತೆರವು ಕಾರ್ಯಾಚರಣೆ ನಡೆಯುತ್ತಿದೆ. ಈ ವೇಳೆ ಅಧಿಕಾರಿಗಳೇ ಬೆಚ್ಚಿಬಿಳುವ ಸಂಗತಿಗಳು ಬೆಳಕಿಗೆ ಬಂದಿವೆ. ಅಕ್ರಮವಾಗಿ ನಿರ್ಮಿಸಲಾಗಿದ್ದ ಧಾರ್ಮಿಕ ಕೇಂದ್ರದೊಳಗೆ ಸ್ವಿಮ್ಮಿಂಗ್ ಪೂಲ್, ಅತ್ಯಾಧುನಿಕ ಬಾತ್‌ಟಬ್ ಹಾಗೂ ಅಮೃತಶಿಲೆ ಹಾಕಿರುವ ವಿಶಾಲವಾದ ದೊಡ್ಡ ದೊಡ್ಡ ಕೊಠಡಿಗಳು ಪತ್ತೆಯಾಗಿವೆ.

ಸುಮಾರು ಮನೆಗಳು ಸೇರಿ ಸುಮಾರು 300 ಕಟ್ಟಡಗಳನ್ನು ನೆಲಸಮಗೊಳಿಸಲಾಗಿದೆ. ಕಟ್ಟಡಗಳಲ್ಲಿರುವ ಐಷಾರಾಮಿ ಸೌಲಭ್ಯಗಳು ಪತ್ತೆಯಾದ ಬೆನ್ನಲ್ಲೇ ಮಾಲೀಕರು ನಾಪತ್ತೆಯಾಗಿದ್ದು, ಅವರಿಗಾಗಿ ಪೊಲೀಸರು ಶೋಧ ನಡೆಸಿದ್ದಾರೆ.

ಹೌದು, ಜಾಮ್‌ನಗರದ ಬಚ್ಚು ನಗರ ಬಡಾವಣೆಯಲ್ಲಿ ರಂಗಮತಿ ನದಿಪಾತ್ರವನ್ನು ಅತಿಕ್ರಮಿಸಿ ನಿರ್ಮಾಣವಾಗಿದ್ದ ಕಟ್ಟಡಗಳನ್ನು ಅಧಿಕಾರಿಗಳು ನೆಲಸಮಗೊಳಿಸಿದ್ದಾರೆ. ನದಿಯನ್ನು ಅತಿಕ್ರಮಣ ಮಾಡಿ ಸುಮಾರು 20 ರಿಂದ 25 ವರ್ಷಗಳ ಹಿಂದೆ ಈ ಕಟ್ಟಡಗಳನ್ನು ನಿರ್ಮಿಸಲಾಗಿತ್ತು. ಇವುಗಳಲ್ಲಿ 294 ಮನೆಗಳು ಮತ್ತು ನಾಲ್ಕು ಧಾರ್ಮಿಕ ಕೇಂದ್ರಗಳು ಸೇರಿದ್ದವು. ಈ ಧಾರ್ಮಿಕ ಕೇಂದ್ರಗಳನ್ನು ದರ್ಗಾ ಅಥವಾ ಮಸೀದಿಗಳು ಹೇಳಲಾಗಿದೆ. ಈ ಒತ್ತುವರಿಯ ಕಾರಣಕ್ಕೆ ರಂಗಮತಿ ನದಿಯ ಸಹಜ ಹರಿವಿಗೆ ಅಡಚಣೆ ಉಂಟಾಗಿದ್ದು, ಪ್ರತಿ ಮಳೆಗಾಲದಲ್ಲೂ ನಗರದ ಹಲವು ಪ್ರದೇಶಗಳು ಪ್ರವಾಹಕ್ಕೆ ತುತ್ತಾಗುತ್ತಿವೆ. ಈ ಹಿನ್ನೆಲೆ ಸಮಸ್ಯೆಯನ್ನು ಬಗೆಹರಿಸಲು ಜಾಮ್‌ನಗರ ಪಾಲಿಕೆ ಬೃಹತ್ ತೆರವು ಕಾರ್ಯಾಚರಣೆ ಆರಂಭಿಸಿದೆ. ಈ ವೇಳೆ ಕಟ್ಟಡಗಳನ್ನು ನೋಡಿ ಪಾಲಿಕೆ ಅಧಿಕಾರಿಗಳು ಬೆಚ್ಚಿಬಿದ್ದಿದ್ದಾರೆ.

ಇನ್ನೊಂದು ಪ್ರಮುಖ ಅಚ್ಚರಿ ಸಂಗತಿಯೆಂದರೆ ಇಲ್ಲಿ ಹಣವನ್ನು ಸ್ವೀಕರಿಸಲಾಗುವುದಿಲ್ಲ ಎಂಬ ಬೋರ್ಡ್ ಕೂಡ ಇದೇ ಸ್ಥಳದಲ್ಲಿ ಕಂಡುಬಂದಿದೆ. ಹಾಗಿದ್ದರೆ ಇಷ್ಟೊಂದು ಐಷಾರಾಮಿ ಕಟ್ಟಡ ನಿರ್ಮಾಣಕ್ಕೆ ಹಣ ಎಲ್ಲಿಂದ ಬಂತು ಎಂಬ ಪ್ರಶ್ನೆ ಅಧಿಕಾರಿಗಳನ್ನು ಕಾಡುತ್ತಿದೆ.

ಕಟ್ಟಡದ ಮಾಲೀಕರಿಗಾ ಪೊಲೀಸರು ಶೋಧ ನಡೆಸುತ್ತಿದ್ದಾರೆ.12 ಜೆಸಿಬಿ, ಮೂರು ಹಿಟಾಚಿ, 13 ಟ್ರ್ಯಾಕ್ಟರ್ ಈ ಬೃಹತ್ ತೆರವು ಕಾರ್ಯಾಚರಣೆಗಾಗಿ ಜಾಮ್‌ನಗರ ಪಾಲಿಕೆ 12 ಜೆಸಿಬಿ, 3 ಹಿಟಾಚಿ ಯಂತ್ರ ಮತ್ತು 13 ಟ್ರ್ಯಾಕ್ಟರ್‌ಗಳನ್ನು ಬಳಸಿದೆ. ಸುಮಾರು 100 ಸಿಬ್ಬಂದಿ ಡೆಮಾಲಿಶನ್ ಡ್ರೈವ್‌ನಲ್ಲಿ ಭಾಗಿಯಾಗಿದ್ದಾರೆ.



### 11 ಸಾವಿರ ಅಡಿ ಸ್ಥಳದಲ್ಲಿ ನಿರ್ಮಾಣ

**ಈ ತೆರವು ಕಾರ್ಯಾಚರಣೆ ವೇಳೆ 11,000 ಚದರ ಅಡಿ ವಿಸ್ತೀರ್ಣದಲ್ಲಿ ನಿರ್ಮಿಸಲಾಗಿದ್ದ ಧಾರ್ಮಿಕ ಕೇಂದ್ರವೊಂದು ಪೊಲೀಸರ ಗಮನ ಸೆಳೆದಿದೆ. ಅದರೊಳಗೆ ಕೇವಲ ಪ್ರಾರ್ಥನಾ ಸ್ಥಳವಲ್ಲದೇ ಫಾರ್ಮ್‌ಹೌಸ್, ದೊಡ್ಡ ಈಜುಕೊಳ, ವಿಶಾಲವಾದ ಕೊಠಡಿಗಳು ಮತ್ತು ಅತ್ಯಾಧುನಿಕ ಬಾತ್ ಟಬ್ ಪತ್ತೆಯಾಗಿವೆ. ವಿಶೇಷವಾಗಿ, ಬಾತ್ ಟಬ್ ಇದ್ದ ಕೋಣೆಯ ಬಾಗಿಲಿಗೆ ಹೊರಗಿನವರಿಗೆ ಪ್ರವೇಶವಿಲ್ಲ ಎಂಬ ಬೋರ್ಡ್ ಅನ್ನು ಹಾಕಲಾಗಿದೆ.**

## ಉ. ಪ್ರದೇಶದ 14 ಜಿಲ್ಲೆಗಳಲ್ಲಿ ಸಿಡಿಲು ಬಡಿದು 25 ಜನರ ಸಾವು

**ಲಕ್ನೋ:** ಉತ್ತರ ಪ್ರದೇಶದ 14 ಜಿಲ್ಲೆಗಳಲ್ಲಿ ಭೀಕರ ಗುಡುಗು ಮತ್ತು ಮಿಂಚಿನಿಂದಾಗಿ ಎರಡು ದಿನದಲ್ಲಿ 25 ಜನರು ಮೃತಪಟ್ಟಿದ್ದಾರೆ ಎಂದು ವರದಿ ಬಿಡುಗಡೆ ಮಾಡಲಾಗಿದೆ. ಮೃತಪಟ್ಟವರಲ್ಲಿ ಎಂಟು ಮಹಿಳೆಯರು ಮತ್ತು ಏಳು ಮಕ್ಕಳು ಸೇರಿದ್ದಾರೆ ಎನ್ನಲಾಗಿದೆ. ಜೂನ್ 14-15 ರಂದು

- ಶೀಘ್ರ ಪರಿಹಾರ ಹಣ ನೀಡಲು ಸಿಎಂ ಯೋಗಿ ಸೂಚನೆ
- ಉತ್ತರ ಪ್ರದೇಶದಲ್ಲಿ ಸಿಡಿಲಿಗೆ 14 ಜಿಲ್ಲೆಗಳಲ್ಲಿ 25 ಜನರು ಮೃತಪಟ್ಟಿದ್ದಾರೆ
- ಸಂತ್ರಸ್ತ ಕುಟುಂಬಗಳಿಗೆ ವಿಳಂಬ ಮಾಡದೆ ಪರಿಹಾರ ನೀಡಲು ಅಧಿಕಾರಿಗಳಿಗೆ ಸಿಎಂ ಸೂಚನೆ
- ಸೋನ್ವರ್ಸಾ ಹಲ್ಲಾಬೋಲ್ ಗ್ರಾಮದಲ್ಲಿ ಒಂದೇ ಕುಟುಂಬದ ನಾಲ್ವರು ಮೃತ

ಉತ್ತರ ಪ್ರದೇಶದ 14 ಜಿಲ್ಲೆಗಳಲ್ಲಿ ಭೀಕರ ಗುಡುಗು ಮತ್ತು ಮಿಂಚಿನಿಂದ ಮೃತಪಟ್ಟ ಸಂತ್ರಸ್ತ ಕುಟುಂಬಗಳಿಗೆ ಶೀಘ್ರವೇ ಪರಿಹಾರ ನೀಡಲು ಅಧಿಕಾರಿಗಳಿಗೆ ಸೂಚಿಸಿದ್ದಾರೆ.



**ತಡಮಾಡದೆ ಪರಿಹಾರ ನೀಡಿ:** ಘಟನೆಯ ಬಗ್ಗೆ ಗಮನ ಹರಿಸಿದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು, ಹಾನಿಗೊಳಗಾದ ಪ್ರದೇಶಗಳಲ್ಲಿ ಸಮೀಕ್ಷೆ ನಡೆಸಲು ಮತ್ತು ಸಂತ್ರಸ್ತ ಕುಟುಂಬಗಳಿಗೆ ಸಹಾಯ ಮಾಡಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ. ಕ್ಷೇತ್ರದಲ್ಲಿ ನಿಯೋಜಿಸಲಾದ ಅಧಿಕಾರಿಗಳು ಇಂತಹ ಘಟನೆಗಳಿಂದ ಸ್ಥಳೀಯ ಜನರಿಗೆ ಉಂಟಾದ ಹಾನಿ ಪರಿಶೀಲಿಸಿ ತಡಮಾಡದೆ ಸಂತ್ರಸ್ತ ಕುಟುಂಬಗಳಿಗೆ ಪರಿಹಾರ ನೀಡಬೇಕು ಎಂದು ಮುಖ್ಯಮಂತ್ರಿ ಹೇಳಿದರು. ಅನೇಕ ಜನರು ತಮ್ಮ ದೈನಂದಿನ ಕೆಲಸಗಳಲ್ಲಿ ತೊಡಗಿದ್ದರು. ಈ ವೇಳೆ ಗುಡುಗು ಮತ್ತು ಮಿಂಚು ಸಂಭವಿಸಿದೆ ಮೃತಪಟ್ಟಿದ್ದಾರೆ ಎಂದು ಆಯಾ ಗ್ರಾಮದ ಅಧಿಕಾರಿಗಳು ತಿಳಿಸಿದ್ದಾರೆ. ಪ್ರಯಾಗ್‌ರಾಜ್ ಮತ್ತು ಜೌನ್‌ಪುರ ಜಿಲ್ಲೆಗಳಲ್ಲಿ ನಾಲ್ಕು ಸಾವು ಸಂಭವಿಸಿವೆ. ಈ ಎರಡು ಜಿಲ್ಲೆಗಳಲ್ಲಿನ ಜನರು ಮತ್ತು ಆಸ್ತಿ ಹಾನಿಗೊಳಗಾಗಿವೆ. ಪ್ರಯಾಗ್ ರಾಜ್‌ನ ಸೋನ್ವರ್ಸಾ ಹಲ್ಲಾಬೋಲ್ ಗ್ರಾಮದಲ್ಲಿ ತಡರಾತ್ರಿ ಮಿಂಚು ಬಡಿದು ಒಂದೇ ಕುಟುಂಬದ ನಾಲ್ವರು ಸಾವನ್ನಪ್ಪಿದ್ದಾರೆ ಎಂದು ವರದಿ ಬಿಡುಗಡೆ ಮಾಡಲಾಗಿದೆ.

**ಮೃತಪಟ್ಟವರ ಗುರುತು ಪತ್ತೆ:** ಮೃತರನ್ನು ವೀರೇಂದ್ರ ಬನಬಸಿ (35), ಅವರ ಪತ್ನಿ ಪಾರ್ವತಿ (32), ಮತ್ತು ಅವರ ಪುತ್ರಿಯರಾದ ರಾಧಾ (3) ಮತ್ತು ಕರಿಷ್ಮಾ (2) ಎಂದು ಗುರುತಿಸಲಾಗಿದೆ. ಪೊಲೀಸರ ಪ್ರಕಾರ, ಕುಟುಂಬವು ತಮ್ಮ ಹುಲ್ಲಿನ ಗುಡಿಸಲಿನಲ್ಲಿ ಮಲಗಿದ್ದಾಗ ಮಿಂಚು ಬಡಿದು ಗುಡಿಸಲು ನಾಶವಾಗಿದೆ ಜೊತೆಗೆ ದೇಹಗಳು ಸುಟ್ಟು ಕರಕಲಾಗಿವೆ ಎಂದು ಹೆಚ್ಚುವರಿ ಜಿಲ್ಲಾ ಮ್ಯಾಜಿಸ್ಟ್ರೇಟ್ ವಿನಿತಾಸಿಂಗ್ ಖಚಿತಪಡಿಸಿದ್ದಾರೆ. ಮರಣೋತ್ತರ ಪರೀಕ್ಷೆಗಳನ್ನು ನಡೆಸಲಾಗಿದೆ ಎಂದು ತಿಳಿಸಿದ್ದಾರೆ.

## ಟ್ರಂಪ್ ಹತ್ಯೆಗೆ ಇರಾನ್ ಯತ್ನ

**ಟೆಲ್ ಅವೀವ್:** ಇರಾನ್‌ನ ಇಸ್ಲಾಮಿಕ್ ಆಡಳಿತವು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ತನ್ನ ಪರಮಾಣು ಕಾರ್ಯಕ್ರಮಕ್ಕೆ ಬೆದರಿಕೆ ಎಂದು ಗುರುತಿಸಿದೆ ಮತ್ತು ಅವರನ್ನು ಹತ್ಯೆ ಮಾಡಲು ಪ್ರಯತ್ನಿಸುತ್ತಿದೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ.

ಕಳೆದ ವರ್ಷ ಟ್ರಂಪ್ ಅಧ್ಯಕ್ಷೀಯ ಚುನಾವಣೆಗೆ ಪ್ರಚಾರ ಮಾಡುತ್ತಿದ್ದಾಗ ಎರಡು ಬಾರಿ ಅವರ ಮೇಲೆ ಹತ್ಯೆ ಪ್ರಯತ್ನಗಳು ನಡೆದಿವೆ ಟ್ರಂಪ್ ಮೇಲಿನ ಹತ್ಯೆ ಪ್ರಯತ್ನಗಳು ನೇರವಾಗಿ ಇರಾನ್‌ನಿಂದ ಬಂದಿವೆ ಎಂಬ ಯಾವುದೇ ಮಾಹಿತಿ ಇದೆಯೇ ಎಂದು ಕೇಳಿದಾಗ, ನೆತನ್ಯಾಹು, ಹೌದು, ಅವರ ಗುಪ್ತಚರ ಮೂಲಕ, ಟ್ರಂಪ್ ಅವರನ್ನು ಕೊಲ್ಲಲು ಇರಾನ್ ಬಯಸುತ್ತಿದೆ ಎಂದು ಹೇಳಿದರು. ''ಅವರು ನಂಬರ್ ಒನ್ ಶತ್ರು'' ಎಂದು ಫಾಕ್ಸ್‌ನ್ಯೂಸ್ ಉಲ್ಲೇಖಿಸಿ ನೆತನ್ಯಾಹು ಹೇಳಿದರು. ಅವರು ನಿರ್ಣಾಯಕ ನಾಯಕ ಇತರರು ಅವರೊಂದಿಗೆ ಚೌಕಾಶಿ ಮಾಡಲು ಪ್ರಯತ್ನಿಸಿದ ಹಾದಿಯನ್ನು ಅವರು ಎಂದಿಗೂ ಅನುಸರಿಸಲಿಲ್ಲ, ಅದು ದುರ್ಬಲ ರೀತಿಯಲ್ಲಿ, ಮೂಲಭೂತವಾಗಿ ಯುರೇನಿಯಂ ಅನ್ನು ಉತ್ಕೃಷ್ಟಗೊಳಿಸುವ ಮಾರ್ಗವನ್ನು ನೀಡಿತು ಎಂದು ಅವರು ಹೇಳಿದರು. ತನ್ನ ಮನೆಯ ಮಲಗುವ ಕೋಣೆಯ ಕಿಟಕಿಗೆ ಕ್ಷಿಪಣಿಯನ್ನು ಹಾರಿಸಿದ ನಂತರ ಅವರು ಆಡಳಿತದ ಗುರಿಯಾಗಿದ್ದರು ಎಂದು ನೆತನ್ಯಾಹು ಹೇಳಿದರು. ಪರಮಾಣು ಶಸ್ತ್ರಾಸ್ತ್ರಗಳನ್ನು ಶಸ್ತ್ರಸಜ್ಜಿತಗೊಳಿಸುವ ಇರಾನ್‌ನ ಸಾಮರ್ಥ್ಯಕ್ಕೆ ಬೆದರಿಕೆ ಹಾಕುವಲ್ಲಿ ಅವರು ತಮ್ಮನ್ನು ಟ್ರಂಪ್‌ನ ಕಿರಿಯ ಪಾಲುದಾರ ಎಂದು ಕರೆದುಕೊಂಡರು. ಇಸ್ರೇಲ್ ಸನ್ನಿಹಿತ ಮತ್ತು ಉಭಯ ಅಸ್ತಿತ್ವದ ಬೆದರಿಕೆಯನ್ನು ಎದುರಿಸುತ್ತಿದೆ ಒಂದು, ನಮ್ಮನ್ನು ನಾಶಮಾಡುವ ನಿರ್ದಿಷ್ಟ ಮತ್ತು ಘೋಷಿತ ಉದ್ದೇಶದಿಂದ ಪರಮಾಣು ಬಾಂಬ್‌ಗಳನ್ನು ತಯಾರಿಸಲು ಇರಾನ್ ತನ್ನ ಪುಷ್ಟೀಕರಿಸಿದ ಯುರೇನಿಯಂ ಅನ್ನು ಶಸ್ತ್ರಾಸ್ತ್ರಗಳಾಗಿ ಬಳಸಲು ಧಾವಿಸುವ ಬೆದರಿಕೆ. ಹಾಕಿದೆ ಎಂದು ನೆತ್ಯಾನೆಹು ತಿಳಿಸಿದ್ದಾರೆ.



• ಅಪಘಾತದ ಸಂಭವನೀಯ ಕಾರಣವನ್ನು ಕಂಡುಹಿಡಿಯಲು ಇದು ನಿರ್ಣಾಯಕ ಆವಿಷ್ಕಾರವಾಗಿದೆ


# ದುರಂತಕ್ಕೀಡಾದ ವಿಮಾನದ ಕಾಕ್ಪಿಟ್ ವಾಯ್ಸ್ ರೆಕಾರ್ಡರ್ ಪತ್ತೆ

**ಅಹಮದಾಬಾದ್:** ಇಲ್ಲಿನ ಏರ್ ಇಂಡಿಯಾ ವಿಮಾನ ಅಪಘಾತದ ತನಿಖೆ ನಡೆಸುತ್ತಿರುವ ಅಧಿಕಾರಿಗಳು ಕಾಕ್ಪಿಟ್ ವಾಯ್ಸ್ ರೆಕಾಡರ್ ಪತ್ತೆಯಾಗಿರುವುದನ್ನು ದೃಢಪಡಿಸಿದ್ದಾರೆ. ವಿಮಾನದಲ್ಲಿದ್ದ 241 ಸೇರಿದಂತೆ 270 ಜನರನ್ನು ಬಲಿತೆಗೆದುಕೊಂಡ ಅಪಘಾತದ ಸಂಭವನೀಯ ಕಾರಣವನ್ನು ಕಂಡುಹಿಡಿಯಲು ಇದು ನಿರ್ಣಾಯಕ ಆವಿಷ್ಕಾರವಾಗಿದೆ. ಈ ಹಿಂದೆ, ವಿಮಾನ ಅಪಘಾತ ತನಿಖಾ ಬ್ಯೂರೋ (ಎಎಐಬಿ) ನತದೃಷ್ಟ ವಿಮಾನದ ಫ್ಲೈಟ್ ಡೇಟಾ ರೆಕಾರ್ಡರ್ (ಎಫ್‌ಡಿಆರ್) ಮಾತ್ರ ಪತ್ತೆಯಾಗಿದೆ ಎಂದು ಖಚಿತಪಡಿಸಿತ್ತು.

ಜೂನ್ 12 ರಂದು ಅಹಮದಾಬಾದ್‌ನಲ್ಲಿ ಏರ್ ಇಂಡಿಯಾ ವಿಮಾನ ಅಪಘಾತಕ್ಕೀಡಾದ ಸ್ಥಳವನ್ನು ಪರಿಶೀಲಿಸಿದ ಮತ್ತು ಗಾಯಾಳುಗಳು ಚಿಕಿತ್ಸೆ ಪಡೆಯುತ್ತಿರುವ ಸಿವಿಲ್ ಆಸ್ಪತ್ರೆಗೆ ಭೇಟಿ ನೀಡಿದ ಪ್ರಧಾನಿ ನರೇಂದ್ರ ಮೋದಿ ಅವರ ಪ್ರಧಾನ ಕಾರ್ಯದರ್ಶಿ ಪಿ ಕೆ ಮಿಶ್ರಾ ಅವರಿಗೆ ಕಪ್ಪು ಪೆಟ್ಟಿಗೆಗಳು ಪತ್ತೆಯಾಗಿರುವುದನ್ನು ಅಧಿಕಾರಿಗಳು ಖಚಿತಪಡಿಸಿದ್ದಾರೆ.

ಮಿಶ್ರಾ ಅವರು ಇಲ್ಲಿನ ಸರ್ಕ್ಯೂಟ್ ಹೌಸ್‌ನಲ್ಲಿ ಉನ್ನತ ಮಟ್ಟದ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಎಎಐಬಿ ಮತ್ತು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದ ಹಿರಿಯ ಅಧಿಕಾರಿಗಳೊಂದಿಗೆ ನಡೆಯುತ್ತಿರುವ ಪರಿಹಾರ, ರಕ್ಷಣೆ ಮತ್ತು ತನಿಖಾ ಪ್ರಯತ್ನಗಳ ಕುರಿತು ಚರ್ಚಿಸಿದರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ. ಅಹಮದಾಬಾದ್ ಸಿವಿಲ್ ಆಸ್ಪತ್ರೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಅವರು ಸಂತ್ರಸ್ಥ ಕುಟುಂಬಗಳನ್ನು ಭೇಟಿ ಮಾಡಿದ್ದರು. ಡಿಎನ್‌ಎ ಮಾದರಿ ಹೊಂದಾಣಿಕೆಯನ್ನು ವೀಕ್ಷಿಸಿದರು ಮತ್ತು ಸಂಪೂರ್ಣ ನೆರವು ನೀಡಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದರು. ತಡೆರಹಿತ ಮತ್ತು ಸಹಾನುಭೂತಿಯ ಪ್ರಕ್ರಿಯೆಯನ್ನು ಖಾತ್ರಿಪಡಿಸಿದರು ಎಂದು ಅದು ಹೇಳಿದೆ.

ಗಾಯಾಳುಗಳೊಂದಿಗೆ ಸಂವಾದ ನಡೆಸಿದ ಅವರು, ಅವರ ವೈದ್ಯಕೀಯ ಚಿಕಿತ್ಸೆ ಮತ್ತು ಚೇತರಿಸಿಕೊಳ್ಳಲು ಆದ್ಯತೆ ನೀಡುವಂತೆ ಆಸ್ಪತ್ರೆ ಅಧಿಕಾರಿಗಳಿಗೆ ಸೂಚಿಸಿದ್ದರು. ದುರಂತದ ಆಗಾಧತೆಯಿಂದ ನನಗೆ ತುಂಬಾ ನೋವಾಗಿದೆ. ಎಲ್ಲರೂ ದುಃಖಿತರಾಗಿದ್ದಾರೆ. ಸಂತ್ರಸ್ತರಿಗೆ ದುಃಖವನ್ನು ಹಂಚಿಕೊಳ್ಳುವುದು, ಭಾವನೆಗಳನ್ನು ವ್ಯಕ್ತಪಡಿಸುವುದು ನಮ್ಮ ಕರ್ತವ್ಯ ಎಂದು ಮಿಶ್ರಾ ತಿಳಿಸಿದರು.



### ಕಪ್ಪು ಪೆಟ್ಟಿಗೆಗಳು ಪತ್ತೆಯಾದಲ್ಲಿ ಪತನದ ಕಾರಣ ಪತ್ತೆ

**ವಿಮಾನದ ಎರಡೂ ಕಪ್ಪು ಪೆಟ್ಟಿಗೆಗಳು ಪತ್ತೆಯಾದಲ್ಲಿ ಪತನದ ಕಾರಣವನ್ನು ಪತ್ತೆಹಚ್ಚಲು ತನಿಖಾಧಿಕಾರಿಗಳಿಗೆ ಸುಲಭವಾಗುತ್ತದೆ. ಬೋಯಿಂಗ್ 787-8 (ಎಐ 171) ನಲ್ಲಿದ್ದ 242 ಪ್ರಯಾಣಿಕರು ಮತ್ತು ಸಿಬ್ಬಂದಿಗಳಲ್ಲಿ ಒಬ್ಬರನ್ನು ಹೊರತುಪಡಿಸಿ ಎಲ್ಲರೂ ಮತ್ತು ಐವರು ಎಂಬಿಬಿಎಸ್ ವಿದ್ಯಾರ್ಥಿಗಳು ಸೇರಿದಂತೆ ಇತರ 29 ಜನರು ಲಂಡನ್‌ಗೆ ತೆರಳುತ್ತಿದ್ದ ವಿಮಾನವು ಮೇಘನಿನಗರ ಪ್ರದೇಶದ ವೈದ್ಯಕೀಯ ಕಾಲೇಜಿನ ಸಮೀಪದ ಕ್ಯಾಂಪಸ್‌ಗೆ ಅಪ್ಪಳಿಸಿತ್ತು. ಜ್ವಾಲಾಮುಖಿಯಾದ ಕೆಲವೇ ಕ್ಷಣಗಳಲ್ಲಿ ಸಾವನ್ನಪ್ಪಿದ್ದರು. ಮಿಶ್ರಾ ಅವರು ಮೇಘನಿನಗರದ ಬಿಜೆ ವೈದ್ಯಕೀಯ ಕಾಲೇಜು ಬಳಿ ಅಪಘಾತ ಸ್ಥಳವನ್ನು ಪರಿಶೀಲಿಸಿದರು. ಅಲ್ಲಿ ರಾಜ್ಯ ಸರ್ಕಾರ, ಎಎಐಬಿ ಮತ್ತು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದ ಹಿರಿಯ ಅಧಿಕಾರಿಗಳು ಘಟನೆಗಳ ಅನುಕ್ರಮ ಮತ್ತು ತಕ್ಷಣದ ಪ್ರತಿಕ್ರಿಯೆಯ ಕ್ರಮಗಳ ಕುರಿತು ಅವರಿಗೆ ವಿವರಿಸಿದರು ಎಂದು ಪ್ರಕಟಣೆ ತಿಳಿಸಿದೆ.**

### ವಾಯ್ಸ್ ರೆಕಾರ್ಡರ್ ಪತ್ತೆ

**ಎಎಐಬಿ ವಿವರವಾದ ತನಿಖೆಯನ್ನು ಪ್ರಾರಂಭಿಸಿದೆ, ಯುಎಸ್ ರಾಷ್ಟ್ರೀಯ ಸಾರಿಗೆ ಸುರಕ್ಷತಾ ಮಂಡಳಿಯು ಅಂತರರಾಷ್ಟ್ರೀಯ ಪ್ರೋಟೋಕಾಲ್‌ಗಳ ಅಡಿಯಲ್ಲಿ ಸಮಾನಾಂತರ ತನಿಖೆ ನಡೆಸುತ್ತಿದೆ, ಏಕೆಂದರೆ ವಿಮಾನವು ಅಮೇರಿಕನ್ ನಿರ್ಮಿತವಾಗಿದೆ ಎಂದು ಪ್ರಕಟಣೆ ತಿಳಿಸಿದೆ. ಫ್ಲೈಟ್ ಡೇಟಾ ರೆಕಾಡರ್, ಕಾಕ್ಪಿಟ್ ವಾಯ್ಸ್ ರೆಕಾಡರ್ ಅನ್ನು ಪತ್ತೆಹಚ್ಚಲಾಗಿದೆ ಮತ್ತು ಸುರಕ್ಷಿತಗೊಳಿಸಲಾಗಿದೆ ಎಂದು ಅಧಿಕಾರಿಗಳು ಡಾ ಮಿಶ್ರಾಗೆ ದೃಢಪಡಿಸಿದರು ಎಂದು ಅದು ಹೇಳಿದೆ.**

## ಮಿನಿ ನ್ಯೂಸ್

### ರೀಲ್ಸ್‌ಗಾಗಿ ಹುಚ್ಚಾಟ ವ್ಯಕ್ತಿಯ ನಾಲಿಗೆಗೆ ಕಚ್ಚಿದ ಹಾವು

**ಅಮ್ರೋಹಾ:** 50 ವರ್ಷದ ವ್ಯಕ್ತಿಯೊಬ್ಬ ಹಾವನ್ನು ಚುಂಬಿಸಲು ಪ್ರಯತ್ನಿಸುತ್ತಿದ್ದಾಗ ಹಾವು ಕಚ್ಚಿ, ಆತ ಪ್ರಾಣಕ್ಕಾಗಿ ಹೋರಾಡುತ್ತಿದ್ದಾನೆ ಎಂದು ವರದಿಯಾಗಿದೆ. ಈ ಘಟನೆ ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಪ್ರಸಾರವಾಗಿದೆ. ಈ ವಿಲಕ್ಷಣ ಘಟನೆ ವೀಕ್ಷಕರಿಂದ ತೀವ್ರ ಟೀಕೆಗೆ ಗುರಿಯಾಗಿದೆ. ಅಮ್ರೋಹಾ ಜಿಲ್ಲೆಯ ಹೈಬತ್‌ಪುರ ಗ್ರಾಮದಲ್ಲಿ ಸಂಜೆ ಈ ಘಟನೆ ನಡೆದಿದ್ದು, ಅಲ್ಲಿ ಒಬ್ಬ ರೈತ ಜಿತೇಂದ್ರ ಕುಮಾರ್ ಹಾವನ್ನು ರಕ್ಷಿಸಿ ಅದರೊಂದಿಗೆ ವೀಡಿಯೊವನ್ನು ಚಿತ್ರೀಕರಿಸಲು ಯತ್ನಿಸಿದ್ದಾರೆ. ಆನ್‌ಲೈನ್ ವೀಕ್ಷಕರನ್ನು ಮೆಚ್ಚಿಸುವ ಆಶಯದೊಂದಿಗೆ, ಕುಮಾರ್ ಹಾವಿನೊಂದಿಗೆ ಪೋಸ್ ನೀಡಿದಾಗ, ಹಲವಾರು ಪ್ರೇಕ್ಷಕರು ಸಾಹಸವನ್ನು ಚಿತ್ರೀಕರಿಸಿದರು.

ಸ್ಥಳೀಯರ ಪ್ರಕಾರ, ಕುಮಾರ್ ಈ ಘಟನೆ ನಡೆಯುವಾಗ ಮಾದಕ ವಸ್ತುಗಳನ್ನು ಸೇವಿಸಿದ್ದರು ಮತ್ತು ಸಾಹಸ ಪ್ರದರ್ಶಿಸುವ ಸಮಯದಲ್ಲಿ ಧೂಮಪಾನ ಮಾಡುತ್ತಿದ್ದರು. ವೀಡಿಯೊದಲ್ಲಿ ಕುಮಾರ್ ಹಾವನ್ನು ಕುತ್ತಿಗೆಗೆ ಸುತ್ತಿಕೊಂಡು ನಿಧಾನವಾಗಿ ಅದರ ತಲೆಯನ್ನು ಬಾಯಿಯ ಕಡೆಗೆ ತರುವುದು ಕಂಡುಬಂದಿದೆ. ಆತ ತನ್ನ ನಾಲಿಗೆಯನ್ನು ಸರೀಸೃಪಕ್ಕೆ ಚಾಚಿದಾಗ, ಹಾವು ಆತನ ನಾಲಿಗೆಯನ್ನು ಕಚ್ಚಿದೆ. ಇದು ನೋಡುಗರನ್ನು ಗಾಬರಿಗೊಳಿಸಿದೆ. ಕಚ್ಚಿದ ನಂತರ ಕುಮಾರ್ ಸ್ಥಿತಿ ತೀವ್ರವಾಗಿ ಹದಗೆಟ್ಟಿದ್ದು, ಅವರನ್ನು ಪ್ರಾಥಮಿಕ ಚಿಕಿತ್ಸೆಗಾಗಿ ಹತ್ತಿರದ ಆಸ್ಪತ್ರೆಗೆ ಕರೆದೊಯ್ಯಲಾಯಿತು ಮತ್ತು ನಂತರ ಅವರನ್ನು ಮೊರಾದಾಬಾದ್‌ನಲ್ಲಿರುವ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಯಿತು, ಅಲ್ಲಿ ಅವರ ಸ್ಥಿತಿ ಇನ್ನೂ ಗಂಭೀರವಾಗಿದೆ, ಐಸಿಯುನಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ.

### ಹಜ್ ಯಾತ್ರಿಕರನ್ನು ಕರೆದೊಯ್ಯುತ್ತಿದ್ದ ವಿಮಾನದಲ್ಲಿ ಹೊಗೆ: ಎಲ್ಲಾ ಪ್ರಯಾಣಿಕರು ಸುರಕ್ಷಿತ

**ಲಕ್ನೋ:** ಸೌದಿ ಅರೇಬಿಯಾದಿಂದ ಹಜ್ ಯಾತ್ರಿಕರು ಸೇರಿದಂತೆ ಸುಮಾರು 250 ಪ್ರಯಾಣಿಕರನ್ನು ಹೊತ್ತೊಯ್ಯುತ್ತಿದ್ದ ವಿಮಾನದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡ ನಂತರ ಉತ್ತರ ಪ್ರದೇಶದ ಲಕ್ನೋ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿದಿದೆ. ಬೆಳಗ್ಗೆ ಸೌದಿ ಅರೇಬಿಯಾ ಏರ್‌ಲೈನ್ಸ್ ವಿಮಾನ ಲಕ್ನೋ ವಿಮಾನ ನಿಲ್ದಾಣದಲ್ಲಿ ಇಳಿಯುವಾಗ ಅದರ ಎಡ ಚಕ್ರದಿಂದ ಹೊಗೆ ಹೊರಹೊಮ್ಮುತ್ತಿರುವುದು ಕಂಡುಬಂದಿದೆ. ಚಕ್ರದಲ್ಲಿನ ದೋಷವು ಹೈಡ್ರಾಲಿಕ್ ವ್ಯವಸ್ಥೆಯಲ್ಲಿನ ಸೋರಿಕೆಯಿಂದಾಗಿರಬಹುದು ಎಂದು ಅಂದಾಜಿಸಲಾಗಿದೆ.

ವಿಮಾನ ರಕ್ಷಣಾ ಮತ್ತು ಅಗ್ನಿಶಾಮಕ ದಳ ತಂಡವು ಸ್ಥಳಕ್ಕೆ ಧಾವಿಸಿತು. ಸೌದಿಯ ತಂಡದೊಂದಿಗೆ ಕೆಲಸ ಮಾಡಿ, ಹೊಗೆಯನ್ನು ನಿಯಂತ್ರಿಸಲಾಯಿತು ಮತ್ತು ವಿಮಾನಕ್ಕೆ ಆಗಬಹುದಾದ ಹಾನಿಯನ್ನು ತಪ್ಪಿಸಲಾಯಿತು ಎಂದು ಅವರು ಹೇಳಿದರು.

### ಕತ್ತು ಸೀಳಿ ಖ್ಯಾತ ಮಾಡೆಲ್ ಬರ್ಬರ ಹತ್ಯೆ : ಕಾಲುವೆಯಲ್ಲಿ ಶವ ಪತ್ತೆ

**ಚಂಡೀಗಢ:** ಸೋನಿಪತ್ ಕಾಲುವೆಯಲ್ಲಿ ಕತ್ತು ಸೀಳಿದ ಸ್ಥಿತಿಯಲ್ಲಿ ಹರ್ಯಾಣ ಮೂಲದ ಮಾಡೆಲ್‌ನ ಶವ ಪತ್ತೆಯಾಗಿದೆ.

ಹರಿಯಾಣ ಸಂಗೀತ ಉದ್ಯಮದಲ್ಲಿ ಮಾಡೆಲ್ ಆಗಿ ಕೆಲಸ ಮಾಡುತ್ತಿದ್ದ ಶೀತಲ್ ಶವ ಪತ್ತೆಯಾಗಿದ್ದು ಕೊಲೆಗೆ ಕಾರಣ ತಿಳಿದು ಬಂದಿಲ್ಲ. ಶೀತಲ್ ತನ್ನ ಸಹೋದರಿ ನೇಹಾ ಜೊತೆ ಪಾಣಿಪತ್‌ನಲ್ಲಿ ವಾಸಿಸುತ್ತಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಜೂನ್ 14 ರಂದು ಮಾಡೆಲ್ ಶೂಟಿಂಗ್‌ಗಾಗಿ ಅಹರ್ ಗ್ರಾಮಕ್ಕೆ ತೆರಳಿದ್ದರು. ಮರಳಿ ಮನೆಗೆ ಬಾರದೇ ಇದ್ದಾಗ ಸಹೋದರೆ ಪೊಲೀಸ್ ಠಾಣೆಯಲ್ಲಿ ನಾಪತ್ತೆ ದೂರು ದಾಖಲಿಸಿದ್ದರು. ತನಿಖೆಗೆ ಇಳಿದ ಪೊಲೀಸರಿಗೆ ಖಾಂಡಾ ಗ್ರಾಮದ ಬಳಿಯ ಕಾಲುವೆಯಲ್ಲಿ ಮೃತದೇಹವನ್ನು ಪತ್ತೆ ಹಚ್ಚಿದ್ದಾರೆ. ಶವವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದ್ದು ಆರೋಪಿಗಳಿಗಾಗಿ ಹುಡುಕಾಟ ನಡೆಯುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಪ್ರಕರಣವು ಪ್ರಾದೇಶಿಕ ಮನರಂಜನಾ ಉದ್ಯಮದಲ್ಲಿ ಮಹಿಳೆಯರ ಸುರಕ್ಷತೆಯ ಬಗ್ಗೆ ಗಂಭೀರ ಕಳವಳವನ್ನು ಹುಟ್ಟುಹಾಕಿದೆ.

### ಸಿಡಿಲು ಬಡಿದು 25 ಜನರ ಸಾವು

**ಲಕ್ನೋ:** ಉತ್ತರ ಪ್ರದೇಶದ 14 ಜಿಲ್ಲೆಗಳಲ್ಲಿ ಭೀಕರ ಗುಡುಗು ಮತ್ತು ಮಿಂಚಿನಿಂದಾಗಿ ಎರಡು ದಿನದಲ್ಲಿ 25 ಜನರು ಮೃತಪಟ್ಟಿದ್ದಾರೆ ಎಂದು ವರದಿ ಬಿಡುಗಡೆ ಮಾಡಲಾಗಿದೆ. ಮೃತಪಟ್ಟವರಲ್ಲಿ ಎಂಟು ಮಹಿಳೆಯರು ಮತ್ತು ಏಳು ಮಕ್ಕಳು ಸೇರಿದ್ದಾರೆ ಎನ್ನಲಾಗಿದೆ.

ಘಟನೆಯ ಬಗ್ಗೆ ಗಮನ ಹರಿಸಿದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು, ಹಾನಿಗೊಳಗಾದ ಪ್ರದೇಶಗಳಲ್ಲಿ ಸಮೀಕ್ಷೆ ನಡೆಸಲು ಮತ್ತು ಸಂತ್ರಸ್ತ ಕುಟುಂಬಗಳಿಗೆ ಸಹಾಯ ಮಾಡಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ. ಕ್ಷೇತ್ರದಲ್ಲಿ ನಿಯೋಜಿಸಲಾದ ಅಧಿಕಾರಿಗಳು ಇಂತಹ ಘಟನೆಗಳಿಂದ ಸ್ಥಳೀಯ ಜನರಿಗೆ ಉಂಟಾದ ಹಾನಿ ಪರಿಶೀಲಿಸಿ ತಡಮಾಡದೆ ಸಂತ್ರಸ್ತ ಕುಟುಂಬಗಳಿಗೆ ಪರಿಹಾರ ನೀಡಬೇಕು ಎಂದು ಮುಖ್ಯಮಂತ್ರಿ ಹೇಳಿದರು.

### ಮಸೀದಿ ನೆಲಸಮ ಮಾಡುವ ವೇಳೆ ನಿಗೂಢ ಸ್ಫೋಟ, ಮೂವರಿಗೆ ಗಾಯ

**ಹಂದ್ವಾರ:** ಉತ್ತರ ಕಾಶ್ಮೀರದ ಹಂದ್ವಾರದ ಕಶೇರಿಯಲ್ಲಿ ಮಸೀದಿಯನ್ನು ನೆಲಸಮ ಮಾಡುವ ವೇಳೆ ನಿಗೂಢ ಸ್ಫೋಟ ಸಂಭವಿಸಿದ್ದು,ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಹೊಸ ಮಸೀದಿ ನಿರ್ಮಾಣಕ್ಕೆ ಸ್ಥಳಾವಕಾಶ ಕಲ್ಪಿಸಲು ಸ್ಥಳೀಯರು ಹಳೆಯ ಮಸೀದಿಯನ್ನು ಕೆಡವುತ್ತಿದ್ದಾಗ ಈ ಘಟನೆ ಸಂಭವಿಸಿದೆ. ಅನಿರೀಕ್ಷಿತವಾಗಿ ಸಂಭವಿಸಿದ ಸ್ಫೋಟದಲ್ಲಿ ಮೂವರು ಗಾಯಗೊಂಡಿದ್ದಾರೆ.

ಗಾಯಾಳುಗಳನ್ನು ನಟ್ನೂಸಾದ ಮುದಾಸಿರ್ ಅಹ್ಮದ್ ಮಿರ್, ಕಚ್ರಿಯ ಗುಲಾಮ್ ಅಹ್ಮದ್ ತಂತ್ರೇ ಮತ್ತು ಹಾದಿಪೋರಾದ ಓವೈಸ್ ಅಹ್ಮದ್ ಎಂದು ಗುರುತಿಸಲಾಗಿದೆ. ಮೂವರನ್ನೂ ತಕ್ಷಣ ಹತ್ತಿರದ ಆರೋಗ್ಯ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದ್ದು, ಅವರ ಸ್ಥಿತಿ ಸ್ಥಿರವಾಗಿದೆ ಎಂದು ವರದಿಯಾಗಿದೆ. ಸ್ಫೋಟದ ನಂತರ, ಭದ್ರತಾ ಪಡೆಗಳು ತ್ವರಿತವಾಗಿ ಸ್ಥಳಕ್ಕೆ ತಲುಪಿ ಪ್ರದೇಶವನ್ನು ಸುತ್ತುವರೆದವು. ಪೊಲೀಸ್ ತಂಡವು ಪ್ರಸ್ತುತ ಸ್ಫೋಟದ ಮೂಲ ಮತ್ತು ಸ್ವರೂಪವನ್ನು ತನಿಖೆ ಮಾಡುತ್ತಿದೆ. ಸ್ಫೋಟದ ಕಾರಣವನ್ನು ಕಂಡುಹಿಡಿಯಲು ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ ಮತ್ತು ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಹಂದ್ವಾರ ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದ್ದಾರೆ.

ಒಂದು ಕಾಲದಲ್ಲಿ ಇದು ಉಗ್ರರು ಅಡಗಿರುವ ಸ್ಥಳವಾಗಿತ್ತು, ಇದೀಗ ಅದೇ ಪ್ರದೇಶದಲ್ಲಿ ಸ್ಫೋಟ ಸಂಭವಿಸಿದ್ದು, ಉಗ್ರರು ಮಸೀದಿಯೊಳಗೆ ಆಶ್ರಯ ಪಡೆದಿರಬಹುದು. ಗ್ರೆನೇಡ್ ಅಥವಾ ಯಾವುದೇ ಇತರ ಸ್ಫೋಟಕ ವಸ್ತುವನ್ನು ಅಲ್ಲಿಯೇ ಬಿಟ್ಟಿರಬಹುದು ಅದು ಈಗ ಸ್ಫೋಟಗೊಂಡಿರಬಹುದು ಎಂದದು ಹೇಳಲಾಗಿದೆ.

## 41 ಬೌಂಡರಿ, 22 ಸಿಕ್ಸರ್ ಸಹಿತ 327 ರನ್ ಚಚ್ಚಿದ ಅಯಾನ್ ರಾಜ್

ಬಿಹಾರದ ಮುಜಫರ್‌ಪುರ ಜಿಲ್ಲೆಯ 13 ವರ್ಷದ ಅಯಾನ್ ರಾಜ್ ಜಿಲ್ಲಾ ಕ್ರಿಕೆಟ್ ಲೀಗ್‌ನಲ್ಲಿ 327 ರನ್ ಬಾರಿಸುವ ಮೂಲಕ ಐತಿಹಾಸಿಕ ಇನ್ನಿಂಗ್ಸ್ ಆಡಿದ್ದಾರೆ. ಅಯಾನ್ ಕೇವಲ 134 ಎಸೆತಗಳಲ್ಲಿ 41 ಬೌಂಡರಿಗಳು ಮತ್ತು 22 ಸಿಕ್ಸರ್‌ಗಳ ಸಹಿತ ಈ ತ್ರಿಶತಕ ಸಿಡಿಸಿದ್ದಾರೆ. ಈ ಮೂಲಕ ಅಯಾನ್ ಅಂಡರ್-14 ಟೂರ್ನಮೆಂಟ್‌ನಲ್ಲಿ ತ್ರಿಶತಕ ಬಾರಿಸಿದ ಮೊದಲ ಆಟಗಾರ ಎಂಬ ದಾಖಲೆ ಬರೆದಿದ್ದಾರೆ. ಈ ಸ್ಪರ್ಧೆಯಲ್ಲಿ ಇದಕ್ಕೂ ಮೊದಲು ಯಾವುದೇ ಆಟಗಾರ 300 ರನ್‌ಗಳಿಸಲು ಸಾಧ್ಯವಾಗಿರಲಿಲ್ಲ. ಪ್ರಸ್ತುತ 8 ನೇ ತರಗತಿ ಓದುತ್ತಿರುವ ಅಯಾನ್ ರಾಜ್ ಈ ಲೀಗ್‌ನಲ್ಲಿ ತ್ರಿಶತಕ ಸಿಡಿಸಿದ ಮೊದಲ ಆಟಗಾರನೆನಿಸಿಕೊಂಡಿದ್ದಾರೆ.

**ಬೌಂಡರಿಗಳಿಂದಲೇ 296 ರನ್:** ಜಿಲ್ಲಾ ಕ್ರಿಕೆಟ್ ಲೀಗ್‌ನ 30 ಓವರ್‌ಗಳ ಪಂದ್ಯದಲ್ಲಿ ಸಂಸ್ಕೃತಿ ಕ್ರಿಕೆಟ್ ಅಕಾಡೆಮಿ ಪರ ಆಡುತ್ತಿದ್ದ ಅಯಾನ್ 327 ರನ್‌ಗಳ ಸ್ಫೋಟಕ ಇನ್ನಿಂಗ್ಸ್ ಆಡಿದ್ದಾರೆ. ಈ ಇನ್ನಿಂಗ್ಸ್ ಅವರ ಪ್ರತಿಭೆಯ ಪ್ರದರ್ಶನ ಮಾತ್ರವಲ್ಲದೆ, ಭಾರತೀಯ ಕ್ರಿಕೆಟ್‌ನ ಉಜ್ವಲ ಭವಿಷ್ಯದತ್ತಲೂ ಬೆರಳು ತೋರಿಸುತ್ತದೆ. ಈ ಪಂದ್ಯದಲ್ಲಿ, ಅಯಾನ್ 134 ಎಸೆತಗಳನ್ನು ಎದುರಿಸಿ 244 ಸ್ಟ್ರೈಕ್ ರೇಟ್‌ನಲ್ಲಿ ರನ್ ಗಳಿಸಿದರು. ಅಯಾನ್ ಅವರ ಈ ಇನ್ನಿಂಗ್ಸ್‌ನಲ್ಲಿ, 296 ರನ್‌ಗಳು ಕೇವಲ ಬೌಂಡರಿಗಳಿಂದ ಬಂದಿದ್ದು, ಇದು ಅವರ ಆಕ್ರಮಣಕಾರಿ ಬ್ಯಾಟಿಂಗ್ ಅನ್ನು ತೋರಿಸುತ್ತದೆ.

**ಕ್ರಿಕೆಟ್‌ಗೆ ನನ್ನನ್ನು ಅರ್ಪಿಸಿಕೊಂಡೆ:** ಮುಂದುವರೆದು ಮಾತನಾಡಿದ ಅಯನ್, ಭಾರತಕ್ಕಾಗಿ ಆಡುವುದು ಮತ್ತು ದೇಶವನ್ನು ಹೆಮ್ಮೆಪಡುವಂತೆ ಮಾಡುವುದು ನನ್ನ ಕನಸು. ನಾನು 8 ನೇ ವಯಸ್ಸಿನಲ್ಲಿ ಕ್ರಿಕೆಟ್ ಆಡಲು ಪ್ರಾರಂಭಿಸಿದೆ. ನನಗೆ ಅಧ್ಯಯನ ಮಾಡಲು ಇಷ್ಟವಿರಲಿಲ್ಲ, ಆದ್ದರಿಂದ ನಾನು ಕ್ರಿಕೆಟ್‌ಗೆ ನನ್ನನ್ನು ಅರ್ಪಿಸಿಕೊಂಡೆ. ವೈಭವ್ ಸೂರ್ಯವಂಶಿ ನನ್ನ ಬಾಲ್ಯದ ಸ್ನೇಹಿತ ಮತ್ತು ನಾನು ಅವರನ್ನು ನೋಡಿ ಸ್ಫೂರ್ತಿ ಪಡೆದಿದ್ದೇನೆ ಎಂದಿದ್ದಾರೆ.

### ವೈಭವ್ ಭಾಯ್ ನನ್ನ ದೊಡ್ಡ ಸ್ಫೂರ್ತಿ



**ಅಯಾನ್ ರಾಜ್ ತಮ್ಮ ಈ ಐತಿಹಾಸಿಕ ಸಾಧನೆಗೆ ತಮ್ಮ ಆಪ್ತ ಸ್ನೇಹಿತ ಮತ್ತು ಭಾರತೀಯ ಕ್ರಿಕೆಟ್‌ನ ಉದಯೋನ್ಮುಖ ತಾರೆ ವೈಭವ್ ಸೂರ್ಯವಂಶಿ ಅವರಿಗೆ ಮನ್ನಣೆ ನೀಡಿದ್ದಾರೆ. ಈ ಬಗ್ಗೆ ಮಾಧ್ಯಮದೊಂದಿಗೆ ಮಾತನಾಡಿದ ಅಯಾನ್, ವೈಭವ್ ಭಾಯ್ ನನ್ನ ದೊಡ್ಡ ಸ್ಫೂರ್ತಿ. ನಾವು ಬಾಲ್ಯದಿಂದಲೂ ಒಟ್ಟಿಗೆ ಕ್ರಿಕೆಟ್ ಆಡುತ್ತಿದ್ದೇವೆ. ಅವರು ಇಂದು ಭಾರತ ಕ್ರಿಕೆಟ್‌ನಲ್ಲಿ ದೊಡ್ಡ ಹೆಸರು ಮಾಡಿದ್ದು, ನಾನು ಕೂಡ ಅವರ ಹೆಜ್ಜೆಗಳನ್ನು ಅನುಸರಿಸುತ್ತಿದ್ದೇನೆ ಎಂದು ಹೇಳಿದ್ದಾರೆ.**

## ವಿಂಡೀಸ್ ದಾಂಡಿಗರ ಆರ್ಭಟ



ವೆಸ್ಟ್ ಇಂಡೀಸ್ ಮತ್ತು ಐರ್ಲೆಂಡ್ ನಡುವಣ ಮೂರು ಪಂದ್ಯಗಳ ಟಿ20 ಸರಣಿಯ ಮೊದಲೆರಡು ಮ್ಯಾಚ್‌ಗಳು ಮಳೆಗೆ ಆಹುತಿಯಾಗಿತ್ತು. ಇದೀಗ ಮೂರನೇ ಪಂದ್ಯದಲ್ಲಿ ಐರ್ಲೆಂಡ್ ತಂಡಕ್ಕೆ ಸೋಲುಣಿಸುವ ಮೂಲಕ ಶಾಯ್ ಹೋಪ್ ಮುಂದಾಳತ್ವದ ವಿಂಡೀಸ್ ಪಡೆ 1-0 ಅಂತರದಿಂದ ಸರಣಿ ಗೆದ್ದುಕೊಂಡಿದೆ. ಐರ್ಲೆಂಡ್ ವಿರುದ್ಧದ ಮೂರನೇ ಟಿ20 ಪಂದ್ಯದಲ್ಲಿ ವೆಸ್ಟ್ ಇಂಡೀಸ್ ಭರ್ಜರಿ ಜಯ ಸಾಧಿಸಿದೆ. ನಾರ್ತನ್ ಐರ್ಲೆಂಡ್‌ನ ಬಿಸಿಸಿ ಸ್ಟೇಡಿಯಂನಲ್ಲಿ ನಡೆದ ಈ ಪಂದ್ಯದಲ್ಲಿ ಟಾಸ್ ಗೆದ್ದ ಐರ್ಲೆಂಡ್ ತಂಡದ ನಾಯಕ ಪೌಲ್ ಸ್ಟೀರ್ಲಿಂಗ್ ಬೌಲಿಂಗ್ ಆಯ್ದುಕೊಂಡರು. ಅದರಂತೆ ಮೊದಲು ಬ್ಯಾಟ್ ಮಾಡಿದ ವೆಸ್ಟ್ ಇಂಡೀಸ್ ತಂಡಕ್ಕೆ ಎವಿನ್ ಲೂಯಿಸ್, ಶಾಯ್ ಹೋಪ್ ಭರ್ಜರಿ ಆರಂಭ ಒದಗಿಸಿದ್ದರು. 10.3 ಓವರ್‌ಗಳಲ್ಲಿ 122 ರನ್ ಪೇರಿಸಿದ ಬಳಿಕ ಶಾಯ್ ಹೋಪ್ (51) ವಿಕೆಟ್ ಒಪ್ಪಿಸಿದರು. ಆದರೆ ಮತ್ತೊಂದೆಡೆ ಸ್ಫೋಟಕ ಇನಿಂಗ್ಸ್ ಮುಂದುವರೆಸಿದ ಲೂಯಿಸ್ 8 ಭರ್ಜರಿ ಸಿಕ್ಸ್ ಹಾಗೂ 7 ಫೋರ್‌ಗಳೊಂದಿಗೆ 44 ಎಸೆತಗಳಲ್ಲಿ 91 ರನ್ ಬಾರಿಸಿದರು. ಇನ್ನು ಕೊನೆಯ ಓವರ್‌ಗಳ ವೇಳೆ ಸಿಡಿಲಬ್ಬರದ ಬ್ಯಾಟಿಂಗ್ ಪ್ರದರ್ಶಿಸಿದ ಕೀಸಿ ಕಾರ್ಟಿ 22 ಎಸೆತಗಳಲ್ಲಿ 4 ಸಿಕ್ಸ್, 4 ಫೋರ್‌ಗಳೊಂದಿಗೆ ಅಜೇಯ 49 ರನ್ ಬಾರಿಸಿದರು.

ಈ ಮೂಲಕ ವೆಸ್ಟ್ ಇಂಡೀಸ್ ತಂಡವು 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 256 ರನ್ ಕಲೆಹಾಕಿತು. ಈ ಕಠಿಣ ಗುರಿ ಬೆನ್ನತ್ತಿದ ಐರ್ಲೆಂಡ್ ತಂಡದ ಪರ ರೋಸ್ ಅಡೈರ್ 48 ರನ್ ಬಾರಿಸಿದರೆ, ಹ್ಯಾರಿ ಟೆಕ್ಟರ್ 38 ರನ್ ಚಚ್ಚಿದರು. ಇನ್ನು ಕೆಳ ಕ್ರಮಾಂಕದಲ್ಲಿ ಬ್ಯಾಟ್ ಬೀಸಿದ ಮಾರ್ಕ್ ಅಡೈರ್ 14 ಎಸೆತಗಳಲ್ಲಿ 31 ರನ್ ಕಲೆಹಾಕಿದರು. ಈ ಮೂಲಕ 20 ಓವರ್‌ಗಳಲ್ಲಿ 194 ರನ್ ಕಲೆಹಾಕಿ 62 ರನ್ ಗಳಿಂದ ಸೋಲೊಪ್ಪಿಕೊಂಡರು.

**ವಿಂಡೀಸ್ ದಾಖಲೆಯ ಮೊತ್ತ:** ಈ ಪಂದ್ಯದಲ್ಲಿ ಒಟ್ಟು 20 ಸಿಕ್ಸ್ ಹಾಗೂ 19 ಫೋರ್ ಗಳೊಂದಿಗೆ ಕಲೆಹಾಕಿದ 256 ರನ್ ಗಳು ಟಿ20 ಕ್ರಿಕೆಟ್ ನಲ್ಲಿ ವೆಸ್ಟ್ ಇಂಡೀಸ್ ತಂಡದ ಎರಡನೇ ಗರಿಷ್ಠ ಸ್ಕೋರ್ ಎಂಬುದು ವಿಶೇಷ. ಇದಕ್ಕೂ ಮುನ್ನ 2023 ರಲ್ಲಿ ಸೌತ್ ಆಫ್ರಿಕಾ ವಿರುದ್ಧ ವೆಸ್ಟ್ ಇಂಡೀಸ್ 258 ರನ್ ಬಾರಿಸಿದ್ದರು. ಇದೀಗ ಮತ್ತೊಮ್ಮೆ 250 ರನ್‌ಗಳ ಗಡಿದಾಟುವಲ್ಲಿ ವಿಂಡೀಸ್ ದಾಂಡಿಗರು ಯಶಸ್ವಿಯಾಗಿದ್ದಾರೆ.

**ಐರ್ಲೆಂಡ್ ಪ್ಲೇಯಿಂಗ್ 11:** ಪಾಲ್ ಸ್ಟಿರ್ಲಿಂಗ್ (ನಾಯಕ), ರಾಸ್ ಅಡೈರ್, ಹ್ಯಾರಿ ಟೆಕ್ಟರ್, ಲೋರ್ಕನ್ ಟಕರ್ (ವಿಕೆಟರ್), ಟಿಮ್ ಟೆಕ್ಟರ್, ಜಾರ್ಜ್ ಡಾಕ್ರೆಲ್, ಮಾರ್ಕ್ ಅಡೈರ್, ಬ್ಯಾರಿ ಮೆಕಾರ್ಥಿ, ಮ್ಯಾಥ್ಯೂ ಹಂಫ್ರೀಸ್, ಲಿಯಾಮ್ ಮೆಕಾರ್ಥಿ, ಬೆಂಜಮಿನ್ ವೈಟ್.

**ವೆಸ್ಟ್ ಇಂಡೀಸ್ ಪ್ಲೇಯಿಂಗ್ 11:** ಎವಿನ್ ಲೂಯಿಸ್, ಶಾಯ್ ಹೋಪ್ (ನಾಯಕ), ಕೀಸಿ ಕಾರ್ಟಿ, ಶಿಮ್ರಾನ್ ಹೆಟ್ಮೆಯರ್, ರೋವ್ಮನ್ ಪೊವೆಲ್, ರೋಸ್ಟನ್ ಚೇಸ್, ರೊಮಾರಿಯೋ ಶೆಫರ್ಡ್, ಜೇಸನ್ ಹೋಲ್ಡರ್, ಅಕೇಲ್ ಹೋಸೇನ್, ಗುಡಾಕೇಶ್ ಮೋಟಿ, ಅಲ್ಜಾರಿ ಜೋಸೆಫ್.

## ಟ್ರೋಫಿಗೆ ನನ್ನ ಹೆಸರಿಡಬೇಡಿ ಸಚಿನ್ ತೆಂಡೂಲ್ಕರ್ ಮನವಿ

**ಟೀಮ್ ಇಂಡಿಯಾ ಭರ್ಜರಿ ಸಿದ್ಧತೆ**

ಜೂನ್ 20ರಿಂದ ಭಾರತ, ಇಂಗ್ಲೆಂಡ್ ನಡುವೆ 5 ಪಂದ್ಯಗಳ ಟೆಸ್ಟ್ ಸರಣಿ ಆರಂಭವಾಗಲಿದೆ. ಇಂಗ್ಲೆಂಡ್‌ನಲ್ಲಿ ನಡೆಯಲಿರುವ ಈ ಸರಣಿಗಾಗಿ ಟೀಮ್ ಇಂಡಿಯಾ ಭರ್ಜರಿ ಸಿದ್ಧತೆಯಲ್ಲಿದೆ. ಇತ್ತ ಬಿಸಿಸಿಐ, ಇಸಿಬಿ ಹೊಸ ಹೆಸರಿನೊಂದಿಗೆ ಭಾರತ, ಇಂಗ್ಲೆಂಡ್ ಸರಣಿಯನ್ನು ಮುನ್ನಲೆಗೆ ತರುವ ಸಿದ್ಧತೆಯಲ್ಲಿದೆ. ಇದರ ಭಾಗವಾಗಿ ಇಂಡೊ-ಇಂಗ್ಲೆಂಡ್ ಸರಣಿಗೆ ತೆಂಡುಲ್ಕರ್-ಆ್ಯಂಡರ್ಸನ್ ಟ್ರೋಫಿ ಎಂದು ಹೆಸರಿಡಲು ನಿರ್ಧರಿಸಲಾಗಿದೆ. ಇದಕ್ಕೂ ಮೊದಲು ಇಂಗ್ಲೆಂಡ್‌ನಲ್ಲಿ ನಡೆಯಲಿರುವ ಈ ಭಾರತ-ಇಂಗ್ಲೆಂಡ್ ಟೆಸ್ಟ್ ಸರಣಿಯನ್ನು 'ಪಟೌಡಿ ಟ್ರೋಫಿ' ಎಂದು ಕರೆಯಲಾಗುತ್ತಿತ್ತು. ಪಟೌಡಿ ಟ್ರೋಫಿಯನ್ನು ಮೊದಲ ಬಾರಿಗೆ 2007ರಲ್ಲಿ ಆಡಲಾಯಿತು. ಭಾರತದ ಕ್ರಿಕೆಟ್ ದಂತಕಥೆಗಳಾದ ಇಫ್ತಿಕರ್ ಅಲಿ ಖಾನ್ ಪಟೌಡಿ, ಮನ್ಸೂರ್ ಅಲಿ ಖಾನ್ ಪಟೌಡಿ ಅವರ ಗೌರವಾರ್ಥಕವಾಗಿ ಇಂಡೊ-ಇಂಗ್ಲೆಂಡ್ ಸರಣಿಯ ಟ್ರೋಫಿಗೆ ಪಟೌಡಿ ಎಂದು ನಾಮಕರಣ ಮಾಡಲಾಗಿತ್ತು.

**ಸಚಿನ್ ತೆಂಡೂಲ್ಕರ್ ವಿಶೇಷ ಮನವಿ:** ಬಿಸಿಸಿಐ-ಇಸಿಬಿ ಇದೀಗ ಪಟೌಡಿ ಹೆಸರನ್ನು ತೆಗೆದು ಭಾರತ ಮತ್ತು ಇಂಗ್ಲೆಂಡ್ ಸರಣಿಗೆ ಸಚಿನ್ ತೆಂಡೂಲ್ಕರ್ ಹಾಗೂ ಜೇಮ್ಸ್ ಆ್ಯಂಡರ್ಸನ್ ಅವರ ಹೆಸರನ್ನಿಡಲು ನಿರ್ಧರಿಸಿದೆ. ಈ ನಿರ್ಧಾರದ ಬೆನ್ನಲ್ಲೇ ಸಚಿನ್ ತೆಂಡೂಲ್ಕರ್ ಬಿಸಿಸಿಐಗೆ ವಿಶೇಷ ಮನವಿ ಮಾಡಿದ್ದು, ಲೆಜೆಂಡ್ ಕ್ರಿಕೆಟಿಗನ ಪರಂಪರೆಯನ್ನು ಮುಂದುವರೆಸಬೇಕೆಂದು ಆಗ್ರಹಿಸಿದ್ದಾರೆ. ಕ್ರಿಕ್‌ಬಜ್‌ನ ವರದಿಯ ಪ್ರಕಾರ, ಸಚಿನ್ ತೆಂಡೂಲ್ಕರ್ ಬಿಸಿಸಿಐ ಮತ್ತು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿಯ ಅಧಿಕಾರಿಗಳೊಂದಿಗೆ ಮಾತನಾಡಿದ್ದು, ಈ ವೇಳೆ ಭಾರತ-ಇಂಗ್ಲೆಂಡ್ ಸರಣಿಗೆ ತನ್ನ ಹೆಸರಿಡದಂತೆ ಮನವಿ ಮಾಡಿದ್ದಾರೆ. ಅಲ್ಲದೆ ಈ ಹಿಂದೆಯಿದ್ದ ಪಟೌಡಿ ಟ್ರೋಫಿ ಹೆಸರನ್ನು ಇಂಡೊ-ಇಂಗ್ಲೆಂಡ್ ಸರಣಿಯಲ್ಲಿ ಮುಂದುವರೆಸಬೇಕೆಂದು ಕೇಳಿಕೊಂಡಿದ್ದಾರೆ. ಇತ್ತ ಈ ಹಿಂದೆ ಬಿಸಿಸಿಐ ಕಾರ್ಯದರ್ಶಿಯಾಗಿದ್ದ ಮತ್ತು ಪ್ರಸ್ತುತ ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿಯ (ಐಸಿಸಿ) ಅಧ್ಯಕ್ಷರಾಗಿರುವ ಜಯ್ ಶಾ ಅವರಿಗೂ ಭಾರತ, ಇಂಗ್ಲೆಂಡ್ ಸರಣಿಯಲ್ಲಿ ಪಟೌಡಿ ಪರಂಪರೆಯನ್ನು ಮುಂದುವರೆಸಬೇಕೆಂದು ಸಚಿನ್ ತೆಂಡೂಲ್ಕರ್ ಮನವಿ ಮಾಡಿದ್ದಾರೆ. ಈ ಬಗ್ಗೆ ಇಂಗ್ಲೆಂಡ್ ಕ್ರಿಕೆಟ್ ಬೋರ್ಡ್ ಜೊತೆ ಜಯ್ ಶಾ ಚರ್ಚಿಸಿದ್ದು ಎಂದು ತಿಳಿದು ಬಂದಿದ್ದು, ಅದರಂತೆ ಇಂಡೊ-ಇಂಗ್ಲೆಂಡ್ ಸರಣಿಯಲ್ಲಿ ನೀಡಲಾಗುವ ಪ್ರಶಸ್ತಿಗೆ ಪಟೌಡಿ ಹೆಸರಿಡುವ ಸಾಧ್ಯತೆಯಿದೆ. ಅಂದರೆ ಇಲ್ಲಿ ತೆಂಡುಲ್ಕರ್-ಆ್ಯಂಡರ್ಸನ್ ಟ್ರೋಫಿ ಹೆಸರಿನೊಂದಿಗೆ ಪ್ರಶಸ್ತಿಯೊಂದಕ್ಕೆ ಪಟೌಡಿ ಹೆಸರಿಡಲಿದ್ದಾರೆ ಎಂದು ತಿಳಿದು ಬಂದಿದೆ.



**ಟ್ರೋಫಿ ಅನಾವರಣ ಮುಂದೂಡಿಕೆ:** ಭಾರತ, ಇಂಗ್ಲೆಂಡ್ ನಡುವಣ ಟೆಸ್ಟ್ ಸರಣಿಯ ಹೊಸ ಟ್ರೋಫಿಯನ್ನು ಜೂನ್ 14 ರಂದು ಅನಾವರಣಗೊಳಿಸಲು ನಿರ್ಧರಿಸಲಾಗಿತ್ತು. ಅಹಮದಾಬಾದ್‌ನಲ್ಲಿ ನಡೆದ ವಿಮಾನ ಅಪಘಾತದ ನಂತರ ಆ ಕಾರ್ಯಕ್ರಮವನ್ನು ಮುಂದೂಡಲಾಗಿದೆ. ಇನ್ನು ಜೂನ್ 20ಕ್ಕೂ ಮುನ್ನ ಟ್ರೋಫಿ ಅನಾವರಣ ಕಾರ್ಯಕ್ರಮ ನಡೆಯುವ ಸಾಧ್ಯತೆಯಿದೆ.

## ಆಸ್ಟ್ರೇಲಿಯಾ ಡಬ್ಲ್ಯುಟಿಸಿ ಫೈನಲ್ ಸೋಲಲು ಐಪಿಎಲ್ ಕಾರಣವಂತೆ

ಇತ್ತೀಚೆಗೆ, ಲಾರ್ಡ್ಸ್ ಕ್ರಿಕೆಟ್ ಮೈದಾನದಲ್ಲಿ 2025 ರ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನ ಫೈನಲ್ ಪಂದ್ಯ ನಡೆದಿತ್ತು, ಅದರಲ್ಲಿ ಆಸ್ಟ್ರೇಲಿಯಾ ತಂಡ ದಕ್ಷಿಣ ಆಫ್ರಿಕಾ ವಿರುದ್ಧ 5 ವಿಕೆಟ್‌ಗಳಿಂದ ಸೋತಿತು. ಈ ಪಂದ್ಯದ ನಾಲ್ಕನೇ ಇನ್ನಿಂಗ್ಸ್‌ನಲ್ಲಿ ಆಸ್ಟ್ರೇಲಿಯಾದ ಬೌಲರ್‌ಗಳ ಪ್ರದರ್ಶನ ಅಷ್ಟೊಂದು ಉತ್ತಮವಾಗಿರಲಿಲ್ಲ, ಇದರಿಂದಾಗಿ ದಕ್ಷಿಣ ಆಫ್ರಿಕಾ 282ರನ್‌ಗಳ ಗುರಿಯನ್ನು ಸುಲಭವಾಗಿ ತಲುಪಿತು. ಏತನ್ಮಧ್ಯೆ, ಆಸ್ಟ್ರೇಲಿಯಾದ ಮಾಜಿ ವೇಗಿ ಮಿಚೆಲ್ ಜಾನ್ಸನ್ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್‌ಗೆ ಮೊದಲು ಐಪಿಎಲ್‌ಗೆ ಆದ್ಯತೆ ನೀಡಿದ್ದಕ್ಕಾಗಿ ತಮ್ಮದೇ ದೇಶದ ಜೋಶ್ ಹ್ಯಾಜಲ್‌ವುಡ್ ಅವರನ್ನು ಟೀಕಿಸಿದ್ದಾರೆ.


ಡಬ್ಲ್ಯುಟಿಸಿ ಫೈನಲ್‌ಗಾಗಿ ಜೋಶ್ ಹ್ಯಾಜಲ್‌ವುಡ್ ಆಸ್ಟ್ರೇಲಿಯಾದ ವೇಗದ ಬೌಲಿಂಗ್ ಸೆಟಪ್‌ನ ಭಾಗವಾಗಿದ್ದರು. ಸ್ಕಾಟ್ ಬೋಲ್ಯಾಂಡ್‌ಗಿಂತ ಮೊದಲು ಅವರಿಗೆ ತಂಡದಲ್ಲಿ ಅವಕಾಶ ನೀಡಲಾಯಿತು. ಆದರೆ ಅವರು ನಿರೀಕ್ಷಿಸಿದಷ್ಟು ಪ್ರದರ್ಶನ ನೀಡಲು ಸಾಧ್ಯವಾಗಲಿಲ್ಲ. ಅಂತಿಮ ಪಂದ್ಯದಲ್ಲಿ ಅವರು ಕೇವಲ ಎರಡು ವಿಕೆಟ್‌ಗಳನ್ನು ಮಾತ್ರ ಪಡೆಯಲು ಸಾಧ್ಯವಾಯಿತು. ಹ್ಯಾಜಲ್‌ವುಡ್ ಅವರ ಪ್ರದರ್ಶನವನ್ನು ನೋಡಿದ ನಂತರ, ಮಿಚೆಲ್ ಜಾನ್ಸನ್ ಅವರ ಬಗ್ಗೆ ತುಂಬಾ ಅಸಮಾಧಾನಗೊಂಡಿದ್ದಾರೆ. ಡಬ್ಲ್ಯುಟಿಸಿ ಫೈನಲ್‌ಗೆ ಮೊದಲು ಐಪಿಎಲ್ ಆಡುವ ಅವರ ನಿರ್ಧಾರ ತಪ್ಪಾಗಿದೆ ಎಂದು ಅವರು ಹೇಳಿದ್ದಾರೆ. ಐಪಿಎಲ್ ಆಡುವ ಬದಲು ಹ್ಯಾಜಲ್‌ವುಡ್ ಡಬ್ಲ್ಯುಟಿಸಿ ಫೈನಲ್‌ಗೆ ತಯಾರಿ ನಡೆಸಿದ್ದರೆ, ಅದು ತಂಡಕ್ಕೆ ತುಂಬಾ ಒಳ್ಳೆಯದಾಗುತ್ತಿತ್ತು ಎಂದು ಜಾನ್ಸನ್ ಹೇಳಿದ್ದು ತಂಡದ ಸೋಲಿಗೆ ಐಪಿಎಲ್ ಅನ್ನು ಗುರಿಯಾಗಿಸಿದ್ದಾರೆ.





**ಆಸ್ಟ್ರೇಲಿಯಾದ ಬೌಲಿಂಗ್ ಘಟಕದ ಬಗ್ಗೆ ಪ್ರಶ್ನೆ ಎತ್ತಿದ ಜಾನ್ಸನ್:** ಈ ಸಂದರ್ಭದಲ್ಲಿ, ಆಸ್ಟ್ರೇಲಿಯಾದ ಪ್ರಸ್ತುತ ಬೌಲಿಂಗ್ ತಂಡಕ್ಕೆ ನೀಡಲಾಗುತ್ತಿರುವ ನಿರಂತರ ಅವಕಾಶಗಳನ್ನು ಅವರು ಪ್ರಶ್ನಿಸಿದರು. ಮಿಚೆಲ್ ಸ್ಟಾರ್ಕ್, ಜೋಶ್ ಹ್ಯಾಜಲ್‌ವುಡ್, ಪ್ಯಾಟ್ ಕಮ್ಮಿನ್ಸ್, ನಾಥನ್ ಲಿಯಾನ್‌ರಂತಹ ಯಶಸ್ವಿ ಬಿಗ್ ಫೋರ್ ಬೌಲಿಂಗ್ ದಾಳಿಯನ್ನು ಸಹ ಆಸ್ಟ್ರೇಲಿಯಾದ ಭವಿಷ್ಯಕ್ಕಾಗಿ ಖಚಿತವೆಂದು ಪರಿಗಣಿಸಲಾಗುವುದಿಲ್ಲ ಎಂದು ಜಾನ್ಸನ್ ಹೇಳಿದರು. ಈ ಎಲ್ಲಾ ಅನುಭವಿ ಆಟಗಾರರು ಆಶಸ್‌ಗಾಗಿ ಮಾತ್ರ ತಂಡದಲ್ಲಿದ್ದರೆ, ಇದು ಸರಿಯಾದ ಮನಸ್ಥಿತಿಯೇ ಎಂಬ ಪ್ರಶ್ನೆ ಉದ್ಭವಿಸುತ್ತದೆ ಈಗ ನಾವು ಭವಿಷ್ಯವನ್ನು ಅಳವಡಿಸಿಕೊಳ್ಳುವ ಮತ್ತು ನಮ್ಮ ಮುಂದಿನ ಟೆಸ್ಟ್ ಆಟಗಾರರನ್ನು ಆಯ್ಕೆ ಮಾಡುವಲ್ಲಿ ಆತ್ಮವಿಶ್ವಾಸವನ್ನು ಬೆಳೆಸುವ ಸಮಯ ಬಂದಿದೆ ಎಂದು ಹೇಳಿದ್ದಾರೆ.

### ಜೋಶ್ ಹ್ಯಾಜಲ್‌ವುಡ್ ಅವರನ್ನು ಟೀಕಿಸಿದ ಮಿಚೆಲ್ ಜಾನ್ಸನ್



**ವೆಸ್ಟ್ ಆಸ್ಟ್ರೇಲಿಯನ್‌ಗಾಗಿ ಬರೆದಿರುವ ತಮ್ಮ ಅಂಕಣದಲ್ಲಿ ಮಿಚೆಲ್ ಜಾನ್ಸನ್, ಇತ್ತೀಚಿನ ವರ್ಷಗಳಲ್ಲಿ ಹ್ಯಾಜಲ್‌ವುಡ್ ಅವರೊಂದಿಗೆ ಫಿಟ್‌ನೆಸ್ ಸಮಸ್ಯೆಗಳನ್ನು ಕಂಡಿರುವುದಾಗಿ ಹೇಳಿದ್ದಾರೆ. ರಾಷ್ಟ್ರೀಯ ತಂಡದೊಂದಿಗೆ ತಯಾರಿ ನಡೆಸುವ ಬದಲು ವಿಳಂಬವಾದ ಇಂಡಿಯನ್ ಪ್ರೀಮಿಯರ್ ಲೀಗ್‌ಗೆ ಮರಳಲು ಆದ್ಯತೆ ನೀಡುವ ಅವರ ನಿರ್ಧಾರವು ಜನರನ್ನು ಅಚ್ಚರಿಗೊಳಿಸಿದೆ. ಮಿಚೆಲ್ ಜಾನ್ಸನ್ ಆರು ಐಪಿಎಲ್ ಋತುಗಳನ್ನು ಸಹ ಆಡಿದ್ದಾರೆ ಎಂಬುದು ಗಮನಿಸಬೇಕಾದ ಸಂಗತಿ. ಅವರು ಈ ಲೀಗ್‌ನಲ್ಲಿ ಮುಂಬೈ ಇಂಡಿಯನ್ಸ್, ಪಂಜಾಬ್ ಕಿಂಗ್ಸ್ ಮತ್ತು ಕೋಲ್ಕತ್ತಾ ನೈಟ್ ರೈಡರ್ಸ್ ಅನ್ನು ಪ್ರತಿನಿಧಿಸಿದ್ದಾರೆ.**

## ಶೂಟಿಂಗ್ ಮುಗಿಸಿದ ಸತೀಶ್ ನೀನಾಸಂ, ಸಪ್ತಮಿ ನಟನೆಯ ದಿ ರೈಸ್ ಆಫ್ ಅಶೋಕ

ಅಭಿನಯ ಚತುರ ಸತೀಶ್ ನೀನಾಸಂ ನಟಿಸುತ್ತಿರುವ ಬಹುನಿರೀಕ್ಷಿತ ಸಿನಿಮಾ ದಿ ರೈಸ್ ಆಫ್ ಅಶೋಕ, ಟೈಟಲ್ ಹಾಗೂ ಒಂದಷ್ಟು ಪೋಸ್ಟರ್ ಮೂಲಕವೇ ಕುತೂಹಲ ಹೆಚ್ಚಿಸಿದೆ. ಚಿತ್ರದಿಂದ ಈಗ ಹೊಸ ಅಪ್ ಡೇಟ್ ಸಿಕ್ಕಿದೆ. ದಿ ರೈಸ್ ಆಫ್ ಅಶೋಕ ಚಿತ್ರೀಕರಣ ಮುಕ್ತಾಯಗೊಂಡಿದ್ದು, ಸದ್ಯ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಆರಂಭವಾಗಿವೆ. ಶ್ರೀರಂಗಪಟ್ಟಣ, ನಂಜನಗೂಡು, ಗುಂಡ್ಲುಪೇಟೆ, ಬೆಂಗಳೂರು ಸುತ್ತಮುತ್ತ ಚಿತ್ರತಂಡ ಬಹಳ ಅದ್ದೂರಿಯಾಗಿ ಶೂಟಿಂಗ್ ಮಾಡಿದೆ.




ಸತೀಶ್ ನೀನಾಸಂ ದಿ ರೈಸ್ ಆಫ್ ಅಶೋಕ ಸಿನಿಮಾದಲ್ಲಿ ಕ್ರಾಂತಿಕಾರಿ ಯುವಕನ ಪಾತ್ರ ಪೋಷಣೆ ಮಾಡಿದ್ದಾರೆ. 70ರ ದಶಕದಲ್ಲಿ ನಡೆಯುವ ಕಥೆಯು ಅನ್ಯಾಯದ ವಿರುದ್ಧ ಹೋರಾಡುವ ಯುವಕನ ಬದುಕು ಹಾಗೂ ಸಂಘರ್ಷದ ಕುರಿತು ಬೆಳಕು ಚೆಲ್ಲಲಿದೆ. ದಿ ರೈಸ್ ಆಫ್ ಅಶೋಕ ಚಿತ್ರದಲ್ಲಿ ಸತೀಶ್ ಗೆ ಜೋಡಿಯಾಗಿ ಕಾಂತಾರ ಸಿನಿಮಾ ಖ್ಯಾತಿಯ ಸಪ್ತಮಿ ಗೌಡ ನಟಿಸಿದ್ದಾರೆ. ಬಿ.ಸುರೇಶ್, ರವಿಶಂಕರ್, ಗೋಪಾಲಕೃಷ್ಣ ದೇಶಪಾಂಡೆ, ಸಂಪತ್ ಮೈತ್ರಿಯಾ ಹಾಗೂ ಯಶ್ ಶೆಟ್ಟಿ, ಡ ಗನ್ ಮಂಜು, ವಿಕ್ರಮ್ ವೇದ ಖ್ಯಾತಿಯ ಹರೀಶ್ ಪೆರಾಡಿ ತಾರಾಬಳಗದಲ್ಲಿದ್ದಾರೆ. ನಿರ್ದೇಶಕ ವಿನೋದ್ ದೊಂಡಾಲೆ ನಿಧನದ ನಂತರ 'ಅಶೋಕ ಬ್ಲೇಡ್' ಸಿನಿಮಾ ನಿಂತೇ ಹೋಯಿತು ಎಂದು ಸುದ್ದಿ ಹರಡಿತ್ತು. ಆದರೆ ನಟ ಸತೀಶ್ ನೀನಾಸಂ ಅವರು 'ದಿ ರೈಸ್ ಆಫ್ ಅಶೋಕ' ಹೆಸರಿನಲ್ಲಿ ಆ ಪ್ರಾಜೆಕ್ಟ್ ಅನ್ನು ಮತ್ತೆ ಕೈಗೆತ್ತಿಕೊಂಡು ಯಶಸ್ವಿಯಾಗಿ ಶೂಟಿಂಗ್ ಮುಗಿಸಿದ್ದಾರೆ. ಈಗಾಗಲೇ ರಿಲೀಸ್ ಆದ ಪೋಸ್ಟರ್ ನಲ್ಲಿ ಮಚ್ಚು ಹಿಡಿದು ತುಂಬ ರಗಡ್ ಆದಂತಹ ಲುಕ್‌ನಲ್ಲಿ ನೀನಾಸಂ ಸತೀಶ್ ಅವರು ಕಾಣಿಸಿಕೊಂಡಿದ್ದಾರೆ. ಅವರ ಸಿನಿಕರಿಯರನ ಅತಿದೊಡ್ಡ ಬಜೆಟ್ ಚಿತ್ರವಾಗಿರುವ ದಿ ರೈಸ್ ಆಫ್ ಅಶೋಕ ಸತೀಶ್ ವೃತ್ತಿ ಬದುಕಿಗೆ ಹೊಸ ಆಯಾಮಾ ನೀಡಲಿದೆ ಎಂಬ ನಿರೀಕ್ಷೆ ಚಿತ್ರರಂಗದಲ್ಲಿದೆ. ಅಂದ್ಹಾಗೆ ಈ ಸಿನಿಮಾವನ್ನು ಕನ್ನಡದ ಜೊತೆ ತೆಲುಗು ಹಾಗೂ ತಮಿಳು ಭಾಷೆಯ ಸಿನಿಮಾಗಳಲ್ಲೂ ಬಿಡುಗಡೆಯಾಗಲಿದೆ. ವೃದ್ಧಿ ಕ್ರಿಯೇಷನ್ ಹಾಗೂ ಸತೀಶ್ ಪಿಕ್ಚರ್ಸ್ ಹೌಸ್ ಪ್ರೊಡಕ್ಷನ್‌ನ ಅಡಿ ವರ್ಧನ್ ನರಹರಿ, ಜೈಷ್ಣವಿ ಜೊತೆ ಸೇರಿ ನೀನಾಸಂ ಸತೀಶ್ ಕೂಡ ಸಿನಿಮಾ ನಿರ್ಮಾಣ ಮಾಡಿದ್ದಾರೆ. ದಿ ರೈಸ್ ಆಫ್ ಅಶೋಕನಿಗೆ ದಯಾನಂದ್ ಟಿ.ಕೆ ಕಥೆ ಬರೆದಿದ್ದು, ಪೂರ್ಣಚಂದ್ರ ತೇಜಸ್ವಿ ಸಂಗೀತ ನಿರ್ದೇಶನ, ಲವಿತ್ ಕ್ಯಾಮೆರಾ ಹಿಡಿದಿದ್ದು, ಮನು ಶೇಡ್ಗಾರ್ ಸಂಕಲನ, ರವಿವರ್ಮಾ, ವಿಕ್ರಮ್ ಮೋರ್ ಅವರು ಸಾಹಸ ನಿರ್ದೇಶನ, ಸಂತೋಷ್ ಶೇಖರ್ ಅವರ ನೃತ್ಯ ನಿರ್ದೇಶನ ಚಿತ್ರಕ್ಕಿದೆ.



## ಕನ್ನಡದಲ್ಲೂ ಬಿಡುಗಡೆ ಆಯ್ತು ಪ್ರಭಾಸ್ ನಟನೆಯ 'ದಿ ರಾಜಾ ಸಾಬ್' ಟೀಸರ್

ಪ್ರಭಾಸ್ ನಟಿಸಿದ ಮೊದಲ ಹಾರರ್ ಸಿನಿಮಾ ಎಂಬ ಕಾರಣಕ್ಕೆ ಪ್ರೇಕ್ಷಕರು ದಿ ರಾಜಾ ಸಾಬ್ ಚಿತ್ರದ ಮೇಲೆ ನಿರೀಕ್ಷೆ ಹೊಂದಿದ್ದಾರೆ. ಸೋಮವಾರ ಈ ಸಿನಿಮಾದ ಮೊದಲ ಟೀಸರ್ ಬಿಡುಗಡೆ ಆಗಿದೆ. 'ಪೀಪಲ್ ಮೀಡಿಯಾ ಫ್ಯಾಕ್ಟರಿ' ಸಂಸ್ಥೆಯು ಈ ಸಿನಿಮಾವನ್ನು ಅದ್ದೂರಿಯಾಗಿ ನಿರ್ಮಾಣ ಮಾಡುತ್ತಿದೆ. ಬಹುನಿರೀಕ್ಷಿತ 'ದಿ ರಾಜಾ ಸಾಬ್' ಸಿನಿಮಾದ ಟೀಸರ್ ಬಿಡುಗಡೆ ಆಗಿದೆ. ಈ ಸಿನಿಮಾ ಮೇಲೆ ಪ್ರಭಾಸ್ ಅಭಿಮಾನಿಗಳು ತುಂಬ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ನಿರೀಕ್ಷೆಗೆ ತಕ್ಕಂತೆಯೇ ಟೀಸರ್ ಮೂಡಿಬಂದಿದೆ. ಮಾರುತಿ ಅವರು ಈ ಸಿನಿಮಾಗೆ ನಿರ್ದೇಶನ ಮಾಡುತ್ತಿದ್ದಾರೆ. ಹಲವು ಕಾರಣಗಳಿಂದ 'ದಿ ರಾಜಾ ಸಾಬ್' ಸಿನಿಮಾ ಈಗಾಗಲೇ ಸಾಕಷ್ಟು ಹೈಪ್ ಕ್ರಿಯೇಟ್ ಮಾಡಿದೆ. ಡಿಸೆಂಬರ್ 5ರಂದು ಪ್ಯಾನ್ ಇಂಡಿಯಾ ಮಟ್ಟದಲ್ಲಿ ಈ ಸಿನಿಮಾ ರಿಲೀಸ್ ಆಗಲಿದೆ. ಈಗ ಕನ್ನಡ, ತೆಲುಗು, ಹಿಂದಿ, ಮಲಯಾಳಂ ಮತ್ತು ತಮಿಳು ಭಾಷೆಯಲ್ಲಿ ಈ ಚಿತ್ರದ ಟೀಸರ್ ಬಿಡುಗಡೆ ಆಗಿದೆ. 'ದಿ ರಾಜಾ ಸಾಬ್ ಸಿನಿಮಾ ಮೇಕಿಂಗ್‌ನಿಂದ ಗಮನ ಸೆಳೆಯುತ್ತಿದೆ. ಮೊದಲ ಟೀಸರ್ ನೋಡಿದ ಅಭಿಮಾನಿಗಳು ಫಿದಾ ಆಗಿದ್ದಾರೆ. ತೆಲುಗಿನ ಖ್ಯಾತ ನಿರ್ಮಾಣ ಸಂಸ್ಥೆಯಾದ 'ಪೀಪಲ್ ಮೀಡಿಯಾ ಫ್ಯಾಕ್ಟರಿ' ಮೂಲಕ ಈ ಸಿನಿಮಾ ನಿರ್ಮಾಣ ಆಗುತ್ತಿದೆ. ಟಿ.ಜಿ. ವಿಶ್ವಪ್ರಸಾದ್ ಅವರು ಸಿನಿಮಾಗೆ ಬಂಡವಾಳ ಹೂಡಿದ್ದಾರೆ. ಅಭಿಮಾನಿಗಳಿಂದ 'ದಿ ರಾಜಾ ಸಾಬ್' ಟೀಸರ್‌ಗೆ ಮೆಚ್ಚುಗೆ ಸಿಕ್ಕಿದೆ. ಈ ಟೀಸರ್‌ನಲ್ಲಿ ಪ್ರಭಾಸ್ ಅವರ ಲುಕ್ ಖಡಕ್ ಆಗಿದೆ. ಮೂವರು ನಾಯಕಿಯರು ಕಾಣಿಸಿಕೊಂಡಿದ್ದಾರೆ. ಪ್ರಭಾಸ್ ಅವರ ಎಂಟ್ರಿ ದೃಶ್ಯ ಸಖತ್ತಾಗಿದೆ. ಕಾಮಿಡಿ ಡೈಲಾಗ್‌ಗಳು ಮತ್ತು ರೊಮ್ಯಾಂಟಿಕ್ ಟ್ರ್ಯಾಕ್ ಕೂಡ ಗಮನ ಸೆಳೆದಿದೆ. ಅದರ ಜೊತೆ ಬಾಲಿವುಡ್ ನಟ ಸಂಜಯ್ ದತ್ ಅವರ ಗೆಟಪ್ ಸಹ ಟೀಸರ್‌ನಲ್ಲಿ ಹೈಲೈಟ್ ಆಗಿದೆ. ರಾಜಮನೆತನದ ಸುತ್ತ ನಡೆಯುವ ಕಹಾನಿ ಈ ಸಿನಿಮಾದಲ್ಲಿದೆ. ಈ ಚಿತ್ರದಲ್ಲಿ ಪ್ರಭಾಸ್ ಅವರಿಗೆ ಎರಡು ಲುಕ್ ಇವೆ. ಒಂದರಲ್ಲಿ ಲವರ್‌ಬಾಯ್ ಆಗಿದ್ದಾರೆ. ಮತ್ತೊಂದರಲ್ಲಿ ಅತೀಂದ್ರಿಯ ಶಕ್ತಿ ಆವಾಹಿಸಿಕೊಂಡಂತೆ ಕಂಡಿದ್ದಾರೆ. ಇದೆಲ್ಲವೂ ಟೀಸರ್‌ನಲ್ಲಿ ಕಾಣಿಸಿದೆ. ಪ್ರಭಾಸ್ ಜೊತೆ ನಿಧಿ ಅಗರ್ವಾಲ್, ಮಾಳವಿಕಾ ಮೋಹನನ್, ರಿದ್ಧಿ ಕುಮಾರ್ ಅವರು ನಾಯಕಿಯರಾಗಿ ಅಭಿನಯಿಸಿದ್ದಾರೆ. ಡಿಸೆಂಬರ್ 5ರಂದು ತಮಿಳು, ತೆಲುಗು, ಹಿಂದಿ, ಕನ್ನಡ, ಮಲಯಾಳಂ ಭಾಷೆಗಳಲ್ಲಿ ಈ ಚಿತ್ರ ರಿಲೀಸ್ ಆಗಲಿದೆ ಎಂದು ನಿರ್ಮಾಪಕ ಟಿ.ಜಿ. ವಿಶ್ವ ಪ್ರಸಾದ್ ತಿಳಿಸಿದ್ದಾರೆ. ಥಮನ್ ಅವರು ಈ ಚಿತ್ರಕ್ಕೆ ಸಂಗೀತ ನೀಡಿದ್ದಾರೆ.



## ವಿಜಯ್‌ನ ಎಲ್ಲಾ ವಿಚರಗಳೂ ಇಷ್ಟ; ರಶ್ಮಿಕಾ



ವಿಜಯ್ ದೇವರಕೊಂಡ ಮತ್ತು ರಶ್ಮಿಕಾ ಮಂದಣ್ಣ ಅವರ ಸಂಬಂಧದ ಬಗ್ಗೆ ಮತ್ತೆ ಹೊಸದಾಗಿ ಹೇಳಬೇಕಿಲ್ಲ. ಇವರು ಹಾಯಾಗಿ ಸುತ್ತಾಡಿಕೊಂಡಿದ್ದನ್ನು ನೀವು ಗಮನಿಸಿರಬಹುದು. ಇವರು ಒಟ್ಟಾಗಿ ಫೋಟೋ ಪೋಸ್ಟ್ ಮಾಡದೇ ಇದ್ದರು, ಇವರ ನಡೆಗಳಿಂದ ಅದು ಸ್ಪಷ್ಟವಾಗುತ್ತಿದೆ. ಈಗ ವಿಜಯ್ ದೇವರಕೊಂಡ ಅವರ ಬಗ್ಗೆ ರಶ್ಮಿಕಾ ಮಾತನಾಡಿದ್ದಾರೆ. ವಿಜಯ್ ದೇವರಕೊಂಡ ಬಗೆಗಿನ ಎಲ್ಲಾ ವಿಚಾರಗಳು ಇಷ್ಟ ಎಂದು ಅವರು ಹೇಳಿಕೆ ನೀಡಿದ್ದಾರೆ. ವಿಜಯ್ ದೇವರಕೊಂಡ ಹಾಗೂ ರಶ್ಮಿಕಾ ಅವರು ಈ ಮೊದಲು 'ಗೀತ ಗೋವಿಂದಂ' ಸಿನಿಮಾದಲ್ಲಿ ಒಟ್ಟಾಗಿ ನಟಿಸಿದರು. ಈ ಚಿತ್ರ ಸೂಪರ್ ಹಿಟ್ ಆಯಿತು. ಈ ಸಿನಿಮಾ ಬಗ್ಗೆ ಫ್ಯಾನ್ಸ್ ಸಾಕಷ್ಟು ನಿರೀಕ್ಷೆ ಇಟ್ಟುಕೊಂಡಿದ್ದರು. ಅಂದುಕೊಂಡಿದ್ದಕ್ಕಿಂತಲೂ ಸಿನಿಮಾ ಹಿಟ್ ಆಯಿತು, ವಿಜಯ್ ಹಾಗೂ ರಶ್ಮಿಕಾ ಜೋಡಿ ಯಶಸ್ಸು ಕಂಡಿತು. ಆ ಬಳಿಕ ಇವರ ಮಧ್ಯೆ ಪ್ರೀತಿ ಬೆಳೆದಿದೆ ಎನ್ನಲಾಗಿದೆ. ಸದ್ಯ ವಿಜಯ್ ದೇವರಕೊಂಡ ಹಾಗೂ ರಶ್ಮಿಕಾ ಒಟ್ಟಾಗಿ ವಾಸಿಸುತ್ತಿದ್ದಾರೆ ಎನ್ನಲಾಗಿದೆ. ಇವರು ಶೀಘ್ರವೇ ವಿವಾಹ ಆದರೂ ಅಚ್ಚರಿ ಏನಿಲ್ಲ ಬಿಡಿ. ಇತ್ತೀಚೆಗೆ ವೇದಿಕೆ ಒಂದರ ಮೇಲೆ ರಶ್ಮಿಕಾ ಅವರಿಗೆ ವಿವಿಧ ಕಲಾವಿದರ ಬಗ್ಗೆ ಕೇಳಲಾಗಿದೆ. ಆ ಹೀರೋಗಳಲ್ಲಿ ಯಾವ ವಿಚಾರ ಇಷ್ಟ ಎಂಬುದನ್ನು ರಶ್ಮಿಕಾ ಅವರು ಹೇಳಬೇಕಿತ್ತು. ರಶ್ಮಿಕಾ ಅವರಿಗೆ ಮೊದಲು ಅಲ್ಲು ಅರ್ಜುನ್ ಬಗ್ಗೆ ಕೇಳಿದರು. ಈ ವೇಳೆ ಅವರು ಅಲ್ಲು ಅರ್ಜುನ್ ಅವರ ಸ್ವ್ಯಾಗ್ ಇಷ್ಟ ಎಂದರು. ಆ ಬಳಿಕ ಆ್ಯಂಕರ್ ವಿಜಯ್ ದೇವರಕೊಂಡ ಹೆಸರನ್ನು ತೆಗೆದುಕೊಂಡರು. ಅವರಲ್ಲಿ ನನಗೆ ಎಲ್ಲವೂ ಇಷ್ಟ ಎಂದು ರಶ್ಮಿಕಾ ಮಂದಣ್ಣ ಹೇಳಿದರು. ಈ ವೇಳೆ ಅವರು ಸಾಕಷ್ಟು ನಗುತ್ತಿದ್ದರು. ಅವರು ನಾಚುತ್ತಿದ್ದರು, ಅಭಿಮಾನಿಗಳ ಕೂಗು ಜೋರಾಯಿತು. ರಶ್ಮಿಕಾ ಮಂದಣ್ಣ ಹಾಗೂ ವಿಜಯ್ ಗೀತ ಗೋವಿಂದ ಸಿನಿಮಾದಲ್ಲಿ ಮತ್ತು ಡಿಯರ್ ಕಾಮ್ರೇಡ್ ಸಿನಿಮಾದಲ್ಲಿ ಒಟ್ಟಾಗಿ ಕಾಣಿಸಿಕೊಂಡಿದ್ದರೆ.

## ಏರ್ ಇಂಡಿಯಾಗೆ ದೇವರೇ ದಿಕ್ಕು ರವೀನಾ ಟಂಡನ್

ಅಹಮದಾಬಾದ್‌ನಲ್ಲಿ ನಡೆದ ವಿಮಾನ ಪತನದ ಬಳಿಕ ದೇಶದ ಜನತೆಗೆ ಇಂದಿಗೂ ದುರ್ಘಟನೆಯ ನೋವಿನಿಂದ ಹೊರಬರಲಾಗುತ್ತಿಲ್ಲ. ಈ ವೇಳೆ ಏರ್‌ಇಂಡಿಯಾ ವಿಮಾನದಲ್ಲಿ ಪ್ರಯಾಣಿಸಿ ಧೈರ್ಯ ಹೇಳುವ ಪೋಸ್ಟ್ ಹಾಕಿದ್ದಾರೆ ನಟಿ ರವೀನಾ ಟಂಡನ್ ಏರ್‌ಇಂಡಿಯಾದ ಟಿಕೆಟ್ ಪಡೆದು ವಿಮಾನದಲ್ಲಿ ಕುಳಿತಿರುವ ಫೋಟೋಗಳನ್ನು ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿರುವ ರವೀನಾ, ಏರ್ ಇಂಡಿಯಾ ಸಿಬ್ಬಂದಿಗಳಲ್ಲಿ ಇನ್ನೂ ಅವಿತಿರುವ ಬೇಸರ, ದುಃಖದಿಂದ ಕೂಡಿರುವ ನಗು ಹಾಗೂ ಪ್ರಯಾಣಿಕರ ಮೌನದ ಕುರಿತು ಸುದೀರ್ಘವಾಗಿ ಅನಿಸಿಕೆ ಹಂಚಿಕೊಂಡಿದ್ದಾರೆ. ಅಹಮದಾಬಾದ್‌ನಿಂದ ಲಂಡನ್‌ಗೆ ತೆರಳುವ ಏರ್ ಇಂಡಿಯಾ ವಿಮಾನದಲ್ಲಿ ದುರ್ಘಟನೆಯಲ್ಲಿ 265ಕ್ಕೂ ಹೆಚ್ಚು ಜನರು ಸಜೀವ ದಹನವಾಗಿದ್ದಾರೆ. ಈ ನೋವು ದೇಶದ ಜನರಲ್ಲಿ ಆತಂಕ ಮೂಡಿಸಿದೆ ಜೊತೆಗೆ ಏರ್ ಇಂಡಿಯಾ ವಿಮಾನ ಪ್ರಯಾಣಿಕರ ಸಂಖ್ಯೆಯನ್ನೂ ಕುಗ್ಗಿಸುತ್ತಿದೆ. ಈ ಹೊತ್ತಲ್ಲೇ ಏರ್ ಇಂಡಿಯಾ ವಿಮಾನದಲ್ಲಿ ಪ್ರಯಾಣ ಬೆಳೆಸಿರುವ ರವೀನಾ ಒಂದಿಷ್ಟು ಆತ್ಮವಿಶ್ವಾಸ ತುಂಬುವ ಮಾತುಗಳನ್ನಾಡಿದ್ದಾರೆ. ಪ್ರತಿಕೂಲಗಳ ವಿರುದ್ಧ ಎದ್ದು ನಿಲ್ಲಬೇಕಿದೆ, ಎಲ್ಲವನ್ನೂ ಬಾಚಿಕೊಂಡು ಪ್ರಾರಂಭಿಸಬೇಕು, ಹೊಸ ಆರಂಭಗಳಾಗಬೇಕು, ಹೊಸ ಶಕ್ತಿಯ ಕಡೆಗೆ ಸಂಕಲ್ಪ ಶುರುವಾಗಬೇಕು, ವಾತಾವರಣ ಗಂಭೀರವಾಗಿದ್ದರೂ ಏರ್ ಇಂಡಿಯಾ ಸಿಬ್ಬಂದಿಗಳು ದುಃಖದೊಂದಿಗೆ ನಗುವಿನ ಮುಖದಲ್ಲಿ ಸ್ವಾಗತಿಸುತ್ತಾರೆ. ಪ್ರಯಾಣಿಕರು ಹಾಗೂ ಸಿಬ್ಬಂದಿಗಳ ಮೌನವು ಮಾತನಾಡದೇ ಸಂತಾಪ ಸೂಚಿಸುತ್ತಿದೆ. ಇದು ಎಂದಿಗೂ ವಾಸಿಯಾಗದ ಗಾಯ. ಏರ್‌ಇಂಡಿಯಾಗೆ ಯಾವಾಗಲೂ ದೇವರೇ ದಿಕ್ಕು. ನಿರ್ಭೀತಿಯಿಂದ ಎಲ್ಲವನ್ನೂ ಜಯಿಸಲು ಇಚ್ಛಾಶಕ್ತಿಯೇ ಬಲವಾಗಬೇಕು ಎಂದಿದ್ದಾರೆ ರವೀನಾ ಟಂಡನ್. ದುರ್ಘಟನೆಯ ಬಳಿಕ ಏರ್ ಇಂಡಿಯಾ ವಿಮಾನ ಪ್ರಯಾಣಿಕರ ಸಂಖ್ಯೆಯೂ ಕುಸಿಯುತ್ತಿದೆ. ಈ ಹೊತ್ತಲ್ಲಿ ಅದೇ ವಿಮಾನದಲ್ಲಿ ಪ್ರಯಾಣಿಸುವ ಮೂಲಕ ಪ್ರಯಾಣಿಕರಿಗೂ ಹಾಗೂ ಸಿಬ್ಬಂದಿಗಳಿಗೂ ಒಂದಿಷ್ಟು ಆತ್ಮವಿಶ್ವಾಸ ತುಂಬುವ ಮಾತನ್ನ ಪದಗಳಲ್ಲಿ ಹೇಳಿದ್ದಾರೆ ಬಾಲಿವುಡ್ ನಟಿ ರವೀನಾ ಟಂಡನ್. ಸದ್ಯದ ಏರ್‌ಇಂಡಿಯಾ ಪ್ರಯಾಣದ ಪರಿಸ್ಥಿತಿಯನ್ನ ಅವರ ಮಾತುಗಳಲ್ಲಿ ವಿವರಿಸಿದ್ದಾರೆ ನಟಿ.

## 'ಜೊತೆ ಜೊತೆಯಲಿ' ಧಾರಾವಾಹಿ ಹಿಂದಿಗೆ ರಿಮೇಕ್

ಜೊತೆ ಜೊತೆಯಲಿ ಧಾರಾವಾಹಿಯು ಜೀ ಕನ್ನಡದಲ್ಲಿ ಪ್ರಸಾರ ಕಂಡು ಸೂಪರ್ ಹಿಟ್ ಆಯಿತು. ಈ ಧಾರಾವಾಹಿ ಎಲ್ಲರ ಮೆಚ್ಚುಗೆ ಪಡೆಯಿತು. ಕೆಲವು ವಿವಾದಗಳಿಂದ ಕೊನೆಯಲ್ಲಿ ಧಾರಾವಾಹಿ ಟಿಆರ್‌ಪಿ ಕಳೆದುಕೊಂಡಿತ್ತು ನಿಜ. ಆದರೆ, ಆರಂಭದಲ್ಲಿ ಧಾರಾವಾಹಿ ಟಾಪ್‌ನಲ್ಲಿ ಇತ್ತು. ಎಲ್ಲರೂ ಅಚ್ಚರಿ ಪಡುವಂತೆ ಧಾರಾವಾಹಿ ಟಿಆರ್‌ಪಿಯನ್ನು ತಂದುಕೊಟ್ಟಿದ್ದಂತೂ ನಿಜ. ಪ್ರತಿ ವಾರ ಈ ಧಾರಾವಾಹಿ ಟಿಆರ್‌ಪಿಯಲ್ಲಿ ಮೊದಲ ಸ್ಥಾನ ಕಾಪಾಡಿಕೊಳ್ಳುತ್ತಿತ್ತು. ಈಗ ಧಾರಾವಾಹಿ ಹಿಂದಿಗೆ ರಿಮೇಕ್ ಆಗುತ್ತಿದೆ. 2019ರಲ್ಲಿ 'ಜೊತೆ ಜೊತೆಯಲಿ' ಧಾರಾವಾಹಿ ಪ್ರಸಾರ ಆರಂಭಿಸಿತು. ಬರೋಬ್ಬರಿ 953 ಎಪಿಸೋಡ್‌ಗಳು ಪ್ರಸಾರ ಕಂಡವು. 2019ರಿಂದ 2023ರವರೆಗೆ ಸೀರಿಯಲ್ ಪ್ರಸಾರ ಕಂಡಿತು. ಈ ಧಾರಾವಾಹಿಯಲ್ಲಿ ಅನಿರುದ್ಧ್ ಜತ್ಕರ್ ಹಾಗೂ ಮೇಘಾ ಶೆಟ್ಟಿ ಮುಖ್ಯ ಪಾತ್ರದಲ್ಲಿ ನಟಿಸಿದ್ದರು. ಈ ಧಾರಾವಾಹಿ ಮರಾಠಿಯ ತುಲಾ ಪಹಾತೆ ರೇಯ ರಿಮೇಕ್ ಆಗಿದೆ. ರಿಮೇಕ್ ಆದರೂ ಕನ್ನಡ ಜನರು ಇದನ್ನು ಮೆಚ್ಚಿಕೊಂಡರು. ಈಗ ಹಿಂದಿಯಲ್ಲಿ 'ಜೊತೆ ಜೊತೆಯಲಿ' ಧಾರಾವಾಹಿ 'ತುಮ್ ಸೇ ತುಮ್ ತಕ್' ಹೆಸರಿನಲ್ಲಿ ಪ್ರಸಾರ ಕಾಣಲಿದೆ. ವಿಶೇಷ ಎಂದರೆ ಕನ್ನಡ ಧಾರಾವಾಹಿಯಲ್ಲಿ ಕಥಾ ನಾಯಕನಿಗೆ ಆರ್ಯವರ್ಧನ್ ಹಾಗೂ ಕಥಾ ನಾಯಕಿಗೆ ಅನು ಸಿರಿಮನೆ ಎಂದು ಹೆಸರು ಇಡಲಾಗಿತ್ತು. ಈ ಪಾತ್ರದ ಹೆಸರನ್ನು ಹಿಂದಿ ಧಾರಾವಾಹಿಯಲ್ಲೂ ಮುಂದುವರಿಸಲಾಗಿದೆ. 'ಜೊತೆ ಜೊತೆಯಲಿ' ಧಾರಾವಾಹಿಯ ಟೈಟಲ್ ಟ್ರ್ಯಾಕ್ ಗಮನ ಸೆಳೆದಿತ್ತು. ಈ ಟೈಟಲ್ ಹಾಡು ಸೂಪರ್ ಹಿಟ್ ಆಗಿತ್ತು. ಇದೇ ಟೋನ್‌ನಲ್ಲಿ ಹಿಂದಿ ಧಾರಾವಾಹಿಯ ಹಾಡು ಮೂಡಿ ಬಂದಿದೆ. ಮ್ಯೂಸಿಕ್ ಹಾಗೆಯೇ ಇದ್ದು ಹಿಂದಿಯಲ್ಲಿ ಲಿರಿಕ್ಸ್ ಬರೆಯಲಾಗಿದೆ. ಅನೇಕರು ಇದನ್ನು ಕೇಳಿ 'ಕನ್ನಡದ ಹಾಡನ್ನು ಮತ್ತೆ ಕೇಳಿದಂತೆ ಆಗುತ್ತದೆ' ಎಂದು ಅನೇಕರು ಹೇಳಿದ್ದಾರೆ.



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966